"VARTHA JANAPADA" Monthly - Jan 2020
"ವಾರ್ತಾ ಜನಪದ" ಮಾಸಿಕ - ಜನವರಿ 2020
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No, PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



ಹೊಸ ವರ್ಷದ
ಹಾರ್ದಿಕ
ಶುಭಾಶಯಗಳು

## 2020ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

| ತಿಂಗಳುಗಳು | | | | | | | | | | | |
|---|---|---|---|---|---|---|---|---|---|---|---|
| ಜನವರಿ ಏಪ್ರಿಲ್ ಜುಲೈ | ಫೆಬ್ರವರಿ ಆಗಸ್ಟ್ | ಮಾರ್ಚ್ ನವೆಂಬರ್ | ಮೇ | ಜೂನ್ | ಅಕ್ಟೋಬರ್ | ಸೆಪ್ಟೆಂಬರ್ ಡಿಸೆಂಬರ್ | | | | | |
| ವಾರಗಳು | | | | | | | ತಾರೀಖು | | | | |
| ಬುಧ | ಶನಿ | ಭಾನು | ಶುಕ್ರ | ಸೋಮ | ಗುರು | ಮಂಗಳ | ೧ | ೮ | ೧೫ | ೨೨ | ೨೯ |
| ಗುರು | ಭಾನು | ಸೋಮ | ಶನಿ | ಮಂಗಳ | ಶುಕ್ರ | ಬುಧ | ೨ | ೯ | ೧೬ | ೨೩ | ೩೦ |
| ಶುಕ್ರ | ಸೋಮ | ಮಂಗಳ | ಭಾನು | ಬುಧ | ಶನಿ | ಗುರು | ೩ | ೧೦ | ೧೭ | ೨೪ | ೩೧ |
| ಶನಿ | ಮಂಗಳ | ಬುಧ | ಸೋಮ | ಗುರು | ಭಾನು | ಶುಕ್ರ | ೪ | ೧೧ | ೧೮ | ೨೫ | * |
| ಭಾನು | ಬುಧ | ಗುರು | ಮಂಗಳ | ಶುಕ್ರ | ಸೋಮ | ಶನಿ | ೫ | ೧೨ | ೧೯ | ೨೬ | * |
| ಸೋಮ | ಗುರು | ಶುಕ್ರ | ಬುಧ | ಶನಿ | ಮಂಗಳ | ಭಾನು | ೬ | ೧೩ | ೨೦ | ೨೭ | * |
| ಮಂಗಳ | ಶುಕ್ರ | ಶನಿ | ಗುರು | ಭಾನು | ಬುಧ | ಸೋಮ | ೭ | ೧೪ | ೨೧ | ೨೮ | * |

ರಚನೆಕಾರರು : [illegible]

* ಫೆಬ್ರವರಿ – 29 ದಿನಗಳು

downloaded from: www.kpscvaani.com




# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-

ಜನವರಿ 2020

## ಕಲಬುರಗಿ ವಿಮಾನ ನಿಲ್ದಾಣ

ಕಲ್ಯಾಣ ಕರ್ನಾಟಕದ
ಅಭಿವೃದ್ಧಿಗೆ ಹೊಸ ಆಯಾಮ



ಡಿಸೆಂಬರ್ 18 ರಂದು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದ್ದ ಪ್ರವಾಸೋದ್ಯಮ ನೀತಿ ಕುರಿತ ಕಾರ್ಯಾಗಾರವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಉದ್ಘಾಟಿಸುತ್ತಿರುವುದು. ಈ ಸಂದರ್ಭದಲ್ಲಿ ಕಂದಾಯ ಸಚಿವರಾದ ಆರ್. ಅಶೋಕ್, ಪ್ರವಾಸೋದ್ಯಮ ಸಚಿವರಾದ ಸಿ.ಟಿ.ರವಿ, ಪ್ರವಾಸೋದ್ಯಮ ವಿಷನ್ ಗ್ರೂಪ್‌ನ ಅಧ್ಯಕ್ಷರಾದ ಸುಧಾ ಮೂರ್ತಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ್‌ಭಾಸ್ಕರ್ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಅನಿಲ್ ಕುಮಾರ್, ನಿರ್ದೇಶಕರಾದ ಕೆ.ಎಸ್. ರಮೇಶ್ ಉಪಸ್ಥಿತರಿದ್ದರು.



ಡಿಸೆಂಬರ್ 17 ರಂದು ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 100 ದಿನಗಳ ಸಂಭ್ರಮಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ನವೋದ್ಯಮ ಉದ್ಯಮಿಗಳ ಜೊತೆ ಸಂವಾದ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉದ್ಘಾಟಿಸುತ್ತಿರುವುದು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳು ಹಾಗೂ ಐಟಿ ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ.ಸಿ.ಎನ್. ಅಶ್ವಥ್‌ನಾರಾಯಣ ಮತ್ತು ವಿದೇಶಿ ಗಣ್ಯ ಉದ್ಯಮಿಗಳು ಉಪಸ್ಥಿತರಿದ್ದರು.

**downloaded from: www.kpscvaani.com**



ವಿಧಾನಸೌಧದ ಮುಂಭಾಗದಲ್ಲಿ ಡಿಸೆಂಬರ್ 17 ರಂದು 88 ಹೆದ್ದಾರಿ ಸಂಚಾರಿ ಗಸ್ತು ವಾಹನಗಳನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಲೋಕಾರ್ಪಣೆ ಮಾಡಿದರು. ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ, ಶಾಸಕ ರಿಜ್ವಾನ್ ಅರ್ಷದ್, ಪೊಲೀಸ್ ಮಹಾ ನಿರ್ದೇಶಕಿ ನೀಲಮಣಿ ರಾಜು, ಗೃಹ ಇಲಾಖೆಯ ಅಪರಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಉಪಸ್ಥಿತರಿದ್ದಾರೆ.



ಬೆಂಗಳೂರಿನ ರಾಷ್ಟ್ರೀಯ ಸೈನಿಕ ಸ್ಮಾರಕದಲ್ಲಿ ಡಿಸೆಂಬರ್ 16 ರಂದು ಆಯೋಜಿಸಿದ್ದ 48 ನೇ ವಿಜಯ ದಿವಸದ ಸ್ಮರಣಾರ್ಥ ಸಮಾರಂಭದಲ್ಲಿ 'ವೀರಭೂಮಿ' ಶಿಲಾಫಲಕವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅನಾವರಣಗೊಳಿಸಿದರು. ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ, ರಾಜ್ಯಸಭಾ ಸದಸ್ಯರಾದ ರಾಜೀವ್ ಚಂದ್ರಶೇಖರ್ ಉಪಸ್ಥಿತರಿದ್ದಾರೆ.





05 ಲೋಹದ ಹಕ್ಕಿಗಳ ಹಾರಾಟ: ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮ
• ರವಿ ಮಿರಸ್ಕರ್

11 ಜನತಂತ್ರದ ದೊಡ್ಡ ಹಬ್ಬ ಗಣರಾಜ್ಯೋತ್ಸವ
• ರಮ್ಯಾ ಜಿ.ಎಸ್

18 ಸುಗ್ಗಿ ಹಬ್ಬದಲ್ಲಿ ಸಂಕ್ರಾಂತಿ ಸಂಭ್ರಮ
• ಎಸ್.ಆರ್.ಆರಾಧ್ಯ

22 ಚಿತ್ರದುರ್ಗದ ಕೃಷ್ಣರಾಜೇಂದ್ರ ಗ್ರಂಥಾಲಯದ ಹಿರಿಮೆ
• ಗೌತಮ ಸುಭಾಷ್ ರಾವ್

24 ಬಾರೆಹಣ್ಣು ಬೆಳೆದ ರೈತನಿಗೆ ಲಕ್ಷಾಂತರ ಲಾಭ
• ಭೀಮನಗೌಡ ಪಿ. ಮಂಡಲಮರಿ

26 ಕೈತೋಟದಿಂದ ಗಮನ ಸೆಳೆದ ಮಂಜರಿಕೊಪ್ಪ ಹಿರಿಯ ಪ್ರಾಥಮಿಕ ಶಾಲೆ
• ಸುಮ.ಜಿ.ಬತ್ತಿಕೊಪ್ಪ

28 ಯುವಕರ ಆರಾಧ್ಯ ದೈವ ಸುಭಾಷ್ ಚಂದ್ರ ಬೋಸ್
• ಡಾ.ಕೆ.ಪುಟ್ಟಸ್ವಾಮಿ

33 ಎಂದೂ ಬತ್ತದ ದೇವಗಂಗೆ ಕೊಳ
• ಟಿ.ಶಿವಕುಮಾರ್

35 ಮಧ್ಯವರ್ತಿಗಳ ಹಾವಳಿಗೆ ಮುಕ್ತಿ ನೀಡಿರುವ ದೇಸಿ ಸಂತೆ
• ಕೆ. ಅನಿತಾ

38 ಚಾಲುಕ್ಯ ರಾಜರ ಸಮಾಧಿಗಳ ಸುತ್ತ
• ಮಂಜುನಾಥ ಸುಳೊಳ್ಳಿ

41 ಮಹಿಳಾ ಸುರಕ್ಷತೆಗೆ ಸುರಕ್ಷಾ ಆ್ಯಪ್
• ನಾಗರತ್ನ ಜಿ. ಎಸ್.

45 ಟಿವಿ ಕಾರ್ಯಕ್ರಮಗಳ ವಿರುದ್ಧ ದೂರು ನೀಡಲು ನಿಯಂತ್ರಣ ಕೊಠಡಿ ಸ್ಥಾಪನೆ

46 ರಾಷ್ಟ್ರೀಯ ಪೊಲೀಸ್ ಸ್ಮಾರಕದಲ್ಲಿ ರಾಜ್ಯ ಕೆಎಸ್‌ಆರ್‌ಪಿ ಪಡೆಯಿಂದ ಕವಾಯತು
• ಸಿ.ಎಂ.ನವೀನ

48 ಕುಷ್ಠರೋಗಕ್ಕೆ ಬಹು ಔಷಧಿ ಚಿಕಿತ್ಸಾ ಪದ್ಧತಿ
• ಡಾ.ಎಸ್.ಎಂ.ತಿಮ್ಮಾಪುರ

50 ಪದಬಂಧ-3
• ವಿದ್ಯಾ ವಿ. ಹಾಲಭಾವಿ



ಪ್ರಧಾನ ಸಂಪಾದಕರು
ಎಸ್. ಎನ್. ಸಿದ್ದರಾಮಪ್ಪ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ


ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

**downloaded from: www.kpscvaani.com**

# ಓದುಗರಿಂದ...




ಡಿಸೆಂಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಯೇಸುಕ್ರಿಸ್ತನ ಜನ್ಮದಿನೋತ್ಸವ ದಿನದ ಅಂಗವಾಗಿ ಜನರಿಗೆ ದೇವ ಪುರುಷ ಯೇಸುವಿನ ಕುರಿತು ತಿಳಿಯಪಡಿಸಿರುವುದಕ್ಕೆ ಪತ್ರಿಕೆಯ ಸಂಪಾದಕ ಬಳಗಕ್ಕೆ ಧನ್ಯವಾದಗಳು. ಲೇಖಕರಾದ ಬಿ.ಕೆ.ರಾಜು ಅವರು ಯುಗಾರಂಭಕ, ದೇವಪುರುಷ, ಯೇಸುವಿನ ಜನನ, ಮರಣ, ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳಿಗೆ ಅತ್ಯಂತ ಮಹತ್ವವಿದೆ ಎಂಬ ಸಂದೇಶಗಳನ್ನು ಉತ್ತಮವಾಗಿ ವಿಶ್ಲೇಷಿಸಿ ಬರೆದಿದ್ದಾರೆ.

**–ಮಹದೇವಶೆಟ್ಟಿ, ಟಿ.ನರಸೀಪುರ**

ವಾರ್ತಾ ಜನಪದ ಡಿಸೆಂಬರ್ ಮಾಸ ಪತ್ರಿಕೆಯಲ್ಲಿ ಪ್ರಕಟವಾದ "ದಿನ ನೂರು ಸಾಧನೆ ನೂರಾರು" ಎಂಬ ಮುಖಪುಟ ಲೇಖನ ಸಕಾಲಿಕವಾಗಿತ್ತು. ಆಡಳಿತ ಸರ್ಕಾರದ ನೂರಾರು ಸಾಧನೆಗಳನ್ನು ಯಥಾವತ್ತಾಗಿ ವಿವರಿಸುವಂತಿತ್ತು. ಲೇಖನ ಓದಿದ ನನಗೆ ತುಂಬಾ ಸಂತೋಷವಾಯಿತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ನೂರು ದಿನಗಳ ಅವಧಿಯಲ್ಲಿ ಕೈಗೊಂಡ ನೂರಾರು ಅಭಿವೃದ್ಧಿಯ ಕಾರ್ಯಸಾಧನೆಯನ್ನು ಅನಾವರಣಗೊಳಿಸುವ ಹಾಗೂ ಅವರ ರೈತಪರ ಕಾಳಜಿಯನ್ನು ವಿವಿಧ ಕ್ಷೇತ್ರಗಳಲ್ಲಿನ ಅನುಪಮ ಸೇವೆಯನ್ನು ವಿಸ್ತೃತವಾಗಿ ವಿವರಿಸುವುದಕ್ಕೆ ಇದು ಸಹಕಾರಿಯಾಯಿತು.

'ಸಾರ್ವಜನಿಕರ ನೂರೆಂಟು ಸಮಸ್ಯೆಗಳಿಗೆ 112 ಪರಿಹಾರ' ಎಂಬ ಲೇಖನ ಕರ್ನಾಟಕ ಸರ್ಕಾರ ನೂರೆಂಟು ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದಕ್ಕೆ ಹಿಡಿದ ಕನ್ನಡಿಯಂತಿತ್ತು.

**–ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

ಈ ವರ್ಷದ ಕೃಷಿ ಮೇಳಕ್ಕೆ ಹೋಗಲಿಕ್ಕೆ ಆಗಲಿಲ್ಲ. ಆದರೆ ಡಿಸೆಂಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಪ್ರಕಟಿಸಲಾಗಿರುವ "ಹಲವು ವಿಶೇಷಗಳಲ್ಲಿ ಮಿಂದೆದ್ದ ಕೃಷಿ ಮೇಳ" ಲೇಖನ ಓದಿದ ನನಗೆ ಮೇಳಕ್ಕೆ ಹೋಗಿ ಬಂದ ಅನುಭವವಾಯಿತು. ಲೇಖನದಲ್ಲಿ ಈ ವರ್ಷದ ಮೇಳದಲ್ಲಿದ್ದ ವಿಶೇಷತೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ಲೇಖಕಿ ಹರ್ಷಿತಾ ಅವರು ನೀಡಿದ್ದಾರೆ. ಲೇಖನ ಓದಿದವರಿಗೆ ಮುಂದಿನ ವರ್ಷದ ಕೃಷಿ ಮೇಳಕ್ಕೆ ಹೋಗಲೇ ಬೇಕು, ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬಾರದು ಎನಿಸದೆ ಇರದು.

**–ಯೋಗಶ್ರೀ, ಲಕ್ಷ್ಮೀಪುರ**

ಪತ್ರಿಕೆಯ ಸಂಪಾದಕರ ಬಳಗಕ್ಕೆ 2020 ನೇ ನೂತನ ವರ್ಷದ ಹಾರ್ದಿಕ ಶುಭಾಶಯಗಳು. ನಮ್ಮ ಜನಪದ ಡಿಸೆಂಬರ್–2019 ಮಾಸಿಕದ ಮುಖಪುಟ 100 ಅಂಕಿಯೊಂದಿಗೆ ದಿನ ನೂರು ಸಾಧನೆ ನೂರಾರು ಎಂಬ ವಾಕ್ಯದೊಂದಿಗೆ ಮುದ್ದು ಮಗುವಿನ ನಗುವಿನಂತಿರುವ ಪ್ರಧಾನಮಂತ್ರಿ ಮತ್ತು ಮುಖ್ಯಮಂತ್ರಿ ಅವರ ಭಾವಚಿತ್ರವನ್ನು ನೋಡಿ ಆಹ್ಲಾದಿಸಿದೆವು. ಇನ್ನು ಒಳ ಪುಟದಲ್ಲಿ ಸಾಧನೆ ನೂರಾರು ವಿಷಯಗಳನ್ನು ಓದಿ ಪುಳಕಿತನಾದೆ. ಇಷ್ಟು ಅಲ್ಪ ಅವಧಿಯಲ್ಲೇ ನೂರಾರು ಸಾಧನೆ ಮಾಡಿರುವ ಮಾನ್ಯ ಸರ್ಕಾರಕ್ಕೆ ಅಭಿನಂದನೆಗಳನ್ನು ತಿಳಿಸುತ್ತೇನೆ.

ಹಾಗೆಯೇ ಮನುಕುಲವನ್ನು ಉದ್ಧರಿಸಲು ಅವತರಿಸಿದ ದೇವಪುರುಷ ಲೇಖನದಿಂದ ಯೇಸುಕ್ರಿಸ್ತ ಅವರು ಕಂದಾಚಾರ, ಮೂಢನಂಬಿಕೆಯಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ ಶ್ರದ್ಧೆಯನ್ನು ಗ್ರಹಿಸಿದೆವು. ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಸಾಧನೆ ತಿಳಿದು ಸಂತೋಷವಾಯಿತು.

**–ಯುವರಾಜ ಚೋಳಕೆ, ಕಲ್ಯಾಣ ನಗರ**

ಮಾನವೀಯತೆ ಗಳಿಸುತ್ತಿರುವ ಈ ದಿನಗಳಲ್ಲಿ ಮಾನವೀಯ ಮೌಲ್ಯಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಕಾಣಸಿಗುವುದು ದುರ್ಲಭವಾಗಿದೆ. ಇಂತಹ ಸಂದರ್ಭದಲ್ಲಿ ಆರೋಗ್ಯ ಸಚಿವರು ಸರ್ಕಾರಿ ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ವಾಸ್ತವ್ಯ ಮಾಡಿ ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿಗಳಿಗೆ ಚುರುಕು ಮುಟ್ಟಿಸುತ್ತಿರುವುದು ಶ್ಲಾಘನೀಯ. ಆರೋಗ್ಯ ಸಚಿವರ ಈ ವಿನೂತನ ಕಾರ್ಯಕ್ರಮದ ಮೂಲಕವಾದರೂ ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಗಳೆಂದು ಮೂಗು ಮುರಿಯುವುದನ್ನು ಬಿಟ್ಟು, ಸರ್ಕಾರವು ಜನರ ಕಲ್ಯಾಣಕ್ಕಾಗಿ ರೂಪಿಸುತ್ತಿರುವ ಯೋಜನೆಗಳ ಸದ್ವಿನಿಯೋಗಿಸಿಕೊಂಡಲ್ಲಿ ನಿಜಕ್ಕೂ ಸಾರ್ಥಕವಾಗಲಿವೆ.

ಈ ನಿಟ್ಟಿನಲ್ಲಿ "ಆಕಾಶಿರಣವಾಗುತ್ತಿರುವ ಸರ್ಕಾರಿ ಆಸ್ಪತ್ರೆಗಳು" ಲೇಖನ ಮನ ಮುಟ್ಟುವಂತೆ ಮೂಡಿ ಬಂದಿದ್ದು, ಸರ್ಕಾರಿ ಆಸ್ಪತ್ರೆಗಳು ಸಾರ್ವಜನಿಕರಿಗೆ ಸ್ಪಂದಿಸಿ, ಬಡ ಜನತೆಗೆ ಅತ್ಯುನ್ನತ ಸೇವೆ ಒದಗಿಸುವಂತಾಗಲಿ ಎಂದು ಆಶಿಸುವೆ.

**–ಪ್ರಾರ್ಥನಾ, ಮೈಸೂರು**

ಉತ್ತರ ಕರ್ನಾಟಕದಲ್ಲಾದ ಪ್ರವಾಹದಿಂದ ರೈತರು ತಮ್ಮ ಬೆಳೆಗಳನ್ನು ಕಳೆದುಕೊಂಡು ನಷ್ಟವನ್ನು ಅನುಭವಿಸಿದರೆ, ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ನಿಡಶೇಸಿ ಗ್ರಾಮದ ರೈತ ಶಮಿಹುಸೇನ್ ಅವರು ಮಳೆಯ ವಿಕೋಪದ ನಡುವೆಯೂ ಚೆಂಡು ಹೂವಿನ ಬೇಸಾಯದಿಂದ ಲಾಭ ಮಾಡಿರುವ ಲೇಖನವನ್ನು ಓದಿ ಆಶ್ಚರ್ಯವಾಯಿತು.

ಆತ್ಮವಿಶ್ವಾಸದಿಂದ ಯಾವುದೇ ಕೆಲಸವನ್ನು ಮಾಡಿದರೆ ಯಶಸ್ಸು ಕಂಡಿತ ಸಿಗುತ್ತದೆ ಎಂಬುದಕ್ಕೆ ಶಮಿಹುಸೇನ್ ಅವರೇ ಸಾಕ್ಷಿ. ವಿಕೋಪಗಳ ಸಂದರ್ಭದಲ್ಲಿ ಇವರ ಬೇಸಾಯ ಕ್ರಮವನ್ನೇ ಎಲ್ಲಾ ರೈತರು ಅಳವಡಿಸಿಕೊಂಡರೆ ಬೆಳೆ ನಷ್ಟವಾಗುವುದರಿಂದ ತಪ್ಪಿಸಿಕೊಳ್ಳಬಹುದು. ಇಂತಹ ಲೇಖನಗಳು ವ್ಯವಸಾಯದಿಂದ ಕಂಗೆಟ್ಟಿರುವ ರೈತರಿಗೆ ಸ್ಫೂರ್ತಿ ದೊರಕುತ್ತದೆ.

**– ವಿಘ್ನೇಶ್ ಕೆ.ಎಂ, ಜೇವರ್ಗಿ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

downloaded from: www.kpscvaani.com



# ಲೋಹದ ಹಕ್ಕಿಗಳ ಹಾರಾಟ

## ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮ

ರವಿ ಮಿರಸ್ಕರ್

**ರಾ**ಜ್ಯದ ಈಶಾನ್ಯ ಭಾಗದ ಬಿಸಿಲು ನಾಡು ಕಲಬುರಗಿಯಲ್ಲಿ ಲೋಹದ ಹಕ್ಕಿಗಳು ನಾಗರಿಕ ವಿಮಾನ ಹಾರಾಟ ಆರಂಭಿಸಿದ್ದರಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗಾರಿಕೆ, ವಾಣಿಜ್ಯೋದ್ಯಮ, ಪ್ರವಾಸೋದ್ಯಮ, ಹೂಡಿಕೆ, ಉದ್ಯೋಗ ಸೃಷ್ಟಿಗೆ ವಿಫುಲ ಅವಕಾಶಗಳು ತೆರೆದುಕೊಂಡು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಹೊಸ ಆಯಾಮ ದೊರಕಿದೆ. ಗಗನ ಹಾರಾಟದಿಂದ ಭವಿಷ್ಯದ ದಿನದಲ್ಲಿ ಹೆಚ್ಚಿನ ಸಾಧನೆಗೂ ರೆಕ್ಕೆಗಳು ಬಂದಿವೆ ಅಂತಲೇ ಹೇಳಬಹುದು.

ಕಲಬುರಗಿ ನಗರದಿಂದ ಸುಮಾರು 12ಕಿ.ಮೀ ದೂರದ ಪೂರ್ವ ದಿಕ್ಕಿನಲ್ಲಿರುವ ಶ್ರೀನಿವಾಸ ಸರಡಗಿ ಬಳಿ (ಕಲಬುರಗಿ–ಸೇಡಂ ರಸ್ತೆ)ಯಲ್ಲಿ 742–23 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಕಲಬುರಗಿ ಹಸಿರು ವಿಮಾನ ನಿಲ್ದಾಣವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 2019ರ ನವೆಂಬರ್ 22 ರಂದು ಲೋಕಾರ್ಪಣೆಗೊಳಿಸುವ ಮೂಲಕ ವಿಮಾನಯಾನ ಸಂಪರ್ಕದಿಂದ ಮರೀಚಿಕೆಯಾಗಿದ್ದ ಕಲ್ಯಾಣ ಕರ್ನಾಟಕ ಪ್ರದೇಶವನ್ನು ರಾಜ್ಯದ ದಕ್ಷಿಣ, ಕರಾವಳಿ, ವಾಯುವ್ಯ ಭಾಗ ಸೇರಿದಂತೆ ದೇಶದ ವಿಮಾನಯಾನ ಸಾರಿಗೆ ಸಂಪರ್ಕಕ್ಕೆ ಸೇರ್ಪಡೆ ಮಾಡಿದರು. ಇದು ಈ ಭಾಗದ ಶರವೇಗದ



ಅಭಿವೃದ್ಧಿಗೆ ಮೈಲಿಗಲ್ಲು ಎಂದೇ ಬಿಂಬಿಸಲಾಗುತ್ತಿದೆ. ಈ ಮೂಲಕ ನಾಲ್ಕು ದಶಕಗಳ ಕನಸು ನನಸಾಗಿ ಲೋಹದ ಹಕ್ಕಿಯಲ್ಲಿ ಹಾರಾಡಬೇಕೆಂಬ ಜನರ ಬಯಕೆ ಈಡೇರಿದಂತಾಗಿದೆ.

ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನವೆಂಬರ್ 22 ರಂದು ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಸಹ ಪ್ರಯಾಣಿಕರನ್ನು ಹೊತ್ತುಕೊಂಡು ಮಧ್ಯಾಹ್ನ 12.30ಕ್ಕೆ ಹೊರಟ ಸ್ಟಾರ್ ಏರ್ ಸಂಸ್ಥೆಯ OG–117 ಸಂಖ್ಯೆಯ 50 ಸೀಟರ್ ನಾಗರಿಕ ವಿಮಾನವು 1.42ಕ್ಕೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಭೂಸ್ಪರ್ಶ ಮಾಡಿತು. ಚೊಚ್ಚಲ ವಿಮಾನ ಭೂಸ್ಪರ್ಶವನ್ನು ಕಣ್ತುಂಬಿಕೊಳ್ಳಲು ದೂರದ ಊರುಗಳಿಂದ ಬಂದ ಜನರು ನೆತ್ತಿಯ ಮೇಲೆ ಬಂದಿದ್ದ ಸೂರ್ಯನನ್ನು ಲೆಕ್ಕಿಸದೆ ಗಗನದೆಡೆಗೆ ಕಣ್ಣು ಹಾಯಿಸಿದರು. ವಿಮಾನ ನೆಲಕ್ಕೆ ಸ್ಪರ್ಶಿಸುತ್ತಿದ್ದಂತೆ ಜನರು ಕೇಕೆ ಹಾಕುತ್ತಾ ಸಂಭ್ರಮದಲ್ಲಿ ತೇಲಾಡಿದರು. ವಿಮಾನದಲ್ಲಿ ಹಾರಾಡಿದಷ್ಟು ಖುಷಿ ನೆರೆದಿದ್ದವರ ಮುಖದಲ್ಲಿ ಕಂಡಿತು. ಶಿಳ್ಳೆ, ಚಪ್ಪಾಳೆಗಳ ಭೋರ್ಗರೆತ ಜೋರಾಗಿತ್ತು. ತವರು ನೆಲಕ್ಕೆ ವಿಮಾನದಲ್ಲಿ ಬಂದ ಪ್ರಯಾಣಿಕರು ಪೈಲಟ್ ಮತ್ತು ವಿಮಾನದೊಂದಿಗೆ ಸೆಲ್ಫಿ ಕ್ಲಿಕ್ಕಿಸಿ ಸಂತಸಪಟ್ಟರು. ಟರ್ಮಿನಲ್ ಟಿಕೆಟ್ ಕೌಂಟರ್ ಆವರಣವನ್ನು ಬಲೂನ್, ಹೂವುಗಳಿಂದ ಸಿಂಗರಿಸಲಾಗಿತ್ತು. ರಟ್ಟಿನಿಂದ ವಿಮಾನ ಮಾದರಿ ಮಾಡಿ ಸೆಲ್ಫಿ ಸ್ಪಾಟ್ ಸೃಷ್ಟಿಸಿದ್ದರಿಂದ ಫೋಟೊ ತೆಗೆಸಿಕೊಳ್ಳಲು ಜನರು ಮುಗಿಬಿದ್ದರು.




**ಭೌಗೋಳಿಕ ಸೂಚ್ಯಂಕ ದೊರೆತಿರುವ ಇಲ್ಲಿನ ತೊಗರಿ ರಫ್ತಿಗೂ ಅನುಕೂಲವಾಗುವುದರಿಂದ ರೈತರಲ್ಲಿ ಮಂದಹಾಸ ಮೂಡಿದರೆ ಸಿಮೆಂಟ್ ಉದ್ಯಮಿಗಳಲ್ಲಿ ಹರ್ಷ ಮನೆ ಮಾಡಿದೆ. ಸೂಫಿ, ಶರಣ–ಸಂತರ ನಾಡಿನ ಪ್ರವಾಸೋದ್ಯಮಕ್ಕೂ ಗಗನ ಸಂಪರ್ಕವು ಬೂಸ್ಟ್ ನೀಡುವುದಲ್ಲದೆ ತಲಾ ಆದಾಯ ವೃದ್ಧಿಯಾಗುವ ಆಶಾಭಾವನೆ ಹುಟ್ಟಿಕೊಂಡಿದೆ.**

ರಾಜ್ಯದ ಉಪಮುಖ್ಯಮಂತ್ರಿಗಳು, ಸಮಾಜ ಕಲ್ಯಾಣ ಮತ್ತು ಲೋಕೋಪಯೋಗಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಗೋವಿಂದ ಕಾರಜೋಳ, ಸಚಿವರುಗಳಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಪ್ರಭು ಚವ್ಹಾಣ, ಜಿ.ಪಂ. ಅಧ್ಯಕ್ಷೆ ಸುವರ್ಣಾ ಹಣಮಂತರಾಯ ಮಲಾಜಿ, ಸಂಸದರಾದ ಡಾ.ಉಮೇಶ ಜಾಧವ, ಭಗವಂತ ಖೂಬಾ, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಶಾಸಕರುಗಳು, ಎಎಐ ಅಧ್ಯಕ್ಷ ಅರವಿಂದ್ ಸಿಂಗ್, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಕಪಿಲ ಮೋಹನ, ಪ್ರಾದೇಶಿಕ ಆಯುಕ್ತ ಸುಬೋಧ ಯಾದವ, ಜಿಲ್ಲಾಧಿಕಾರಿ ಶರತ್. ಬಿ, ಕಲಬುರಗಿ ವಿಮಾನ ನಿಲ್ದಾಣದ ಎಎಐ ನಿರ್ದೇಶಕ ಜ್ಞಾನೇಶ್ವರ ರಾವ್, ಜಿಲ್ಲೆಯ ಇತರೆ ಜನಪ್ರತಿನಿಧಿಗಳು, ಉದ್ಯಮಿಗಳು, ಗಣ್ಯರು ಸೇರಿದಂತೆ ಸಹಸ್ರಾರು




ಸಂಖ್ಯೆಯಲ್ಲಿ ಸೇರಿದ ಜನಸ್ತೋಮ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.

ಸ್ಟಾರ್ ಏರ್ ಸಂಸ್ಥೆಯ ಕ್ಯಾಪ್ಟನ್ ದಿಲ್ ಬಾಗ್ ಸಿಂಗ್ ಹಾಗೂ ಬೀದರ ಮೂಲದ ಬೆಂಗಳೂರು ನಿವಾಸಿ ಕೋ ಪೈಲಟ್ ಹೃಷಿಕೇಶ್ ವಿ. ಪಾಟೀಲ್ ಅವರು ಪ್ರಪ್ರಥಮವಾಗಿ ನಾಗರಿಕ ವಿಮಾನವನ್ನು ಭೂಮಿಗೆ ಇಳಿಸುತ್ತಿದ್ದಂತೆ ವಿಮಾನಕ್ಕೆ ನೀರು ಚಿಮ್ಮಿಸುವ ಮೂಲಕ ಪ್ರಯಾಣಿಕರಿಗೆ ವಾಟರ್ ಸಲ್ಯೂಟ್ ನೀಡಿದ್ದು ವಿಶೇಷವಾಗಿತ್ತು.

ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆ ಉಡಾನ್ 3.0 (ಉಡಾನ್–ಉಡೇ ದೇಶ್ ಕಾ ಆಮ್ ನಾಗರಿಕ್) ಯೋಜನೆಯಡಿ ಕಲಬುರಗಿ ವಿಮಾನ ನಿಲ್ದಾಣ ಆಯ್ಕೆಯಾಗಿದೆ. ಆರಂಭಿಕವಾಗಿ ಕಲಬುರಗಿ ವಿಮಾನ ನಿಲ್ದಾಣದಿಂದ ಕಾರ್ಯಾಚರಣೆಗೆ ಬೆಂಗಳೂರು–ಕಲಬುರಗಿ–ಬೆಂಗಳೂರು, ಕಲಬುರಗಿ–ಹಿಂಡನ್(ನವ ದೆಹಲಿ)–ಕಲಬುರಗಿ ಹಾಗೂ ಕಲಬುರಗಿ–ತಿರುಪತಿ–ಕಲಬುರಗಿ ಮಾರ್ಗದಲ್ಲಿ ನಾಗರಿಕ ವಿಮಾನ ಸಂಚಾರಕ್ಕೆ ಡಿಜಿಸಿಎ (ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್) ದಿಂದ ಒಪ್ಪಿಗೆಯೂ ಲಭಿಸಿದೆ.

ಸ್ಟಾರ್ ಏರ್ ಸಂಸ್ಥೆಯು ಪ್ರಸ್ತುತ ವಾರದಲ್ಲಿ ಸೋಮವಾರ, ಶುಕ್ರವಾರ ಮತ್ತು ಶನಿವಾರ ಹೀಗೆ ಮೂರು ದಿನ ಬೆಂಗಳೂರು–ಕಲಬುರಗಿ–ಬೆಂಗಳೂರು ನಡುವೆ ನೇರ ನಾಗರಿಕ ವಿಮಾನ ಕಾರ್ಯಾಚರಣೆ ಆರಂಭಿಸಿದ್ದು, ಬಹುತೇಕ ಟಿಕೆಟ್‌ಗಳು ಮುಂಗಡವಾಗಿ ಕಾಯ್ದಿರಿಸಲಾಗುತ್ತಿದೆ. ಸಂಚಾರ ದಟ್ಟಣೆಯ








downloaded from: www.kpscvaani.com



## ವಿಮಾನ ನಿಲ್ದಾಣದ ಹೆಜ್ಜೆ ಗುರುತುಗಳು

- ಕಲಬುರಗಿಯಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಬೇಕು ಎಂದು ಕೂಗು ಕೇಳಿಬಂದಿದ್ದು 1980ರಲ್ಲಿ.
- ಪ್ರಾದೇಶಿಕ ಸಂಪರ್ಕ ಉತ್ತಮಗೊಳಿಸಲು ರಾಜ್ಯ ಸರ್ಕಾರವು ನವೆಂಬರ್ 15, 2007ರಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲು ನಿರ್ಧರಿಸಿತು.
- ಜೂನ್ 14, 2008ರಂದು ವಿಮಾನ ನಿಲ್ದಾಣ ಕಾಮಗಾರಿಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಶಂಕುಸ್ಥಾಪನೆ.
- ಆಗಸ್ಟ್ 26, 2018 ರಂದು ಹೈದ್ರಾಬಾದಿನ ಖಾಸಗಿ ಸಂಸ್ಥೆಯಾದ ಏಶಿಯನ್ ಪೆಸಿಫಿಕ್ ಫ್ಲೈಟ್ ಟ್ರೇನಿಂಗ್ ಅಕಾಡೆಮಿಗೆ ಸೇರಿದ ಡೈಮಂಡ್ ಡಿಎ–40 ಮತ್ತು ಡೈಮಂಡ್ ಡಿಎ–42 ಸ್ವರೂಪದ 4 ಆಸನವುಳ್ಳ ಎರಡು ಲಘು ವಿಮಾನಗಳಿಂದ ಯಶಸ್ವಿಯಾಗಿ ಪ್ರಾಯೋಗಿಕ ವಿಮಾನ ಹಾರಾಟ.
- ಆಗಸ್ಟ್ 24, 2019 ರಂದು ವಿಮಾನ ನಿಲ್ದಾಣದ ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಕರ್ನಾಟಕ ಸರ್ಕಾರವು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದೊಂದಿಗೆ ಒಪ್ಪಂದ.
- ಸೆಪ್ಟೆಂಬರ್ 13, 2019 ರಂದು ಒಪ್ಪಂದದಂತೆ ಏಎಐಗೆ ಭೌತಿಕ ಜಮೀನು ಹಸ್ತಾಂತರ.
- ಅಕ್ಟೋಬರ್ 30, 2019 ರಂದು ಕಲಬುರಗಿ ವಿಮಾನ ನಿಲ್ದಾಣದಿಂದ ನಾಗರಿಕ ವಿಮಾನ ಸಂಚಾರ ನಡೆಸಲು ಎಎಐಗೆ ಡಿಜಿಸಿಎದಿಂದ ಏರೋಡ್ರೋಮ್ ಲೈಸೆನ್ಸ್ ನೀಡಿಕೆ.
- ನಾಗರಿಕ ವಿಮಾನಯಾನ ಕಾರ್ಯಾಚರಣೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ IATA (ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್) ದಿಂದ GBI ಹಾಗೂ ICAO (ಇಂಟರ್‌ನ್ಯಾಷನಲ್ ಸಿವಿಲ್ ಏವಿಯೇಷನ್ ಆರ್ಗನೈಸೇಷನ್) ದಿಂದ VOGB ಎಂದು ಏರ್‌ಪೋರ್ಟ್ ಕೋಡ್ ನೀಡುವ ಮೂಲಕ ಗಗನ ಹಾರಾಟಕ್ಕೆ ಗ್ರೀನ್ ಸಿಗ್ನಲ್.
- ನವೆಂಬರ್ 22, 2019 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಲೋಕಾರ್ಪಣೆ.



downloaded from: www.kpscvaani.com



ಪರಿಣಾಮ ಶೀಘ್ರದಲ್ಲಿಯೆ ಅಲೈಯನ್ಸ್ ಏರ್ ಸೇರಿದಂತೆ ಇನ್ನಿತರ ವಿಮಾನ ಸಂಸ್ಥೆಗಳು ಇಲ್ಲಿಂದ ಕಾರ್ಯಾಚರಣೆ ನಡೆಸಲು ಉತ್ಸುಕವಾಗಿವೆ.

ಬೆಂಗಳೂರು, ಮುಂಬೈ ಹಾಗೂ ಹೈದ್ರಾಬಾದ್ ಮೆಟ್ರೋ ನಗರಗಳನ್ನು ಸುತ್ತ ಆವರಿಸಿಕೊಂಡಿರುವ ಕಲಬುರಗಿ ವಿಭಾಗೀಯ ಕೇಂದ್ರದಿಂದ ಸಾರ್ವಜನಿಕರು ಬೆಂಗಳೂರು, ಹೈದ್ರಾಬಾದ್, ಮುಂಬೈ, ನವದೆಹಲಿಗೆ ದಿನನಿತ್ಯ ರೈಲಿನ ಮೂಲಕ ತೆರಳುವವರ ಸಂಖ್ಯೆ ಹೆಚ್ಚಿದ್ದು, ರಸ್ತೆ, ರೈಲು ಸಾರಿಗೆ ಬಿಟ್ಟರೆ ಬೇರೆ ಮಾರ್ಗವಿರಲಿಲ್ಲ. ಇದೀಗ ಕಲಬುರಗಿ ವಿಮಾನ ನಿಲ್ದಾಣ ಸ್ಥಾಪನೆಯಿಂದ ಪ್ರಯಾಣಕ್ಕೆ ಮತ್ತೊಂದು ಮಾರ್ಗ ಲಭಿಸಿದಂತಾಗಿದೆ. ವಾಣಿಜ್ಯ ಕಾರ್ಯಾಚರಣೆ ಆರಂಭದಿಂದ ಈ ಭಾಗದ ಅಭಿವೃದ್ಧಿಯಲ್ಲಿ ಹೊಸ ಶಖೆಯನ್ನು ಕಾಣಬಹುದಾಗಿದೆ.



ರಸ್ತೆ ಸಾರಿಗೆ ಮತ್ತು ವಿಮಾನಯಾನ ಸಾರಿಗೆ ಸಂಪರ್ಕ ನೆಪವೊಡ್ಡಿ ಈಶಾನ್ಯ ಭಾಗದಲ್ಲಿ ಬಂಡವಾಳ ಹಾಕಲು ಕೈಗಾರಿಕೋದ್ಯಮಿಗಳು ಹಿಂದೇಟು ಹಾಕುವ ಕಾಲವಿತ್ತು. ಆದರೀಗ ಕಲಬುರಗಿ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಉತ್ತಮ ರಸ್ತೆ ಸಂಪರ್ಕದ ಜೊತೆ ಕಲಬುರಗಿ ವಿಮಾನ ನಿಲ್ದಾಣ ಸ್ಥಾಪನೆಯಿಂದ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು ದೇಶ–ವಿದೇಶಗಳಿಂದ ಕೈಗಾರಿಕೋದ್ಯಮಿಗಳಿಗೆ ಹೂಡಿಕೆ ಮಾಡಲು ವಿಫುಲ ಅವಕಾಶ ನೀಡಿದಂತಾಗಿದೆ. ಸ್ಥಳೀಯವಾಗಿ ಉದ್ಯೋಗವಕಾಶಗಳು ಹೆಚ್ಚಲಿವೆ. ಕಲಬುರಗಿಯಲ್ಲಿ ರಾಷ್ಟ್ರೀಯ ಬಂಡವಾಳ ಹೂಡಿಕೆ ಮತ್ತು ಉತ್ಪಾದನಾ ವಲಯ (ನಿಮ್ಜ್) ಸ್ಥಾಪನೆಗೆ 2013ರಲ್ಲಿ ಕೇಂದ್ರ ಸರ್ಕಾರ ಘೋಷಿಸಿತ್ತು, ಇದೀಗ ಇದರ ಕೂಗು ಬಲವಾಗಿ ಕೇಳಬರುತ್ತಿದೆ.

ಭೌಗೋಳಿಕ ಸೂಚ್ಯಂಕ ದೊರೆತಿರುವ ಇಲ್ಲಿನ ತೊಗರಿ







ರಫ್ತಿಗೂ ಅನುಕೂಲವಾಗುವುದರಿಂದ ರೈತರಲ್ಲಿ ಮಂದಹಾಸ ಮೂಡಿದರೆ ಸಿಮೆಂಟ್ ಉದ್ಯಮಿಗಳಲ್ಲಿ ಹರ್ಷ ಮನೆ ಮಾಡಿದೆ. ಸೂಫಿ, ಶರಣ-ಸಂತರ ನಾಡಿನ ಪ್ರವಾಸೋದ್ಯಮಕ್ಕೂ ಗಗನ ಸಂಪರ್ಕವು ಬೂಸ್ಟ್ ನೀಡುವುದಲ್ಲದೆ ತಲಾ ಆದಾಯ ವೃದ್ಧಿಯಾಗುವ ಆಶಾಭಾವನೆ ಹುಟ್ಟಿಕೊಂಡಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ, ಆರೋಗ್ಯ, ಪ್ರವಾಸೋದ್ಯಮ ಹೀಗೆ ಕಲ್ಯಾಣ ಪ್ರದೇಶವು ಎಲ್ಲಾ ಕ್ಷೇತ್ರಗಳಲ್ಲಿ ಗಣನೀಯ ಬದಲಾವಣೆ ಕಂಡು ನಿಜ ಅರ್ಥದಲ್ಲಿ "ಜನರ ಕಲ್ಯಾಣ"ವಾಗಲಿದೆ ಎಂಬ ನಿರೀಕ್ಷೆ ಇಲ್ಲಿನವರದ್ದಾಗಿದೆ.

**181 ಕೋಟಿ ರೂ. ವೆಚ್ಚದ ಯೋಜನೆ:** ರಾಜ್ಯ ಸರ್ಕಾರದ ವಿಶೇಷ ಮುತುವರ್ಜಿಯಿಂದ ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಕಲಬುರಗಿ ವಿಮಾನ ನಿಲ್ದಾಣವನ್ನು 181 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿದೆ. ಇದರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 58.52 ಕೋಟಿ ರೂ. ಅನುದಾನ ನೀಡುವುದರ ಮೂಲಕ ಹಿಂದುಳಿದ ಪ್ರದೇಶದ ಅಭಿವೃದ್ಧಿಯ ಬದಲಾವಣೆಗೆ ಅದು ನೆರವಾಗಿದೆ.

**2ನೇ ದೊಡ್ಡ ರನ್‌ವೇ:** ಕಲಬುರಗಿ ಹಸಿರು ವಿಮಾನ ನಿಲ್ದಾಣದ ಭವಿಷ್ಯದ ದೃಷ್ಟಿಯಿಂದ ಜೆಟ್ ಸೇರಿದಂತೆ ಏರ್ ಬಸ್‌ನಂತಹ ಬೃಹತ್ ವಿಮಾನಗಳು ಸಹ ಇಲ್ಲಿ ಬಂದಿಳಿಯಲು ಅನುವಾಗುವಂತೆ 3.175 ಕಿ.ಮಿ. ಉದ್ದದ ರನ್‌ವೇಯನ್ನು ಸಿದ್ಧಪಡಿಸಲಾಗಿದೆ. ಬೆಂಗಳೂರು ಹೊರತುಪಡಿಸಿದರೆ ಕಲಬುರಗಿ ವಿಮಾನ ನಿಲ್ದಾಣ ರಾಜ್ಯದ 2ನೇ ಮತ್ತು ರಾಷ್ಟ್ರದ 10ನೇ ಅತಿ ದೊಡ್ಡ ರನ್‌ವೇಯಾಗಿದೆ. ರಾಜ್ಯದ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಮೈಸೂರು ಹೊರತುಪಡಿಸಿದರೆ ನಾಗರಿಕ ವಿಮಾನ ಸಂಚಾರ ಕಾರ್ಯಾಚರಣೆ ಮಾಡುತ್ತಿರುವ ಕಲಬುರಗಿ 6ನೇ ವಿಮಾನ ನಿಲ್ದಾಣವಾಗಿದೆ.

**ಹಸಿರು ವಿಮಾನ ನಿಲ್ದಾಣದ ಹೈಲೈಟ್ಸ್:** ಭೌಗೋಳಿಕ ನಿರ್ದೇಶಾಂಕದ ಅಕ್ಷಾಂಶ 17ಲಿ18'28"ಓ ರೇಖಾಂಶ 76ಲಿ57'29"ಇ ರಲ್ಲಿ 742-23 ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿರುವ ವಿಮಾನ ನಿಲ್ದಾಣದ ರನ್‌ವೇ 3175 ಮೀ. ಉದ್ದ ಹಾಗೂ 45 ಮೀ. ಅಗಲ ಹೊಂದಿದೆ. 460 ಎಕರೆ ಪ್ರದೇಶವನ್ನು ವಿಮಾನ ನಿಲ್ದಾಣಕ್ಕೆ ಬಳಸಿಕೊಳ್ಳಲಾಗಿದ್ದು, ಇದರಲ್ಲಿ ಟರ್ಮಿನಲ್ ಕಟ್ಟಡದ ವಿಸ್ತೀರ್ಣ 2173 ಚ.ಮೀ. ಇದೆ. ಎ320, ಬಿ737 ಎ.ಟಿ.ಆರ್ ಮಾದರಿಯ ಮೂರು ವಿಮಾನಗಳು ಏಕಕಾಲದಲ್ಲಿ ನಿಲುಗಡೆಗೆ 153.8 ಮೀ. X 103.8 ಮೀ. ಏಪ್ರನ್ ನಿರ್ಮಿಸಲಾಗಿದೆ. ಸಂಚಾರ ದಟ್ಟಣೆಯ ಸಮಯದಲ್ಲಿ ಒಟ್ಟಾಗಿ 100 ಪ್ರಯಾಣಿಕರ ನಿರ್ವಹಣೆಯ ಸಾಮರ್ಥ್ಯ ಹೊಂದಿದ್ದು, 3 ತಪಾಸಣೆ ಕೌಂಟರ್‌ಗಳು, 2 ಬ್ಯಾಗೇಜ್ ಕನ್ವೇಯರ್ಸ್ ಬೆಲ್ಟ್‌ಗಳು, ಪ್ರಯಾಣಿಕರ ತಂಗುವಿಕೆಗೆ ಸುಸಜ್ಜಿತ 1 ಲಾಂಜ್, 200 ಕಾರುಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸುರಕ್ಷತಾ ದೃಷ್ಟಿಯಿಂದ ರನ್‌ವೇಯಿಂದ ವಿಮಾನ ಮುಂದೆ ಬಂದಲ್ಲಿ ಅದನ್ನು ತಡೆಯಲು ಎರಡು ಬದಿಯಲ್ಲಿ 240 ಮೀ. X 90 ಮೀ. ರೀಸಾ (ರನ್‌ವೇ ಎಂಡ್ ಸೇಫ್ಟಿ ಏರಿಯಾ) ನಿರ್ಮಿಸಲಾಗಿದೆ. ರಾಜ್ಯದಲ್ಲಿರುವ ಇತರೆ ಪ್ರಾದೇಶಿಕ ವಿಮಾನ ನಿಲ್ದಾಣಗಳು ಕ್ರಮೇಣವಾಗಿ ಅಭಿವೃದ್ಧಿಗೊಂಡರೆ ಕಲಬುರಗಿ ವಿಮಾನ ನಿಲ್ದಾಣ ಮಾತ್ರ ಆರಂಭದಲ್ಲಿಯೇ ಸಕಲ ವ್ಯವಸ್ಥೆಯೊಂದಿಗೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿರುವುದು ವಿಶೇಷ.

ಕಲಬುರಗಿ ವಿಮಾನ ನಿಲ್ದಾಣಕ್ಕೆ 2008ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದ ತಾವೇ, ನಿಲ್ದಾಣವನ್ನು ಲೋಕಾರ್ಪಣೆ ಮಾಡಿರುವುದಕ್ಕೆ ಉದ್ಘಾಟನಾ ಸಮಾರಂಭದಲ್ಲಿ ಧನ್ಯತಾ ಭಾವ ವ್ಯಕ್ತಪಡಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಈಶಾನ್ಯ ಭಾಗವು ರಸ್ತೆ ಸಾರಿಗೆ ಜೊತೆ ವಾಯು ಸಾರಿಗೆ ಸಂಪರ್ಕಕ್ಕೆ ಬಂದಿದೆ. ದೇಶ, ವಿದೇಶದಿಂದ ಉದ್ಯಮಿಗಳು ಇಲ್ಲಿ ಹಣ ಹೂಡಿಕೆ ಮಾಡಲಿದ್ದು, ಉದ್ಯೋಗ ಸೃಷ್ಟಿ ಸೇರಿದಂತೆ ಕಲ್ಯಾಣ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಈ ವಿಮಾನ ನಿಲ್ದಾಣ ಹೊಸ ಅಧ್ಯಾಯ ನಿರ್ಮಿಸಲಿದೆ. ದೇಶಕ್ಕೆ ಶೇ.30ರಷ್ಟು ತೊಗರಿ ಉತ್ಪಾದಿಸುವ ಮತ್ತು ಸಿಮೆಂಟ್ ರಫ್ತಿನಿಂದಲೇ ವಿಶ್ವದಾದ್ಯಂತ ಗಮನ ಸೆಳೆದಿರುವ ಜಿಲ್ಲೆ ಕಲಬುರಗಿ. ಇಲ್ಲಿನ ವಿಮಾನ ನಿಲ್ದಾಣವನ್ನು ಭವಿಷ್ಯದಲ್ಲಿ ಸರಕು ಸಾಗಣೆಗೂ ಬಳಸಿಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಾಗಿ ತಿಳಿಸಿದರು.





# ಜನತಂತ್ರದ ದೊಡ್ಡ ಹಬ್ಬ
# ಗಣರಾಜ್ಯೋತ್ಸವ

ರಮ್ಯಾ.ಜಿ.ಎಸ್

ದೇಶದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆ ಸಾರುವ ವೈವಿಧ್ಯಮಯ ದೃಶ್ಯಗಳು ಗಣರಾಜ್ಯೋತ್ಸವ ದಿನದಂದು ನಡೆಯುವ ಭವ್ಯ ಸಮಾರಂಭದಲ್ಲಿ ಕಣ್ಮನ ಸೆಳೆಯಲಿವೆ. ಭೂಸೇನೆ, ವಾಯುಪಡೆ ಮತ್ತು ನೌಕಾದಳದ ದೈತ್ಯ ಶಕ್ತಿಯ ಅನಾವರಣವಾಗಲಿದೆ. ಅಲ್ಲದೇ ವಿವಿಧ ರಾಜ್ಯಗಳ, ಇಲಾಖೆಗಳ ಸ್ತಬ್ಧಚಿತ್ರಗಳ ವೈವಿಧ್ಯಮಯ ಪ್ರದರ್ಶನ ದೇಶದ ಸಂಸ್ಕೃತಿಯನ್ನು ಪರಿಚಯಿಸಲಿದೆ. ಈ ಅತ್ಯಾಕರ್ಷಕ ಸಮಾರಂಭ ಜನರ ಕಣ್ಮನ ಸೆಳೆಯಲಿದೆ.

ಈ ಮಹಾ ಉತ್ಸವದ ಭವ್ಯ ಸಮಾರಂಭ ಕೇವಲ ಒಂದೆರಡು ತಿಂಗಳ ಪ್ರಯತ್ನದ ಫಲವಲ್ಲ. ದೇಶದ ಅತಿದೊಡ್ಡ ರಾಷ್ಟ್ರೀಯ ಹಬ್ಬದ ಉತ್ಸವಕ್ಕೆ ಸುಮಾರು ಆರೇಳು ತಿಂಗಳು ಮೊದಲೇ ರೂಪುರೇಷೆಗಳು ಆರಂಭವಾಗುತ್ತವೆ. ಗಣರಾಜ್ಯೋತ್ಸವದ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆಯುವ ಪ್ರಧಾನ ಸಮಾರಂಭದಲ್ಲಿ ಸೇನಾಪಡೆಗಳ ಕವಾಯತ್ತಿನ ಜೊತೆಗೆ ವಿವಿಧ ರಾಜ್ಯಗಳು ಮತ್ತು ಇಲಾಖೆಗಳ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯಲಿದೆ. ಇದಕ್ಕಾಗಿ ರೂಪಿಸಲಾಗಿರುವ ವಿಶೇಷ ಸಮಿತಿ ನೀಡುವ ಮಾನದಂಡಗಳನ್ನು ಅನುಸರಿಸಿ ರಾಜ್ಯಗಳು ತಮ್ಮ ತಮ್ಮ ವಿನ್ಯಾಸವನ್ನು ನೀಡಲಿವೆ. ಇದರಲ್ಲಿ ಆಯ್ಕೆಯಾದ ವಿನ್ಯಾಸ, ಗಣರಾಜ್ಯದ ಉತ್ಸವದಲ್ಲಿ ಟ್ಯಾಬ್ಲೋ ರೂಪದಲ್ಲಿ ಪ್ರದರ್ಶಿತಗೊಳ್ಳಲಿವೆ.





downloaded from: www.kpscvaani.com

"ಸಮಾನತೆಯ ರಥವನ್ನು ಇಲ್ಲಿಯವರೆಗೆ ಎಳೆದುಕೊಂಡು ಬಂದಿದ್ದೇನೆ. ಸಾಧ್ಯವಾದರೆ ಈ ರಥವನ್ನು ಒಂದಿಂಚಾದರೂ ಮುಂದಕ್ಕೆ ತಳ್ಳಿ, ಆದರೆ ಯಾವುದೇ ಕಾರಣಕ್ಕೂ ಹಿಂದಕ್ಕೆ ತಳ್ಳಬೇಡಿ"

– ಡಾ। ಬಿ. ಆರ್. ಅಂಬೇಡ್ಕರ್



ಗಣರಾಜ್ಯೋತ್ಸವ ಸಮಾರಂಭ ಪೂರ್ಣವಾಗಿ ರಕ್ಷಣಾ ಇಲಾಖೆಯಡಿಯಲ್ಲಿ ನಡೆಯುತ್ತದೆ. ಅಂದರೆ ಉತ್ಸವದ ಸಿದ್ಧತೆಯ ಹಂತದಿಂದ ಹಿಡಿದು ಉತ್ಸವ ಮುಗಿಯುವವರೆಗೂ ಎಲ್ಲ ಹಂತಗಳ ಮೇಲೂ ರಕ್ಷಣಾ ಇಲಾಖೆ ನಿಗಾ ವಹಿಸಲಿದೆ. ಎಲ್ಲ ಪ್ರಕ್ರಿಯೆಗಳೂ ಅತ್ಯಂತ ಶಿಸ್ತುಬದ್ಧವಾಗಿ ನಡೆಯಲಿವೆ. ಆಯ್ಕೆ ಸಮಿತಿಯಲ್ಲಿ ಕಲೆ, ಕ್ರೀಡೆ ಹೀಗೆ ಎಲ್ಲ ವಲಯಗಳ ತಜ್ಞರಿದ್ದು ರಕ್ಷಣಾ ಇಲಾಖೆ ಅವರಿಗೆ ವಿಶೇಷ ಭದ್ರತೆ ಒದಗಿಸುತ್ತದೆ. ಅಲ್ಲದೇ ಸಮಾರಂಭದಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಭದ್ರತೆ, ಆತಿಥ್ಯ ನೀಡುತ್ತದೆ, ಅದೇ ರೀತಿ ಎಲ್ಲರಲ್ಲೂ ಶಿಸ್ತನ್ನು ಬಯಸುತ್ತದೆ.

**ಸ್ತಬ್ಧಚಿತ್ರ** : ಗಣರಾಜ್ಯೋತ್ಸವದ ಪ್ರಮುಖ ಆಕರ್ಷಣೆಯಾದ ಟ್ಯಾಬ್ಲೋಗಳ ರಚನಾ ಪ್ರಕ್ರಿಯೆ ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಆರಂಭವಾಗುತ್ತದೆ. ಈ ಸ್ತಬ್ಧಚಿತ್ರಗಳು ಆಯಾ ರಾಜ್ಯಗಳ ಕಲೆ, ಸಂಸ್ಕೃತಿ, ಇತಿಹಾಸ, ಸಂಸ್ಕೃತಿ ಬಿಂಬಿಸುತ್ತವೆ. ಗಣರಾಜ್ಯ ದಿನದಂದು ಭಾಗವಹಿಸುವ ಸ್ತಬ್ಧಚಿತ್ರಗಳ ವಿನ್ಯಾಸವನ್ನು, ಇದಕ್ಕಾಗಿರುವ ವಿಶೇಷ ಸಮಿತಿಗೆ ರಾಜ್ಯಗಳು ಸಲ್ಲಿಸಬೇಕಿದೆ. ಈ ವಿನ್ಯಾಸಗಳು 45 ಇಂಚು ಅಳತೆಯಲ್ಲಿ ಕೈಬರಹದಲ್ಲಿರಬೇಕು. ಈ ವಿನ್ಯಾಸ ಆಯ್ಕೆಯಾದಲ್ಲಿ ಇದೇ ವಿನ್ಯಾಸ ಒಂದು ಚೂರು ಭಿನ್ನವಾಗದಂತೆ ಅದರ ಅಳತೆ ಅನುಪಾತಕ್ಕೆ ತಕ್ಕಂತೆ ಮುಂದೆ 45 ಅಡಿಗಳ ಟ್ಯಾಬ್ಲೋ ಆಗಿ






ಜನರ ಮನಸ್ಸನ್ನು ಸೆಳೆಯಲಿವೆ. 45 ಅಡಿಗಳ ಟ್ಯಾಬ್ಲೋ ರೂಪುಗೊಳ್ಳುವ ಮುನ್ನ ಅದರ ಚಿಕ್ಕ ಭೌತಿಕ ಮಾದರಿ ಸಿದ್ಧವಾಗಿ ಸಮಿತಿ ಸಲ್ಲಿಕೆಯಾಗಿ ಸಮಿತಿಯ ಸಲಹೆಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಅಂತಿಮವಾಗಿ ಸ್ತಬ್ಧಚಿತ್ರ ಸಾಗುವ ವಾಹನ, ಅದರಲ್ಲಿ ತಯಾರಿಕೆಗೆ ಬಳಸುವ ವಸ್ತುಗಳು ಎಲ್ಲವೂ ರಕ್ಷಣಾ ಇಲಾಖೆ ನೀಡುವ, ಅನುಮತಿಸುವ ವಸ್ತುಗಳು ಮಾತ್ರ ಒಳಗೊಂಡಿರುತ್ತದೆ. ವಿನ್ಯಾಸದ ರಚನೆಯಲ್ಲಿ ತಂತ್ರಜ್ಞರು, ಶಿಲ್ಪಿಗಳು, ವೆಲ್ಡರ್, ಮೌಲ್ಡರ್‌ಗಳು ಪ್ರಮುಖವಾಗಿ ಕಾರ್ಯನಿರ್ವಹಿಸುತ್ತಾರೆ.

ಈ ಎಲ್ಲ ಹಂತಗಳಲ್ಲಿ ರಾಜ್ಯದ ಸಂಬಂಧಪಟ್ಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರು ಅತ್ಯಂತ ಮುತುವರ್ಜಿವಹಿಸಿ ಸ್ತಬ್ಧಚಿತ್ರ ಉತ್ತಮವಾಗಿ ಪ್ರದರ್ಶಿತಗೊಳ್ಳುವಂತಾಗಲು ಶ್ರಮಿಸುತ್ತಾರೆ. ಇವರೆಲ್ಲರ ಪರಿಶ್ರಮದ ಫಲವಾಗಿ ರಾಜ್ಯದ ಸಂಸ್ಕೃತಿ ಆಕರ್ಷಕ ಸಮಾರಂಭದಲ್ಲಿ ಅನಾವರಣವಾಗುತ್ತದೆ.

ಇನ್ನು ಸ್ತಬ್ಧಚಿತ್ರದ ಹಿನ್ನೆಲೆ ಗಾಯನ ಕೂಡ ಅತಿ ಮುಖ್ಯ. ಟ್ಯಾಬ್ಲೋದ ಮಾದರಿಗೆ ಮಾತ್ರವಲ್ಲ, ಸಂಗೀತಕ್ಕೂ ತಜ್ಞರು ತಮ್ಮ ಸಲಹೆ, ಸೂಚನೆ ನೀಡಲಿದ್ದಾರೆ. ಇದರಲ್ಲಿ ಪಾಲ್ಗೊಳ್ಳುವ ಕಲಾವಿದರಿಗೂ ರಕ್ಷಣಾ ಇಲಾಖೆಯ ಆತಿಥ್ಯವಿರಲಿದೆ. ಉತ್ತಮ ಪ್ರದರ್ಶನ ನೀಡುವಂತಾಗಲು ಕಲಾವಿದರು ಸಮಾರಂಭಕ್ಕೆ ಹದಿನೈದು ದಿನಗಳು ಮೊದಲೇ ದೆಹಲಿಗೆ ಬಂದು ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕಿದೆ. ಇನ್ನು ಟ್ಯಾಬ್ಲೋಗಳ ರಿಹರ್ಸಲ್ ಕೂಡ ನಡೆಯುತ್ತದೆ. ಸ್ತಬ್ಧಚಿತ್ರ ಸಾಗುವ ವೇಗ ಹೀಗೆ ಎಲ್ಲವನ್ನೂ ಗಮನಿಸಲಾಗುತ್ತದೆ. ಅಲ್ಲದೇ ಕಲಾವಿದರು ಪ್ರದರ್ಶನದ ದಿರಿಸಿನಲ್ಲೇ ತಾಲೀಮು ನಡೆಸುತ್ತಾರೆ.



ಗಣರಾಜ್ಯೋತ್ಸವದ ಕಾರ್ಯಕ್ರಮ ನೋಡುವುದು ಮಾತ್ರ ಆಕರ್ಷಕವಲ್ಲ, ಅದರಲ್ಲಿ ಪಾಲ್ಗೊಳ್ಳುವುದೂ ವಿನೂತನ ಅಭೂತಪೂರ್ವ ಅನುಭವ ನೀಡುತ್ತದೆ. ಈ ಗಣರಾಜ್ಯೋತ್ಸವ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸ್ತಬ್ಧ ಚಿತ್ರ ಸತತವಾಗಿ 10 ವರ್ಷ ಆಯ್ಕೆಯಾಗಿರುವುದು ವಿಶೇಷ. 2010 ರಿಂದ 2019 ರ ವರೆಗೆ ಸತತ 10 ವರ್ಷ ಪಾಲ್ಗೊಂಡಿದ್ದು ಮೂರು ಬಾರಿ ಪ್ರಶಸ್ತಿ ಗಳಿಸಿರುವುದು ಹೆಮ್ಮೆಯ ಸಂಗತಿ. ಈ ಹಿಂದೆಯೂ ಕರ್ನಾಟಕದ ಸ್ತಬ್ಧಚಿತ್ರ ಆಯ್ಕೆಯಾಗಿತ್ತು. 2005 ರ ಮಹಾಮಸ್ತಕಾಭಿಷೇಕ ಸ್ತಬ್ಧಚಿತ್ರಕ್ಕೆ ಮೊದಲ ಪ್ರಶಸ್ತಿ ಸಂದಿತ್ತು. ಜಮ್ಮು ಕಾಶ್ಮೀರ







downloaded from: www.kpscvaani.com



ಹೊರತುಪಡಿಸಿದರೆ ಅತಿ ಹೆಚ್ಚು ಬಾರಿ ಆಯ್ಕೆಯಾಗಿರುವುದು ಕರ್ನಾಟಕ ಮಾತ್ರ. ಗಣರಾಜ್ಯೋತ್ಸವ ಮುಗಿದ ಬಳಿಕ ಎರಡು ದಿನಗಳ ಕಾಲ ಈ ಸ್ತಬ್ಧಚಿತ್ರಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇರಿಸಲಾಗುತ್ತದೆ.

ಅಲ್ಲದೇ ಈ ಸ್ತಬ್ಧಚಿತ್ರಗಳು ಸಾಮಾಜಿಕ ಲಾಭಗಳನ್ನೂ ತಂದುಕೊಟ್ಟಿವೆ. ಉದಾಹರಣೆಗೆ ಈ ಹಿಂದೆ ಸ್ತಬ್ಧಚಿತ್ರದಲ್ಲಿ ಚನ್ನಪಟ್ಟಣದ ಗೊಂಬೆಗಳನ್ನು ಪ್ರದರ್ಶಿಸಿದ ಕಾರಣ ಈಗ ಚನ್ನಪಟ್ಟಣದ ಗೊಂಬೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಅಲ್ಲಿನ ಗೊಂಬೆಗಳ ಮಾರಾಟ ಶೇ 13 ರಷ್ಟು ಹೆಚ್ಚಳ ಕಂಡಿದೆ ಎಂಬುದಾಗಿ ಕೇಳಿಬಂದಿದೆ. ಅಲ್ಲದೇ ಕಿನ್ನಾಳ ಕಲೆ, ಬಿದಿರಿನ ಕಲೆಗಳನ್ನು ಜನರು ಗುರುತಿಸಿದ್ದು ಈ ಕಲೆಗಳಿಗೂ ಬೇಡಿಕೆ ಹೆಚ್ಚಾಗಿದೆ.

**ಜನವರಿ 26 ರ ಮಹತ್ವ** : ಭಾರತ ಪ್ರಜಾಪ್ರಭುತ್ವ ಮತ್ತು ಗಣತಂತ್ರ ದೇಶ. ಪ್ರಜಾಪ್ರಭುತ್ವ ಎಂದರೆ ಜನರಿಂದ, ಜನರಿಗಾಗಿ, ಜನರಿಂದಲೇ ನಡೆಯುವ ಸರ್ಕಾರ. ಗಣರಾಜ್ಯ ದೇಶದಲ್ಲಿ ಸರ್ಕಾರ ಜನರಿಂದ ರಚಿತವಾಗುತ್ತದೆ. ಅಂತಹ ದೇಶದಲ್ಲಿ ರಾಜನ ಆಳ್ವಿಕೆ ಇರುವುದಿಲ್ಲ. ಎಲ್ಲ ಸ್ವತಂತ್ರ ದೇಶಗಳು ಗಣರಾಜ್ಯಗಳಲ್ಲ. ಆದರೆ ಎಲ್ಲ ಗಣರಾಜ್ಯಗಳು ಸ್ವತಂತ್ರ ದೇಶಗಳಾಗಿವೆ.

ಭಾರತದ ಸಂವಿಧಾನ ಅಧಿಕೃತವಾಗಿ ಜಾರಿಗೆ ಬಂದ ದಿನ 1950 ರ ಜನವರಿ 26. ಅಂದಿನಿಂದ ಭಾರತ ಸ್ವತಂತ್ರ ಗಣತಂತ್ರವಾಯಿತು. ಇದರ ಸ್ಮರಣಾರ್ಥ ಪ್ರತಿವರ್ಷ ಜನವರಿ 26 ರಂದು ಗಣರಾಜ್ಯೋತ್ಸವ ಆಚರಿಸಲಾಗುತ್ತದೆ.

ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿ ಭಾರತಕ್ಕೆ 1947 ರ ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರಕಿತಾದರೂ ಆಗ ಪ್ರಜಾಪ್ರಭುತ್ವದ ಅವಕಾಶ ಸಿಗಲಿಲ್ಲ. ಭಾರತಕ್ಕೆ ತನ್ನದೇ ಆದ ಅಧಿಕೃತ ಸಂವಿಧಾನ ಇರದ ಕಾರಣ ಸ್ವಾತಂತ್ರ್ಯ ನಂತರ ಕೂಡ ರಾಜ ಆರನೇ ಜಾರ್ಜ್ ಮತ್ತು ಗವರ್ನರ್ ಜನರಲ್ ಅರ್ಲ್ ಮೌಂಟ್ ಬ್ಯಾಟನ್ ಆಳ್ವಿಕೆಯಲ್ಲಿರಬೇಕಾಯಿತು. ಸುಮಾರು ಎರಡೂವರೆ ವರ್ಷಗಳ ನಂತರ ಭಾರತದ ಸಂವಿಧಾನ ಅಧಿಕೃತವಾಗಿ ಜಾರಿಯಾಗಿ ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳ ಸಾಲಿಗೆ ಸೇರಿತು.

**ಸಂವಿಧಾನ** : ಸಂವಿಧಾನವನ್ನು ರಚಿಸಿದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಸ್ವತಂತ್ರ ಭಾರತಕ್ಕೆ ತನ್ನದೇ ಆದ ಪರಮೋಚ್ಚ ಕಾನೂನಿನ ಅಗತ್ಯವಿದೆ ಎಂದು ಮನಗಂಡು ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ 1947 ರ ಆಗಸ್ಟ್ 28 ರಂದು ಕರಡು ಸಮಿತಿ ರಚಿಸಲಾಯಿತು. ಅದಕ್ಕೂ ಮುನ್ನವೇ ಅಂದರೆ ಎರಡನೇ ಮಹಾಯುದ್ಧದ ನಂತರ ಯುನೈಟೆಡ್ ಕಿಂಗ್ಡಮ್‌ನಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ಭಾರತದ ಸಂವಿಧಾನ ರಚನೆಯ ಕರಡು ತಯಾರಿಸಲು ಸಮಿತಿ ರಚಿಸಿತು. ಮಹಾಯುದ್ಧಕ್ಕೂ ಕೆಲವು ವರ್ಷಗಳ ಮುನ್ನವೇ ಸಂವಿಧಾನ ರಚನೆಯ ಕೂಗೆದ್ದಿತ್ತು. 1946 ರ ಡಿಸೆಂಬರ್ 9 ರಂದು ಸಂವಿಧಾನ ಸಭೆಯ ಮೊದಲ ಸಭೆ ನಡೆಯಿತು. ಸಭೆಯ ಅಧ್ಯಕ್ಷರಾಗಿದ್ದ ಡಾ.ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ನಡೆದವು. ಈ ಸಭೆಯಲ್ಲಿ ವಿವಿಧ ವಿಷಯಗಳ ಸಮಿತಿ ರಚನೆ ಪ್ರಸ್ತಾಪವಾಗಿ ರಾಷ್ಟ್ರಧ್ವಜ ಸಮಿತಿ, ಮೂಲಭೂತ ಹಕ್ಕುಗಳ ಸಮಿತಿ ಹೀಗೆ ವಿವಿಧ ಸಮಿತಿಗಳು ರಚನೆಯಾಗಿ ಅವು ತಮ್ಮ ತಮ್ಮ ವರದಿ ನೀಡಿದ್ದವು. ಇದನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನದ ಕರಡನ್ನು ರಚಿಸಲಾಯಿತು.

ಈ ಸಮಿತಿ ಸತತ ಪರಿಶ್ರಮದ ನಂತರ ತನ್ನ ಮೊದಲ ಕರಡನ್ನು 1947 ರ ನವೆಂಬರ್ 4 ರಂದು ಸಲ್ಲಿಸಿತು. ಸೂಕ್ತ ತಿದ್ದುಪಡಿಗಳ ನಂತರ ಎರಡು ವರ್ಷಗಳ ತರುವಾಯ 1949 ರ ನವೆಂಬರ್ 26 ರಂದು ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಆದ್ದರಿಂದ ಪ್ರತಿ ವರ್ಷ ನವೆಂಬರ್ 26 ಅನ್ನು ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತದೆ. ಸಂವಿಧಾನ ಅಳವಡಿಸಿಕೊಂಡ ಎರಡು ತಿಂಗಳ ನಂತರ ಅಧಿಕೃತವಾಗಿ 1950 ರ ಜನವರಿ 26 ರಂದು ಜಾರಿಗೆ ಬಂದಿತು.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ 1929ರ





ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಐಎನ್‌ಸಿ) ಯ ಲಾಹೋರ್ ಅಧಿವೇಶನದಲ್ಲಿ ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಬೇಡಿಕೆ ಇಡಲಾಯಿತು. ನಂತರ 1930ರ ಜನವರಿ 26 ರಂದು ಪೂರ್ಣ ಸ್ವರಾಜ್ಯ ದಿನ ಎಂದು ಘೋಷಿಸಲಾಯಿತು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಈ ಮಹತ್ವದ ದಿನದ ಸ್ಮರಣಾರ್ಥ ಸಂವಿಧಾನವನ್ನು ಅದೇ ದಿನ ಅಧಿಕೃತವಾಗಿ ಜಾರಿಗೆ ತರಲು ನಿರ್ಧರಿಸಲಾಯಿತು.

**ಪಾಶ್ಚಿಮಾತ್ಯರ ಪ್ರಭಾವ** :ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸಂವಿಧಾನ ರಚಿಸಲು ಅಮೆರಿಕ, ಯೂರೋಪ್‌ನ ಸಂವಿಧಾನ ಪಂಡಿತರ ನೆರವು ಪಡೆದಿವೆ ಎಂದು ಹೇಳಲಾಗುತ್ತದೆ. ಆದರೆ ಭಾರತದ ಸಂವಿಧಾನ ರಚನೆ ಪ್ರಕ್ರಿಯೆಯಲ್ಲಿ ಕೇವಲ ಭಾರತೀಯರೇ ಇದ್ದರು ಎಂಬುದು ವಿಶೇಷ. ಆದರೆ ಈ ಸಂವಿಧಾನದಲ್ಲಿ ವಿದೇಶ ಪ್ರಭಾವ ಇದೆ ಎಂದು ಹೇಳಲಾಗುತ್ತದೆ. ಸಮಾನತೆ ಮತ್ತು ಭ್ರಾತೃತ್ವದ ಪರಿಕಲ್ಪನೆಗಳನ್ನು ಫ್ರಾನ್ಸ್ ಸಂವಿಧಾನದಿಂದ, ಸೋವಿಯಟ್ ಒಕ್ಕೂಟದಿಂದ ಪಂಚ ವಾರ್ಷಿಕೋತ್ಸವದ ಕಲ್ಪನೆ, ಐರ್ಲೆಂಡ್ ಸಂವಿಧಾನದಿಂದ ರಾಜ್ಯ ನಿರ್ದೇಶನದ ತತ್ವಗಳ ಪರಿಕಲ್ಪನೆ ಪಡೆಯಲಾಗಿದೆ ಎಂದು ಹೇಳಲಾಗುತ್ತದೆ. ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಪರಿಸರಕ್ಕನುಗುಣವಾಗಿ ಸಂವಿಧಾನ ರಚಿಸಲಾಗಿದೆ.

ಸಂವಿಧಾನ ರಚನಾ ಸಭೆಯ ಸದಸ್ಯರು ಬಹುತೇಕ ಪಾಶ್ಚಿಮಾತ್ಯ ಶಿಕ್ಷಣ ಪಡೆದಿದ್ದ ಆಧುನಿಕ ಮನೋಭಾವದ ವಿದ್ಯಾವಂತ ವ್ಯಕ್ತಿಗಳು. ಹೀಗಾಗಿ ಉದಾರವಾದದ ಮೌಲ್ಯಗಳು ಕೂಡ ಭಾರತದ ಸಂವಿಧಾನದಲ್ಲಿ ಅಡಕವಾಗಿದೆ.




**"ಯಾವ ನಾಯಕ ಎಷ್ಟೇ ಮಹತ್ವ ಹೊಂದಿದ್ದರೂ, ಜನರು ತಮ್ಮ ಸ್ವಾತಂತ್ರ್ಯವನ್ನು ಆ ನಾಯಕನ ಪಾದದ ಮೇಲೆ ಹಾಕಬಾರದು"**

–ಜಾನ್ ಸ್ಟುವರ್ಟ್ ಮಿಲ್





downloaded from: www.kpscvaani.com







# ಸುಗ್ಗಿ ಹಬ್ಬದಲ್ಲಿ ಸಂಕ್ರಾಂತಿ ಸಂಭ್ರಮ

ಎಸ್.ಆರ್. ಆರಾಧ್ಯ

**ಕ**ರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಹಾಗೂ ಉತ್ತರದ ಕೆಲವು ರಾಜ್ಯಗಳಲ್ಲೂ ಸುಗ್ಗಿ ಹಬ್ಬದ ಸಂಭ್ರಮ ಜನಮನದಲ್ಲಿ ಹೊಸ ವರ್ಷದ ಹುರುಪನ್ನು ತುಂಬಿ ಉಲ್ಲಾಸಗೊಳಿಸುತ್ತದೆ. ಪ್ರತಿವರ್ಷವೂ ಸಾಮಾನ್ಯವಾಗಿ ಜನವರಿ 14ರಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಹೊಸ ಸಂವತ್ಸರದ ಮೊಟ್ಟ ಮೊದಲ ಹಬ್ಬವಾದ ಸಂಕ್ರಾಂತಿ ವರ್ಷವಿಡೀ ದುಡಿದು ದಣಿದ ರೈತರಿಗೆ ಸಂತಸದ ಸಂದರ್ಭವಾಗಿದೆ.

ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಹಾಗೂ ಉತ್ತರದ ಕೆಲವು ರಾಜ್ಯಗಳಲ್ಲೂ ಸುಗ್ಗಿ ಹಬ್ಬದ ಸಂಭ್ರಮ ಜನಮನದಲ್ಲಿ ಹೊಸ ವರ್ಷದ ಹುರುಪನ್ನು ತುಂಬಿ ಉಲ್ಲಾಸಗೊಳಿಸುತ್ತದೆ. ಪ್ರತಿವರ್ಷವೂ ಸಾಮಾನ್ಯವಾಗಿ ಜನವರಿ 14ರಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಹೊಸ ಸಂವತ್ಸರದ ಮೊಟ್ಟ ಮೊದಲ ಹಬ್ಬವಾದ ಸಂಕ್ರಾಂತಿ ವರ್ಷವಿಡೀ ದುಡಿದು ದಣಿದ ರೈತರಿಗೆ ಸಂತಸದ ಸಂದರ್ಭವಾಗಿದೆ.

ಅನಾದಿ ಕಾಲದಿಂದಲೂ ರೂಢಿಯಲ್ಲಿರುವ ಈ ಸಂಪ್ರದಾಯ ನಾಡಿನ ಜಾನಪದ ಸಂಸ್ಕೃತಿಗೆ ಮೂಲ ಸೆಲೆಯಾಗಿದೆ. ಹೊಲಗದ್ದೆಗಳನ್ನು ಉತ್ತು ಪೈರು ನಾಟಿ ಮಾಡುವುದರಿಂದ ಹಿಡಿದು ಬೆಳೆಗಳ ಕಟಾವಿನ ತನಕ ಹಾಸುಹೊಕ್ಕಾಗಿರುವ ಜಾನಪದ ಹಾಡುಗಳ ಭಂಡಾರ ನೇಗಿಲಯೋಗಿಗೆ ಜೀವನ ಸ್ಫೂರ್ತಿಯ ಪ್ರೇರಣೆ ಒದಗಿಸುತ್ತಾ ಬಂದಿದೆ. ಹೀಗಾಗಿ ಈ ಹಬ್ಬ ಗ್ರಾಮೀಣ ಜನರ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ.

ಹೊಲದ ನಡುವೆ ಕಣವನ್ನು ಅಣಿಗೊಳಿಸಿ ರಾಗಿ, ಭತ್ತ, ಜೋಳ, ಸಜ್ಜೆ, ನವಣೆ, ತೊಗರಿ, ಉದ್ದು, ಮುಂತಾದ ವಿವಿಧ ಧಾನ್ಯಗಳನ್ನು ಒಕ್ಕಣೆ ಮಾಡಿ ಹುಲ್ಲನ್ನು ಬಣವೆ ಹಾಕಿ ರಾಶಿ ಪೂಜೆ ನಂತರ ಆಳುಗಳಿಗೆ ಬಡಬಗ್ಗರಿಗೆ ಒಂದಿಷ್ಟು ದವಸ ದಾನ ಮಾಡಿ ಅನ್ನ ಸಂತರ್ಪಣೆ ಮಾಡುವ ಮೂಲಕ ರೈತರು ಕಾಯಕ ದಾಸೋಹದ ಸಾರ್ಥಕತೆಯ ಧನ್ಯತಾಭಾವದಿಂದ ಆನಂದಿಸುವ ಕ್ಷಣ ಇದಾಗಿದೆ.

ಈ ಸುಗ್ಗಿ ಹಬ್ಬವನ್ನು ಒಂದೊಂದು ರಾಜ್ಯದಲ್ಲಿ ಒಂದೊಂದು ಹೆಸರಿನಲ್ಲಿ ಆಚರಿಸಲಾಗುತ್ತದೆ. ಇದು ಕರ್ನಾಟಕ ಮತ್ತು ಆಂಧ್ರದಲ್ಲಿ ಮಕರ ಸಂಕ್ರಾಂತಿ, ತಮಿಳುನಾಡಿನಲ್ಲಿ ಪೊಂಗಲ್, ಕೇರಳದಲ್ಲಿ ವಿಷು ಎಂದೂ ಉತ್ತರದಲ್ಲಿ ಬೈಸಾಕಿ, ಬಿಹು, ಬಸಂತ ಪಂಚಮಿ, ಲೋಹ್ರಿ ಮುಂತಾಗಿ ಕರೆಯಲಾಗುತ್ತದೆ. ಭಾರತದಲ್ಲಿ ಮಾತ್ರವಲ್ಲದೆ ವಿಶ್ವದೆಲ್ಲೆಡೆ ಸುಗ್ಗಿ ಹಬ್ಬ ಸರ್ವೇಸಾಮಾನ್ಯ ಸಂಭ್ರಮದ ಆಚರಣೆಯಾಗಿದೆ.

ಸಂಕ್ರಾಂತಿ ಹಬ್ಬದ ದಿನ ಸಮೃದ್ಧಿಯ ಸಂಕೇತವಾಗಿ ಮನೆಗಳಲ್ಲಿ ಹಾಲನ್ನು ಕುದಿಸಿ ಉಕ್ಕಿಸಲಾಗುತ್ತದೆ. ಹುಗ್ಗಿ ಅಥವಾ ಪೊಂಗಲ್ ಈ ಹಬ್ಬದ ವಿಶೇಷ ಅಡುಗೆ. ಅವರೆಕಾಯಿ, ಕಡ್ಲೆಕಾಯಿ ಮತ್ತು ಗೆಣಸನ್ನು ಬೇಯಿಸಿ ತಿನ್ನುವುದು ವಾಡಿಕೆ. ನೆರೆಹೊರೆಯವರಿಗೆಲ್ಲಾ ಎಳ್ಳು-ಬೆಲ್ಲ ಬೀರುವ ಮೂಲಕ ಸಾಮಾಜಿಕ ಸಾಮರಸ್ಯ ಮೆರೆಯುವುದು ಈ ಹಬ್ಬದ ಮತ್ತೊಂದು ವೈಶಿಷ್ಟ್ಯವಾಗಿದೆ. "ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತಾಡು" ಎಂಬ ನಾಣ್ನುಡಿ ಜನಜನಿತವಾಗಿದೆ.

ಹುರಿದ ಬಿಳಿ ಎಳ್ಳು, ಹುರಿಗಡಲೆ, ಹುರಿದು ಸಿಪ್ಪೆ ತೆಗೆದ ಕಡ್ಲೆಕಾಯಿ ಬೀಜ, ಬೆಲ್ಲದ ಚೂರು, ಸಕ್ಕರೆ ಅಚ್ಚು, ಒಣ ಕೊಬ್ಬರಿ ಚೂರು ಇವುಗಳ ಮಿಶ್ರಣದ ಜತೆಗೆ ಕಬ್ಬಿನ ತುಣುಕುಗಳನ್ನು ಹೊಸ ಉಡುಪು ತೊಟ್ಟ ಮಕ್ಕಳ ಸಂಗಡ ಮನೆಮನೆಗೆ ಹಂಚಿ ಶುಭಾಶಯ ವಿನಿಮಯ ಮಾಡಿಕೊಳ್ಳಲಾಗುತ್ತದೆ. ಇದು ಊರು ಕೇರಿಗಳ ಜನರೆಲ್ಲಾ ಪರಸ್ಪರ ಮಧುರ ಮೈತ್ರಿ ಬಾಂಧವ್ಯದಲ್ಲಿ ಒಂದಾಗಿ ಬಾಳುವ ಸಂಕಲ್ಪಕ್ಕೆ ನಾಂದಿಯಾಗುತ್ತದೆ.







downloaded from: www.kpscvaani.com



ಎತ್ತುಗಳನ್ನು ಅಲಂಕರಿಸಿ ಕಬ್ಬಿನ ಜಲ್ಲೆಗಳನ್ನು ಕಟ್ಟಿದ ಬಂಡಿಗಳಲ್ಲಿ ಗೆಜ್ಜೆಗಳ ಸಪ್ಪಳದೊಂದಿಗೆ ಊರೆಲ್ಲಾ ಸುತ್ತಿ ಬರುವಾಗ ಹಳ್ಳಿಗರ ಆನಂದಕ್ಕೆ ಎಣೆಯೇ ಇರುವುದಿಲ್ಲ. ಸಂಜೆಯ ವೇಳೆಗೆ ಎತ್ತುಗಳನ್ನು ಬೆಂಕಿ ಮೇಲೆ ಕಿಚ್ಚು ಹಾಯಿಸುವ ಪದ್ಧತಿ ಎಲ್ಲೆಡೆ ಚಾಲ್ತಿಯಲ್ಲಿದೆ. ರೈತನ ಆಪ್ತಮಿತ್ರನಾದ ಎತ್ತುಗಳ ಜೋಡಿಗೆ ಸಂಕ್ರಾಂತಿ ಹಬ್ಬದ ಆಚರಣೆಯಲ್ಲಿ ವಿಶೇಷ ಮನ್ನಣೆ ಲಭ್ಯವಾಗುತ್ತದೆ. ಶಿವನ ವಾಹನವಾದ ನಂದಿಯ ಸ್ವರೂಪವಾದ ಎತ್ತುಗಳನ್ನು ಪೂಜ್ಯನೀಯ ಭಾವದಿಂದ ಕಾಣುವ ರೈತ ಸದಾ ಪ್ರೀತಿಯಿಂದ ಪೋಷಣೆ ಮಾಡುತ್ತಾನೆ. ಆಧುನೀಕರಣದ ಫಲವಾಗಿ ಟ್ರಾಕ್ಟರ್‌ಗಳು ಬಳಕೆಯಲ್ಲಿದ್ದರೂ ಸಣ್ಣ ರೈತರಿಗೆ ಎತ್ತುಗಳು ಈಗಲೂ ಬೇಸಾಯದ ಮೂಲಾಧಾರವಾಗಿವೆ.

ಸಂಕ್ರಾಂತಿ ಸೂರ್ಯನು ಪಥ ಬದಲಾಯಿಸಿ ಧನರ್ ರಾಶಿಯಿಂದ ಮಕರ ರಾಶಿಯನ್ನು ಪ್ರವೇಶಿಸುವ ಸಂಕ್ರಮಣ ಕಾಲವಾಗಿದೆ. ಬೆಂಗಳೂರಿನ ಹೆಸರಾಂತ ಗವಿಗಂಗಾಧರೇಶ್ವರ ದೇವಾಯದಲ್ಲಿ ಶಿವಲಿಂಗದ ಮೇಲೆ ಸೂರ್ಯನ ಕಿರಣ ಬೀಳುವ ಅಪರೂಪದ ದೃಶ್ಯವನ್ನು ಅಂದು ಕಾಣಬಹುದಾಗಿದೆ. ಸಂಕ್ರಾಂತಿ ದಿನ ಉತ್ತರಾಯಣ ಪುಣ್ಯಕಾಲ ಆರಂಭವಾಗುತ್ತದೆ. ಮಹಾಭಾರತ ಯುದ್ಧದಲ್ಲಿ ಶರಶಯ್ಯೆಯೇರಿದ ಭೀಷ್ಮ ಪಿತಾಮಹ ದೇಹತ್ಯಾಗಕ್ಕೆ ಈ ಪವಿತ್ರವಾದ ಘಳಿಗೆಯನ್ನೇ ಕಾಯುತ್ತಿದ್ದರೆಂದು ವರ್ಣಿಸಲಾಗಿದೆ. ಉತ್ತರಾಯಣದಲ್ಲಿ ಮರಣವಾದರೆ ಮೋಕ್ಷ ಪ್ರಾಪ್ತವಾಗುವುದೆಂಬ ನಂಬಿಕೆ ಆಸ್ತಿಕರಲ್ಲಿ ಪ್ರಚಲಿತದಲ್ಲಿದೆ.

ಅಂತೆಯೇ ಮಕರ ಸಂಕ್ರಾಂತಿಯ ಶುಭ ಸಮಯದಲ್ಲಿ ನದಿಗಳಲ್ಲಿ ಪುಣ್ಯಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯ ಸಲ್ಲಿಸುವ ಸಂಪ್ರದಾಯ ಅನಾದಿ ಕಾಲದಿಂದಲೂ ರೂಢಿಯಲ್ಲಿದೆ. ಕಪ್ಪು ಎಳ್ಳು ದಾನ ಮಾಡಿ ದೇವಾಲಯಗಳಲ್ಲಿ ಎಳ್ಳಿನ ಬತ್ತಿ ಹಚ್ಚುವ ಪದ್ಧತಿಯೂ ಚಾಲ್ತಿಯಲ್ಲಿದೆ. ಉತ್ತರ ಪ್ರದೇಶದಲ್ಲಿ ಸಂಕ್ರಾಂತಿ ಸಂದರ್ಭದಲ್ಲಿ ಕುಂಭ ಮೇಳ ಏರ್ಪಡುತ್ತದೆ. ಲಕ್ಷಾಂತರ ಸಂಖ್ಯೆಯಲ್ಲಿ ಸಾಧು ಸಂತರು ಗಂಗಾ ಸ್ನಾನ ಮಾಡಿ ಪಾಪ ಪರಿಹಾರಕ್ಕಾಗಿ ಪ್ರಾರ್ಥಿಸುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಗಂಗಾ ಸಾಗರ ದ್ವೀಪ ಮೇಳ ನಡೆಯುತ್ತದೆ. ಕರ್ನಾಟಕ ಸಹಿತ ದೇಶದ ಇತರೆಡೆಗಳಲ್ಲೂ ನದಿಗಳಲ್ಲಿ ಪುಣ್ಯಸ್ನಾನ ವಿಧಿಗಳನ್ನು ಆಸ್ತಿಕ ಜನರು ನೆರವೇರಿಸುತ್ತಾರೆ. ಧಾರ್ಮಿಕ ನಂಬಿಕೆಗಳ ಜತೆಗೆ ಜನಪದ ಸಂಸ್ಕೃತಿಯ ಸೊಬಗು ಈ ಹಬ್ಬದ ಆಚರಣೆಯೊಂದಿಗೆ ಮೇಳೈಸಿದೆ.

ಕೇರಳದ ಶಬರಿಮಲೈನ ಅಯ್ಯಪ್ಪ ದೇವಾಲಯದಲ್ಲಿ ಮಕರ ಸಂಕ್ರಾಂತಿ ದಿನದಂದು ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಗುತ್ತದೆ. ಸೂರ್ಯಾಸ್ತಮದ ನಂತರ ಬೆಟ್ಟದ ಮೇಲೆ ಮೂರು ಬಾರಿ ಮಕರ ಜ್ಯೋತಿಯನ್ನು ಬೆಳಗಿಸಲಾಗುತ್ತದೆ. ಇದನ್ನು ಸ್ಥಳೀಯರು 'ಮಕರ ವಿಳಕ್ಕು' ಎಂದು ಕರೆಯುತ್ತಾರೆ. ಕರ್ನಾಟಕ ಸೇರಿದಂತೆ ದೇಶದ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಅಯ್ಯಪ್ಪನ ದರ್ಶನಕ್ಕಾಗಿ ಧಾವಿಸುತ್ತಾರೆ. ವ್ರತಧಾರಿಗಳು ಕಪ್ಪು ಬಣ್ಣದ ಉಡುಪು ತೊಟ್ಟು ಮಾಲೆ ಧರಿಸಿ ತಲೆಯ ಮೇಲೆ ಇರುಮುಡಿ ಹೊತ್ತು "ಸ್ವಾಮಿಯೇ ಶರಣಂ ಅಯ್ಯಪ್ಪ" ಎಂಬ ಮಂತ್ರ ಘೋಷದೊಂದಿಗೆ ಪಾದಯಾತ್ರೆ ಅಥವಾ ವಾಹನದ ಮೂಲಕ ಶಬರಿಮಲೈಗೆ ಸಾಗಿ ಬರುತ್ತಾರೆ. ಇದಕ್ಕೂ ಮುನ್ನ 45 ದಿನಗಳ ಕಾಲ ಅವರು ಕಠಿಣವಾದ ನೇಮನಿಷ್ಠೆ ಪಾಲಿಸುತ್ತಾ ಮಂಡಲ ಪೂಜೆ ನಡೆಸಿ ಅಯ್ಯಪ್ಪ ಸ್ವಾಮಿಯನ್ನು ಆರಾಧಿಸುತ್ತಾರೆ.





**ಸಂಕ್ರಾಂತಿ ಸೂರ್ಯನು ಪಥ ಬದಲಾಯಿಸಿ ಧನರ್ ರಾಶಿಯಿಂದ ಮಕರ ರಾಶಿಯನ್ನು ಪ್ರವೇಶಿಸುವ ಸಂಕ್ರಮಣ ಕಾಲವಾಗಿದೆ. ಬೆಂಗಳೂರಿನ ಹೆಸರಾಂತ ಗವಿಗಂಗಾಧರೇಶ್ವರ ದೇವಾಯದಲ್ಲಿ ಶಿವಲಿಂಗದ ಮೇಲೆ ಸೂರ್ಯನ ಕಿರಣ ಬೀಳುವ ಅಪರೂಪದ ದೃಶ್ಯವನ್ನು ಅಂದು ಕಾಣಬಹುದಾಗಿದೆ. ಸಂಕ್ರಾಂತಿ ದಿನ ಉತ್ತರಾಯಣ ಪುಣ್ಯಕಾಲ ಆರಂಭವಾಗುತ್ತದೆ.**

ಗುಜರಾತ್, ಮಹಾರಾಷ್ಟ್ರ ಮುಂತಾದ ಕೆಲವೆಡೆ ಸಂಕ್ರಾಂತಿಯ ಹಬ್ಬದ ಸಂದರ್ಭದಲ್ಲಿ ಗಾಳಿಪಟವನ್ನು ಹಾರಿಸುವ ಪದ್ಧತಿಯು ರೂಢಿಯಲ್ಲಿದೆ. ತರಾವರಿ ಬಣ್ಣಗಳ ಹಾಗೂ ನಾನಾ ಆಕಾರ ಮತ್ತು ರೂಪಗಳ ಗಾಳಿಪಟಗಳನ್ನು ಬಾನಂಗಳದಲ್ಲಿ ಹಾರಿಸಿ ಮಕ್ಕಳು ಆನಂದಿಸುತ್ತಾರೆ. ಹಿರಿಯರೂ ಸಹ ಅವರೊಂದಿಗೆ ಸಂತಸವನ್ನು ಹಂಚಿಕೊಳ್ಳುತ್ತಾರೆ. ಅಸ್ಸಾಂನಲ್ಲಿ ಬಿಹು ಹಾಗೂ ಪಂಜಾಬ್‌ನಲ್ಲಿ ಬೈಸಾಕಿ ಎಂಬ ಹೆಸರಿನ ಸುಗ್ಗಿ ಹಬ್ಬದ ವೇಳೆ ಸಮೂಹ ನೃತ್ಯ ವಿಶೇಷ ಜನಾಕರ್ಷಣೆಯಾಗಿರುತ್ತದೆ. ಹಿಂದೂಗಳು ಹೆಚ್ಚಾಗಿರುವ ನೆರೆಯ ನೇಪಾಳ ದೇಶದಲ್ಲೂ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ನಮ್ಮ ನಾಡಿನಂತೆ ಅಲ್ಲಿಯ ಜನರೂ ಪುಷ್ಯ ಮಾಸದಲ್ಲಿ ಯಾವುದೇ ಮಂಗಳ ಕಾರ್ಯ ಮಾಡುವುದಿಲ್ಲ. ಶುಭ ಮುಹೂರ್ತದ ಸೂಚಕವಾಗಿರುವ ಮಾಘ ಮಾಸವನ್ನು ನವೋಲ್ಲಾಸದಿಂದ ಸ್ವಾಗತಿಸಲಾಗುತ್ತದೆ.

ಬೇರೆಲ್ಲಾ ಹಬ್ಬಗಳ ಸಂದರ್ಭದಂತೆಯೇ ಸಂಕ್ರಾಂತಿ ಹಬ್ಬದ ವೇಳೆಯೂ ಮನೆ ಬಾಗಿಲುಗಳಿಗೆ ತಳಿರು ತೋರಣ ಕಟ್ಟಿ ಅಂಗಳದಲ್ಲಿ ಬಣ್ಣ ಬಣ್ಣದ ರಂಗೋಲೆಯ ಚಿತ್ತಾರಗಳನ್ನು ಬಿಡಿಸಿ ಸಿಂಗರಿಸಲಾಗುತ್ತದೆ. ಅನೇಕ ಕಡೆ ರಂಗೋಲೆ ಸ್ಪರ್ಧೆಗಳನ್ನೂ ಏರ್ಪಡಿಸಲಾಗುತ್ತದೆ. ಸಾಮಾನ್ಯವಾಗಿ ಜನವರಿ 14 ರಂದು ಬರುತ್ತಿದ್ದ ಸಂಕ್ರಾಂತಿ 2015 ರಿಂದ ಜನವರಿ 15ಕ್ಕೆ ನಿಗದಿಯಾಗಿದೆ. ಭೂಮಿ ಚಲನೆ ಆಧಾರದಲ್ಲಿ ಈ ದಿನಾಂಕವನ್ನು ನಿಷ್ಕರಿಸಲಾಗುತ್ತದೆ. ಸುಮಾರು ಸಾವಿರ ವರ್ಷಗಳ ಹಿಂದೆ ಡಿಸೆಂಬರ್ 31ರಂದು ಈ ಹಬ್ಬವನ್ನು ಆಚರಿಸಲಾಗುತಿತ್ತೆಂದು ಹೇಳಲಾಗಿದೆ. ಒಟ್ಟಾರೆಯಾಗಿ ಗ್ರೇಗೊರಿಯನ್ ಕ್ಯಾಲೆಂಡರ್‌ನಲ್ಲಿ ಇದು ಹಿಂದೂಗಳಿಗೆ ವರ್ಷದ ಮೊದಲ ಪ್ರಮುಖ ಹಬ್ಬವಾಗಿದ್ದು ನವೋಲ್ಲಾಸದ ಸಂಕೇತವಾಗಿದೆ.





downloaded from: www.kpscvaani.com



## ಚಿತ್ರದುರ್ಗದ

# ಕೃಷ್ಣರಾಜೇಂದ್ರ ಗ್ರಂಥಾಲಯದ ಹಿರಿಮೆ

–ಗೌತಮಿ ಸುಭಾಷ್ ರಾವ್,

**ಸಾರ್ವಜನಿಕರ ಜ್ಞಾನದಾಹ ತೀರಿಸಲು, ಅವರನ್ನು ಉನ್ನತ ಸ್ಥಾನಕ್ಕೇರಿಸಿ, ಸಮಾಜದಲ್ಲಿ ಉತ್ತಮ ಪ್ರಜೆಯನ್ನಾಗಿಸುವಲ್ಲಿ ಗ್ರಂಥಾಲಯಗಳ ಪಾತ್ರ ಬಹುಮುಖ್ಯವಾಗಿದೆ. ಪುಸ್ತಕಗಳ ಕಣಜವಾಗಿರುವ ಈ ಗ್ರಂಥಾಲಯದ ಉಪಯೋಗವನ್ನು ಪಡೆದುಕೊಂಡಿರುವ ಬಹುಪಾಲು ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿದೆ. ಇಂತಹ ಗ್ರಂಥಾಲಯವನ್ನು ಹೊಂದಿರುವ ಚಿತ್ರದುರ್ಗದ ಜನರು ಪುಣ್ಯವಂತರೆಂದರೆ ತಪ್ಪಾಗಲಾರದು.**

ಸಾರ್ವಜನಿಕ ಗ್ರಂಥಾಲಯಗಳನ್ನು ಶ್ರೀಸಾಮಾನ್ಯರ ವಿಶ್ವವಿದ್ಯಾಲಯಗಳೆಂದು ಕರೆಯುವ ಪ್ರತೀತಿ ಇದೆ. ಇದು ಇಂದು–ನೆನ್ನೆಯದಲ್ಲ. ಇತಿಹಾಸವನ್ನು ತಿರುಗಿ ನೋಡಿದಾಗ ಯಾವುದೇ ದೇಶಗಳು ವ್ಯಕ್ತಿಯ ಸಾಂಪ್ರದಾಯಿಕ ಶಿಕ್ಷಣಕ್ಕೆ ಬೌದ್ಧಿಕ ಚಿಂತನೆಯ ಚೌಕಟ್ಟನ್ನು ಮೀರಿ ವ್ಯಕ್ತಿತ್ವ ವಿಕಸನಕ್ಕೆ ಗ್ರಂಥಾಲಯಗಳ ಸದ್ಬಳಕೆ ಮಾಡಿದ್ದಲ್ಲಿ ಮಾತ್ರ ಪೂರ್ಣತೆ ಕಾಣಬಹುದು. ಪರಿಪೂರ್ಣವಾದ ತನ್ಮಯತೆಯಿಂದ ಓದುವ ವಾತಾವರಣವನ್ನು ಒದಗಿಸುವ ತಾಣಗಳು, ಸಾರ್ವಜನಿಕ ಗ್ರಂಥಾಲಯಗಳೆಂದು ನಿಸ್ಸಂಶಯವಾಗಿ ಹೇಳಬಹುದು.

ಇಂದಿನ ದಿನಮಾನಗಳಲ್ಲಿ ಮೊಬೈಲ್ ಎಲ್ಲರ ಕೈಸೇರಿ, ಪುಸ್ತಕ ಓದುವುದು, ಕ್ರೀಡೆ ಹವ್ಯಾಸಗಳನ್ನು ಬಿಡಿಸಿದೆ. ಇದಕ್ಕೆ ಅಪವಾದವೆಂಬಂತೆ ಚಿತ್ರದುರ್ಗದ ಜಿಲ್ಲಾ ಹಾಗೂ ನಗರ ಗ್ರಂಥಾಲಯ ತನ್ನದೇ ಆದ ಔಚಿತ್ಯ ಪಡೆದುಕೊಂಡಿದೆ. ಚಿತ್ರದುರ್ಗದಲ್ಲಿ 1875 ರಲ್ಲಿ ವಾಚನಾಲಯ ಶುರುವಾಗುವುದರ ಮೂಲಕ ಓದುಗರನ್ನು ಆಕರ್ಷಿಸಿತು. 1925 ರಂದು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಇಮಾಮ್ ಸಾಬ್ ಹಾಗೂ ಚಿತ್ರದುರ್ಗದ ಜಗದ್ಗುರು ಜಯದೇವ ಸ್ವಾಮಿಯವರ ಶ್ರಮದ ಫಲವಾಗಿ ಪ್ರಾರಂಭವಾದ ವಾಚನಾಲಯ ಕೇಂದ್ರ ಇಂದು ಶ್ರೀಕೃಷ್ಣರಾಜೇಂದ್ರ ಗ್ರಂಥಾಲಯವೆಂಬ ಹೆಸರಿನಿಂದ ಪ್ರಖ್ಯಾತಿ ಪಡೆದಿದೆ. ಗ್ರಂಥಾಲಯ ಕಟ್ಟಡವು ನೂರು ವರ್ಷಗಳಿಗೂ ಹೆಚ್ಚಿನ ಹಳೆಯದಾದರೂ, ಇಂದಿಗೂ ಗಟ್ಟಿಮುಟ್ಟಾಗಿದೆ. ಕಟ್ಟಡದಲ್ಲಿ ಓದುಗರಿಗೂ ಸೂಕ್ತ ಗಾಳಿ, ಬೆಳಕಿನ ವ್ಯವಸ್ಥೆ ನಿಜಕ್ಕೂ ಅದ್ಭುತವಾಗಿದೆ.

ತನ್ನ ಮನೆಯಲ್ಲಿ ಅಥವಾ ಶಾಲಾ ಕಾಲೇಜುಗಳಲ್ಲಿ ಬೋಧನೆಯಿಂದ ಪಡೆದ ಜ್ಞಾನಕ್ಕೆ ಪೂರಕವಾದ ವಾತಾವರಣವನ್ನು ಗ್ರಂಥಾಲಯದ ವಾತಾವರಣದಲ್ಲಿ ಕುಳಿತು ಜ್ಞಾನದ ಧ್ಯಾನ ಮಾಡುವುದರಲ್ಲಿ ಸಿಗುವ ಆನಂದಕ್ಕೆ ಸಾಟಿಯಿಲ್ಲ. ವಿಶೇಷವಾದ ತನ್ಮಯತೆಯಿಂದ ತಾನು ಓದುತ್ತಿರುವ ಗ್ರಂಥ ಜೊತೆಯಲ್ಲಿ ತನ್ನ ಅಕ್ಕ–ಪಕ್ಕದ ಓದುಗರ ಆಸಕ್ತಿ ವಿಷಯಗಳು ಹೇಗಿವೆ ಎನ್ನುವ ಕುತೂಹಲ ತಣಿಯುವುದು ಗ್ರಂಥಾಲಯದಲ್ಲಿ ಮಾತ್ರ. ಸಾವಿರಾರು ಜನರ ಜ್ಞಾನದ ಹಸಿವನ್ನು ನೀಗಿಸಲು ಗ್ರಂಥಾಲಯಗಳು ಜನ್ಮತಾಳಿವೆ. ಹಲವಾರು ವರ್ಗದ ಪುಸ್ತಕಗಳು ಗ್ರಂಥಾಲಯವೆಂಬ ಒಂದೇ ಸೂರಿನಡಿ ದೊರೆಯುತ್ತವೆ. ಬಯಲುಸೀಮೆ, ಕೋಟೆನಾಡು ಚಿತ್ರದುರ್ಗ ಜನರ ಜ್ಞಾನಾರ್ಜನೆಗೆ ಪೂರಕವಾಗಿರುವ ಕೃಷ್ಣರಾಜೇಂದ್ರ ಗ್ರಂಥಾಲಯ ಇಂತಹ ಮಹತ್ವದ ಕಾರ್ಯ ಮಾಡುತ್ತಿದ್ದು, ಜಿಲ್ಲೆಯ ಹೆಮ್ಮೆಗೆ ಇದು ಮತ್ತೊಂದು ಗರಿ ಮೂಡಿಸಿದೆ.

2007 ರಲ್ಲಿ ಇದು ಜಿಲ್ಲಾ ಕೇಂದ್ರ ಗ್ರಂಥಾಲಯವಾಯಿತು. ಸುಮಾರು 60 ಸಾವಿರಕ್ಕೂ ಹೆಚ್ಚಿನ ವೈವಿಧ್ಯಮಯ ವಿಷಯ ಹಾಗೂ ಪ್ರಕಾರಗಳ ಪುಸ್ತಕ ಭಂಡಾರವನ್ನು ಹೊಂದಿರುವ ಈ ಗ್ರಂಥಾಲಯ ಓದುಗರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಕಥೆ, ಕಾದಂಬರಿ, ಸಾಹಿತ್ಯ, ಕೃತಿಗಳಲ್ಲದೇ ಸ್ಪರ್ಧಾತ್ಮಕ ವಿಷಯಗಳನ್ನು ಸಹ ಇಲ್ಲಿ ಕಾಣಬಹುದು. ಅಲ್ಲದೇ ಮಕ್ಕಳಿಗಾಗಿ 'ಸಮುದಾಯ ಮಕ್ಕಳ ಕಲಿಕಾ ವಿಭಾಗ'ವನ್ನು ಗ್ರಂಥಾಲಯದಲ್ಲಿ ತೆರೆಯಲಾಗಿದ್ದು, ಸುಮಾರು 2000 ಬಗೆಯ ಮಕ್ಕಳ ಪುಸ್ತಕಗಳನ್ನು ಇಲ್ಲಿ ಕಾಣಬಹುದು.

ಸ್ಪರ್ಧಾತ್ಮಕ ವಿಭಾಗದಲ್ಲಿ ಅತಿ ಹೆಚ್ಚು ಪುಸ್ತಕಗಳಿದ್ದು, ಯುವ ಸ್ಪರ್ಧಾರ್ಥಿಗಳ ನೆಚ್ಚಿನ ತಾಣವಾಗಿದೆ. ಇಲ್ಲಿ ಯಾವುದೇ ಪುಸ್ತಕಗಳ ಕೊರತೆಯಿಲ್ಲ. ಉನ್ನತ ಶ್ರೇಣಿಯ ಐಎಎಸ್ ನಿಂದ ಹಿಡಿದು ಎಸ್‌ಡಿಎ, ಎಫ್‌ಡಿಎ ಪ್ರೌಢಶಾಲಾ ಶಿಕ್ಷಕ ವರ್ಗದವರಿಗೆ ಕೆಲಸ ಗಿಟ್ಟಿಸಲು ಉಪಯೋಗವಾಗುವ ಪುಸ್ತಕಗಳಿವೆ. ಹಲವು ಕ್ಷೇತ್ರಗಳಲ್ಲಿ ಹಿಂದುಳಿದಿರುವ ಚಿತ್ರದುರ್ಗದಲ್ಲಿ ಇದೊಂದು ಹೆಮ್ಮೆಯ ವಿಷಯ. ಪರಿಚಾಲನ ವಿಭಾಗದಲ್ಲಿ ಸಾಹಿತಿಗಳ ದರ್ಶನವೇ ಇಡಿಯಾಗಿ ಪುಸ್ತಕಗಳ ರೂಪದಲ್ಲಿ ನಮ್ಮ ಕೈ ಸೇರುತ್ತದೆ. ಕನ್ನಡ, ಸಂಸ್ಕೃತ, ಹಿಂದಿ, ಉರ್ದು, ಇಂಗ್ಲಿಷ್ ತೆಲುಗು, ಭಾಷೆಯ ಸಾಹಿತ್ಯ, ಕಾದಂಬರಿಗಳಿವೆ. ಸಾರ್ವಜನಿಕರು ಹೆಚ್ಚಾಗಿ ಕನ್ನಡ, ತೆಲುಗು ಮತ್ತು ಹಿಂದಿ ಸಾಹಿತ್ಯವನ್ನು ಓದುತ್ತಾರೆ.

ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಅಂಧರ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಬ್ರೈಲ್‌ಲಿಪಿ ಇರುವ ಪುಸ್ತಕಗಳಿವೆ. ಕೃಷ್ಣ ರಾಜೇಂದ್ರ ಗ್ರಂಥಾಲಯ 7 ಶಾಖೆ ಹೊಂದಿದೆ. ಜಿಲ್ಲಾ ಕೇಂದ್ರ ಗ್ರಂಥಾಲಯವು 6 ಶಾಖೆಗಳನ್ನು ಹೊಂದಿದೆ, ಅಲ್ಲದೇ 198 ಗ್ರಾಮ ಪಂಚಾಯತಿ ಗ್ರಂಥಾಲಯಗಳಿವೆ. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ಮತ್ತು ಮೊಳಕಾಲ್ಮೂರುಗಳಲ್ಲಿ 4 ಕೊಳಚೆ ಪ್ರದೇಶ ಹಾಗೂ 4 ಅಲೆಮಾರಿ ಗ್ರಂಥಾಲಯ ಹೊಂದಿದ್ದು ಜನರ ಮೆಚ್ಚುಗೆಗಳಿಸಿವೆ. ಜಿಲ್ಲಾ ಕೇಂದ್ರದಲ್ಲಿ ಕನ್ನಡ, ಹಿಂದಿ, ಆಂಗ್ಲ, ಉರ್ದು, ಮರಾಠಿ ಮತ್ತು ಇತರೆ ಭಾಷೆಗಳ ಸಾಹಿತ್ಯ, ಕವನ, ಚರಿತ್ರೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವಂತೆ 1 ಲಕ್ಷದ 60 ಸಾವಿರ ಪುಸ್ತಕಗಳಿವೆ. ಜಿಲ್ಲೆಯಾದ್ಯಂತ 5 ಲಕ್ಷ ಪುಸ್ತಕಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಪಟ್ಟಂತೆ 8000 ಹಾಗೂ ಸಂಶೋಧನೆಗೆ ಸಂಬಂಧಪಟ್ಟ 10 ಸಾವಿರ ಪುಸ್ತಕಗಳಿವೆ.

ಬಿ.ಎಲ್ ವೇಣು, ತ.ರಾ.ಸು, ಡಾ.ಬಿ. ರಾಜಶೇಖರಪ್ಪ, ಮಂಜುನಾಥ್, ಚಂದ್ರಶೇಖರ್ ತಾಳ್ಯ, ಹುಲ್ಲೂರು ಶ್ರೀನಿವಾಸ್‌ರಂತಹ ಉನ್ನತ ಸಾಹಿತಿಗಳಿಗೆ ಈ ಗ್ರಂಥಾಲಯ ಮಾರ್ಗದರ್ಶನದ ಕೇಂದ್ರವಾಗಿತ್ತು. ಅಲ್ಲದೆ ಹಲವಾರು ಜನ ಐಎಎಸ್, ಐಪಿಎಸ್, ಪಿಎಸ್ಐ, ಪಿಡಿಒ, ಎಫ್‌ಡಿಸಿ, ಎಸ್‌ಡಿಸಿ ಮುಂತಾದ ಸರ್ಕಾರಿ ಹುದ್ದೆ ಅಲಂಕರಿಸಿ ಸೇವೆ ಸಲ್ಲಿಸಲು ಈ ಗ್ರಂಥಾಲಯ ದಾರಿ ಮಾಡಿ ಕೊಟ್ಟಿದೆ. ಕಂಪ್ಯೂಟರ್ ಸೌಲಭ್ಯವಿದ್ದು ಬಡ ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಆನ್‌ಲೈನ್ ಅರ್ಜಿ ಹಾಕಿಕೊಡಲಾಗುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಐಎಎಸ್, ಕೆಎಎಸ್ ಅಧಿಕಾರಿಗಳಿಂದ ಪರೀಕ್ಷಾರ್ಥಿಗಳಿಗೆ ಉನ್ನತ ದರ್ಜೆ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುತ್ತದೆ.

ದಿನಕ್ಕೆ 100 ರಿಂದ 200 ಜನ ಓದುಗರು ಗ್ರಂಥಾಲಯಕ್ಕೆ ಬರುತ್ತಿದ್ದು, ಯುವಜನತೆ ಶೇ.50 ರಷ್ಟಿದ್ದಾರೆ, ನಿಜಕ್ಕೂ ಈ ಗ್ರಂಥಾಲಯ ಎಲ್ಲಾ ಜನತೆಗೆ ಬಾಳು ಕಟ್ಟಿದೆ, ಬೆನ್ನೆಲುಬಾಗಿ ನಿಂತಿದೆ. ಚಿತ್ರದುರ್ಗ ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯವನ್ನು ಮುಖ್ಯ ಗ್ರಂಥಾಲಯಾಧಿಕಾರಿ ಪಿ. ಆರ್ ತಿಪ್ಪೇಸ್ವಾಮಿ ಅವರು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇನ್ನೂ ಹೆಚ್ಚಿನ ಯುವಜನತೆ ಗ್ರಂಥಾಲಯದ ಪುಸ್ತಕಗಳನ್ನು ಸಮರ್ಪವಾಗಿ ಪಡೆದುಕೊಂಡು ಉನ್ನತ ಅಧಿಕಾರಿಗಳಾಗಿ ಜಿಲ್ಲೆಯ ಒಳ್ಳೆಯ ಹೆಸರು ತಂದು ಸಮಾಜ ಸೇವೆಯಲ್ಲಿ ತೊಡಗಬೇಕು ಎನ್ನುವುದು ಅವರ ಆಶಯವಾಗಿದೆ.

ಚಿತ್ರದುರ್ಗದ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಓದಲು ಪಡೆಯಲು ಅನುಕೂಲವಾಗುವಂತೆ ಸದಸ್ಯತ್ವ ನೋಂದಣಿ ಕಾರ್ಡ್ ಅನ್ನು ವಿತರಿಸಲಾಗುತ್ತಿದೆ. ಕಾರ್ಡ್ ಪಡೆಯಲು ಇಚ್ಛಿಸುವವರು, ಗ್ರಂಥಾಲಯದಲ್ಲಿ ಅರ್ಜಿ ಪಡೆದು ಆಧಾರ್‌ಕಾರ್ಡ್, 5 ಫೋಟೋಗಳೊಂದಿಗೆ ಭರ್ತಿ ಮಾಡಿದ ಅರ್ಜಿ ಗ್ರಂಥಾಲಯಕ್ಕೆ ಸಲ್ಲಿಸಿದರೆ 15 ದಿನಗಳಲ್ಲಿ ಕಾರ್ಡ್ ಪಡೆಯಬಹುದು. ಒಂದು ಕಾರ್ಡ್‌ಗೆ 3 ಪುಸ್ತಕಗಳನ್ನು 15 ದಿನಗಳ ಕಾಲಾವಧಿಯಲ್ಲಿ ಪಡೆಯುವ ಅವಕಾಶ ಕಲ್ಪಿಸಿದೆ. ಜಿಲ್ಲೆಯಲ್ಲಿ ಇದುವರೆಗೂ 27 ಸಾವಿರ ಹಾಗೂ ನಗರದಾದ್ಯಂತ 11,456 ರಷ್ಟು ಜನ ಸದಸ್ಯತ್ವ ಪಡೆದು ಗ್ರಂಥಾಲಯದೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ,

ಗ್ರಂಥಾಲಯದ ವತಿಯಿಂದ ಓದುಗರ ಅಭಿಪ್ರಾಯ ಪಡೆದ ಅವರ ಆಸಕ್ತಿಗೆ ಅನುಗುಣವಾಗಿ ಪುಸ್ತಕಗಳನ್ನು ವರ್ಷಕ್ಕೊಮ್ಮೆ ಖರೀದಿಸಲಾಗುತ್ತದೆ. ಪ್ರಚಲಿತ ವಿದ್ಯಮಾನಗಳನ್ನು ತಿಳಿಯಲು ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ದಿನಪತ್ರಿಕೆಗಳ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ನೆರವಾಗುವ ಹಲವಾರು ಪುಸ್ತಕಗಳು, ವಿವಿಧ ಭಾಷೆಯ ನಿಯತಕಾಲಿಕೆಗಳು ಗ್ರಂಥಾಲಯದಲ್ಲಿ ಓದಲು ಲಭ್ಯವಿದೆ. ■



downloaded from: www.kpscvaani.com







# ಬಾರೆಹಣ್ಣು ಬೆಳೆದ ರೈತನಿಗೆ ಲಕ್ಷಾಂತರ ಲಾಭ...

ಭೀಮನಗೌಡ ಪಿ. ಮಂಡಲಮರಿ

ಆದಾಯದ ಕೊರತೆಯನ್ನು ಅನುಭವಿಸಿದ್ದ ಕುಷ್ಟಗಿ ತಾಲೂಕಿನ ತಾವರಗೇರಾ ಸಮೀಪದ ಮೆಣೇದಾಳ ಗ್ರಾಮದ ರೈತ ರಾಮರಾವ್ ರೆಡ್ಡಿಯ 6 ಎಕರೆ ಭೂಮಿಯನ್ನು ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಪಡೆದ ಹನಮೇಶ ಉಡಮಕಲ್ ಎಂಬ ರೈತ ನೀರಿನ ಭವಣೆಯ ನಡುವೆಯೂ ಅದರಲ್ಲಿ ವಾಣಿಜ್ಯ ಬೆಳೆ ಶುಗರ್ ಲೆಸ್ ಬಾರೆಹಣ್ಣು ಬೆಳೆದು ಉತ್ತಮ ಫಸಲಿನ ಜೊತೆಗೆ ಅಧಿಕ ಆದಾಯ ಪಡೆದ ಯಶೋಗಾಥೆ ಇದು.

ಕಾಲಕಾಲಕ್ಕೆ ಮಳೆ ಇಲ್ಲದೆ ಬೆಳೆ ಬರದೆ ಇರುವುದು ಒಂದು ಚಿಂತೆಯಾದರೆ, ಅಂತರ್ಜಲ ಕೊರತೆಯಿಂದ ಬೆಳೆಗಳು ಕೈಗೆ ಬಾರದೇ ಇರುವುದು ಇನ್ನೊಂದು ಚಿಂತೆಗೆ ಇಡು ಮಾಡಿತ್ತು. ರೈತರು ವಾಣಿಜ್ಯ ಬೆಳೆಯನ್ನು ಸಹ ಬೆಳೆಯಲು ಹಿಂಜರಿಯುತ್ತಿದ್ದ ಈ ಸಮಯದಲ್ಲಿ, ಇವರು ಶುಗರ್ ಲೆಸ್ ಬಾರೆಹಣ್ಣು ಬೆಳೆದು ಒಂದು ವರ್ಷದ ಬೆಳೆಯಲ್ಲಿ 7–8 ಲಕ್ಷ ರೂ ಗಿಂತ ಅಧಿಕ ಲಾಭ ಪಡೆದಿದ್ದಾರೆ.

ಆರು ಎಕರೆ ಜಮೀನಿನಲ್ಲಿ 2400 ಸಸಿಗಳನ್ನು ನಾಟಿ ಮಾಡಿದಾಗ ಮಳೆ ಕೊರತೆ ಕಂಡಿತು. ಅಲ್ಲದೆ ಕೊಳವೆ ಬಾವಿಯ



> ನಾನು ಬೆಳೆದಿರುವ ಶುಗರ್ ಲೆಸ್ ಬಾರೆಹಣ್ಣಿಗೆ ಮಾರುಕಟ್ಟೆಯಲ್ಲಿ ಬಾರಿ ಬೇಡಿಕೆ ಕಂಡು ಬರುತ್ತಿದೆ. ಮಾರುಕಟ್ಟೆಯಲ್ಲಿ ಒಂದು ಕೆಜಿಗೆ 30 ರಿಂದ 40ರೂ. ಬೆಲೆ ಸಿಗುತ್ತದೆ. ಈ ವರ್ಷವೂ ಕೂಡ ಫಸಲು ಚೆನ್ನಾಗಿ ಬಿಟ್ಟಿದ್ದು ಲಕ್ಷಾಂತರ ರೂಗಳ ಲಾಭದ ನಿರೀಕ್ಷೆಯಲ್ಲಿದ್ದೇನೆ.
>
> –ರೈತ ಹನಮೇಶ ಉಡಮಕಲ್.

ನೀರಿನ ಅಂತರ್ಜಲ ಕೂಡ ಕುಸಿದು ಗಿಡಗಳಿಗೆ ನೀರಿನ ಕೊರತೆ ಆದಾಗ ಎದೆಗುಂದದ ಹನಮೇಶರು ಬೆಳೆಯನ್ನು ರಕ್ಷಣೆ ಮಾಡಲು ಪಣತೊಟ್ಟು, ಬೆಳೆಯನ್ನು ಕಾಪಾಡಿಕೊಂಡರು. ನಂತರ ಮಳೆಯು ಚೆನ್ನಾಗಿ ಬಂದಿತು. ಇದರಿಂದ ಮತ್ತೊಮ್ಮೆ ನೀರಿನ ಮಟ್ಟ ಹೆಚ್ಚಾಗಿ ಬೆಳೆಗೆ ಆಸರೆ ಕಂಡಿತು. ಈಗ ರಸ್ತೆ ಮೂಲಕ ಹೋಗುವ ಪ್ರಯಾಣಿಕರಿಗೆ ಇವರ ಬಾರೆಹಣ್ಣಿನ ತೋಟ ಬಾಯಲ್ಲಿ ನೀರು ಬರಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರೈತರು ಕೃಷಿಯಿಂದ ನಷ್ಟ ಅನುಭವಿಸಿ ಕೈ ಸುಟ್ಟುಕೊಂಡಿದ್ದಾರೆ. ಸಾಲ ಭಾದೆ ಅನುಭವಿಸಿದ ರೈತ ಕುಟುಂಬಗಳೇ ಹೆಚ್ಚಿವೆ. ಇತರೆ ಬೆಳೆಗಾಗಿ ಮಾಡಿದ ಸಾಲದ ಹಣ ಮರುಪಾವತಿ ಮಾಡದೇ ಸಂಕಷ್ಟದಲ್ಲಿ ಮುಳಗಿರುವ ರೈತರ ನಡುವೆ ಇವರು ಲಾಭಗಳಿಸಿದ್ದಾರೆ. ಪರ್ಯಾಯವಾಗಿ ತೋಟಗಾರಿಕೆ ಬೆಳೆ ಬಾರೆಹಣ್ಣು ಬೆಳೆಯಲು ಮುಂದಾದರು. ಬಾರೆಹಣ್ಣಿನ ಬೆಳೆಯಿಂದ ಆದಾಯ ಪಡೆಯುವ ಪಣ ತೊಟ್ಟರು. ಇವರ ತೋಟದಲ್ಲಿ ಬೆಳೆದ ಬಾರೆಹಣ್ಣನ್ನು ನೋಡಿದ ಈ ಭಾಗದ ಬಹಳಷ್ಟು ರೈತರು ಕೃಷಿಯತ್ತ ಮತ್ತೆ ಮುಖ ಮಾಡುವಂತಾಗಿದೆ.

ಕಳೆದ ಮೂರು ವರ್ಷದ ಹಿಂದೆ ಬಾರೆಹಣ್ಣಿನ ಸಸಿ ನಾಟಿ ಮಾಡಿದ ನಂತರ ಕೀಟ ಭಾದೆಯಿಂದ ಗಿಡವನ್ನು ರಕ್ಷಣೆ ಮಾಡಿಕೊಂಡು ಕಾಲಕಾಲಕ್ಕೆ ರಾಸಾಯನಿಕ ಗೊಬ್ಬರ, ರಾಸಾಯನಿಕ ಕೀಟ ನಾಶಕ ಸಿಂಪಡಣೆ ಮಾಡಿಕೊಂಡು ಬೆಳೆಯನ್ನು ಉತ್ತಮವಾಗಿ ರಕ್ಷಿಸಿಕೊಂಡು ಬಂದಿದ್ದಾರೆ. ಹಾಗಾಗಿ ಈ ವರ್ಷ ಮೊದಲ ಫಸಲಿನಲ್ಲೇ ಪ್ರತಿ ದಿನ 2–5 ಟನ್ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ.

2400 ಗಿಡದಲ್ಲಿ ಕಟಾವಿಗೆ ಬಂದಿರುವ ಬಾರೆ ಹಣ್ಣಿನಿಂದ ಈ ವರ್ಷದಲ್ಲಿ ಈಗಾಗಲೇ 2–5 ಲಕ್ಷ ರೂ.ಗಳ ಆದಾಯವನ್ನು ಪಡೆದುಕೊಂಡಿದ್ದಾರೆ. ಈ ಹಣ್ಣಿಗೆ ಮಾರುಕಟ್ಟೆಯಲ್ಲಿ ಒಂದು ಕೇಜಿಗೆ 30–40 ರೂ ಇದ್ದರೆ, ಜಮೀನಿನಲ್ಲಿ ಖರೀದಿಸಿದರೆ 30 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ಇನ್ನೂ 2–3 ತಿಂಗಳ ಕಾಲ ಹಣ್ಣಿನ ಫಸಲು ಇರುವ ನೀರಿಕ್ಷೆ ಇದ್ದು, 7–8 ಲಕ್ಷ ರೂಗಳ ಆದಾಯ ಬರುವ ಸಾಧ್ಯತೆ ಇದೆ ಎಂದು ರೈತ ಹನಮೇಶ ಉಡಮಕಲ್ ಖುಷಿಯಿಂದ ಹೇಳುತ್ತಾರೆ.

ಪ್ರತಿ ದಿನ ಎರಡರಿಂದ ಎರಡುವರೆ ಟನ್ ಫಸಲು ಬರುತ್ತದೆ. ಅವುಗಳನ್ನು ಪ್ರತಿದಿನ 25–30 ಜನರು ಕಟಾವು ಮಾಡುತ್ತಾರೆ. ಇವರು ಹಣ್ಣುಗಳನ್ನು ಮಾರುಕಟ್ಟೆಗೆ ತಾವೇ ನೇರವಾಗಿ ಮಾರಾಟ ಮಾಡುತ್ತಾರೆ. ಇವರು ಬೆಳೆದ ಬಾರೆ ಹಣ್ಣು ಶುಗರ್ ಲೆಸ್ ಆಗಿರುವುದರಿಂದ ಬಾರಿ ಬೇಡಿಕೆ ಇದ್ದು, ಹೈದ್ರಾಬಾದ್, ಮುಂಬಯಿ, ಮಂಗಳೂರು, ಬೆಂಗಳೂರು ಸೇರಿದಂತೆ ಸಮೀಪದ ಕುಷ್ಟಗಿ, ತಾವರಗೇರಾ, ಕನಕಗಿರಿ, ಕಾರಟಗಿ, ಗಂಗಾವತಿಯ ಮಾರುಕಟ್ಟೆಗೆ ಸರಬರಾಜು ಮಾಡಲಾಗುತ್ತದೆ. ಇನ್ನೂ ಕೆಲವು ಗುತ್ತಿಗೆದಾರರು ಇವರ ಜಮೀನಿಗೆ ನೇರವಾಗಿ ಬಂದು ಟನ್‌ಗಳ ತೂಕದಲ್ಲಿ ಮಾರುಕಟ್ಟೆ ದರದಲ್ಲೇ ತಗೆದುಕೊಂಡು ಹೋಗುತ್ತಾರೆ.





downloaded from: www.kpscvaani.com

# ಕೈತೋಟದಿಂದ ಗಮನ ಸೆಳೆದ ಮಂಜರಿಕೊಪ್ಪ ಹಿರಿಯ ಪ್ರಾಥಮಿಕ ಶಾಲೆ

ಸುಮ.ಜಿ.ಬತ್ತಿಕೊಪ್ಪ









ರಾಜ್ಯದ ಬಹುತೇಕ ಕಡೆಗಳಲ್ಲಿ ಸರ್ಕಾರಿ ಕನ್ನಡ ಶಾಲೆಗಳು ಒಂದಿಲ್ಲೊಂದು ವಿಚಾರದ ಮೂಲಕ ಸಾರ್ವಜನಿಕರ ಗಮನ ಸೆಳೆಯುವ ಕೆಲಸವನ್ನು ಮಾಡುತ್ತಿವೆ. ಅದೇ ರೀತಿಯಲ್ಲಿ ಸುಂದರವಾದ ದೊಡ್ಡ ಮಟ್ಟದಲ್ಲಿ ಕೈತೋಟವನ್ನು ನಿರ್ಮಿಸಿರುವುದರ ಮೂಲಕ ಜಿಲ್ಲಾ ಮಟ್ಟದ 2018–19ನೇ ಸಾಲಿನ ಪರಿಸರ ಮಿತ್ರ ಪ್ರಶಸ್ತಿ ಪಡೆದುಕೊಂಡ ಮಂಜರಿಕೊಪ್ಪ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯು ಶಿವಮೊಗ್ಗ ಜಿಲ್ಲೆಯಲ್ಲಿರುವ ಹಲವಾರು ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಮಾದರಿ ಶಾಲೆಯಾಗಿ ಮಾರ್ಪಟ್ಟಿದೆ.

ಹಸಿರು ವನಸಿರಿಯ ವೈಭವದ ನಡುವೆ ಅರಳಿರುವ ಶಿವಮೊಗ್ಗ ಜಿಲ್ಲೆಯ ಮಲೇಶಂಕರ ಗ್ರಾಮ ಪಂಚಾಯಿತಿಯ ಮಂಜರಿಕೊಪ್ಪ ಶಾಲೆಯು ಎಲೆಮರೆ ಕಾಯಿಯಂತಿದ್ದು ತನ್ನ ಕಾರ್ಯಕ್ಷಮತೆಯ ಮೂಲಕ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ಪ್ರಸ್ತುತ ದಿನಗಳಲ್ಲಿ ನಗರ ಹಾಗೂ ಹಳ್ಳಿಯಲ್ಲಿ ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುವವರ ಸಂಖ್ಯೆಯೇ ಹೆಚ್ಚು. ಸರ್ಕಾರಿ ಶಾಲೆಯಲ್ಲಿ ಅದಿಲ್ಲ ಇದಿಲ್ಲ, ತಮ್ಮ ಮಕ್ಕಳು ಸರಿಯಾಗಿ ಪಾಠ ಕಲಿಯುವುದಿಲ್ಲ ಎಂಬ ನೆಪಗಳನ್ನು ಹೇಳುತ್ತಾ ಪೋಷಕರು ಇಂಗ್ಲೀಷ್ ವ್ಯಾಮೋಹಕ್ಕೆ ಮರುಳಾಗಿ ಲಕ್ಷಾಂತರ ರೂ. ಡೊನೇಷನ್ ಕೊಟ್ಟು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಅಂತಹ ಶಾಲೆಗಳಲ್ಲಿ ಮಕ್ಕಳಿಗೆ ವೈಜ್ಞಾನಿಕ, ನೈತಿಕ ಮೌಲ್ಯಗಳ ಅರಿವು ಸಿಗುತ್ತಿಲ್ಲವೆಂದು ಗೊತ್ತಿದ್ದರೂ ಪೋಷಕರು ತನ್ನ ಮಗು ಇಂಗ್ಲೀಷ್‌ನಲ್ಲಿ ಪ್ರವೀಣನಾದರೆ ಸಾಕೆಂಬ ಮನೋಭಾವವನ್ನು ಹೊಂದಿರುತ್ತಾರೆ.

ಪರಿಸರ ನೈರ್ಮಲ್ಯ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಕರು ಇಂದು ಮಕ್ಕಳಿಗೆ ವಿಷಯ ಪರಿಣಿತಿಯ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಕೃಷಿಯಲ್ಲಿ ಆಸಕ್ತಿಯನ್ನು ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಮಂಜರಿಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಒಂದು ಅದ್ಭುತ ನಿಸರ್ಗಧಾಮವನ್ನಾಗಿ ಸೃಷ್ಟಿಸುವ ಕಾರ್ಯದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಎಸ್.ಡಿ.ಎಮ್.ಸಿ ಸದಸ್ಯರುಗಳು ಒಟ್ಟಾಗಿ ತೊಡಗಿಸಿಕೊಂಡಿದ್ದಾರೆ.

ಶಿಕ್ಷಕರಲ್ಲಿನ ಪರಿಸರ ಪ್ರೇಮ, ಕಾಳಜಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಧ್ಯೇಯ, ಪಠ್ಯೇತರ ಚಟುವಟಿಗಳಲ್ಲೂ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಇರಬೇಕು ಹಾಗೂ ಯುವ ಜನತೆಯಲ್ಲಿ ಕೃಷಿ ಕ್ಷೇತ್ರ, ತೋಟಗಾರಿಕೆಗಳ ಮೇಲಿನ ಒಲವು ಕ್ಷೀಣಿಸುತ್ತಿರುವ ಈ ಕಾಲದಲ್ಲಿ ಇವುಗಳೆಲ್ಲವುಗಳ ಅರಿವು ಮಕ್ಕಳಲ್ಲಿ ಇರಬೇಕೆಂಬ ಉದ್ದೇಶದಿಂದಾಗಿ ಈ ಕಾರ್ಯಚಟುವಟಿಕೆಯಲ್ಲಿ ಮಕ್ಕಳೇ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ.

ಶಾಲಾ ಆವರಣದಲ್ಲಿ ಆಕರ್ಷಕವಾದ ಕೈತೋಟ ಹಾಗೂ ತರಗತಿ ಮುಂಭಾಗದಲ್ಲಿ ನೆಡಲಾಗಿರುವ ಸುಂದರವಾದ ಗಿಡಗಳು ಮಕ್ಕಳ ಕಲಿಕೆಗೆ ಪೂರಕವಾಗಿದೆ. ಶಾಲಾ ಆವರಣದಲ್ಲಿ ಅಗತ್ಯವಿರುವ ತರಕಾರಿ, ಹಣ್ಣು, ಹೂವಿನ ಗಿಡಗಳನ್ನು ಬೆಳೆಸುವ ಮೂಲಕ ವಿದ್ಯಾರ್ಥಿಗಳಲ್ಲಿ ಕೈ ತೋಟದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಇರುವ ವಿದ್ಯಾರ್ಥಿಗಳನ್ನೇ ವಿವಿಧ ತಂಡಗಳಾಗಿ ರಚಿಸಿ ಕೈತೋಟದ ನಿರ್ವಹಣಾ ಜವಾಬ್ದಾರಿ ವಹಿಸಲಾಗಿದೆ. ಪ್ರತಿನಿತ್ಯ ಒಂದೊಂದು ತಂಡದವರು ಗಿಡಗಳಿಗೆ ನೀರು ಹಾಕಿ ಪೋಷಿಸಿ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಬಿಡುವಿನ ವೇಳೆಯಲ್ಲಿ ಶಾಲಾ ಆವರಣದ ಖಾಲಿಯಿರುವ ಸ್ಥಳಗಳಲ್ಲಿ ಗಿಡ ನೆಡುವುದು,



ವಾರಕ್ಕೊಮ್ಮೆ ಶ್ರಮದಾನ ಮಾಡುವುದು ಮುಂತಾದವುಗಳನ್ನು ಸ್ವಯಂಪ್ರೇರಿತರಾಗಿ ಮಕ್ಕಳು ಮತ್ತು ಶಿಕ್ಷಕರು ಮಾಡುತ್ತಾರೆ.

ಈ ಶಾಲೆಯ ಕೈತೋಟದಲ್ಲಿ ಹಲವಾರು ಬಗೆಬಗೆಯ ಹೂವಿನ ಗಿಡಗಳು, ಆಯುರ್ವೇದ ಸಸ್ಯಗಳು ಶುಗರ್, ಬಿ.ಪಿ, ಹಿಪ್ಲಿ, ದೊಡ್ಡಪತ್ರೆ, ಇಲಿಕಿವಿರು ಇನ್ನು ಹಲವಾರು ಧನ್ವಂತರಿಗಿಡಗಳು, ತರಕಾರಿ ಹಾಗೂ ಎಲ್ಲಾ ಬಗೆಯ ಸೊಪ್ಪುಗಳು, ಪಪ್ಪಾಯಿ, ಸಪೋಟ, ಬಾಳೆಗಿಡ, ತೆಂಗು, ಅಡಿಕೆ ಮರಗಳನ್ನು ಕಾಣಬಹುದಾಗಿದೆ. ಸಸ್ಯವನದ ಮಧ್ಯ ಭಾಗದಲ್ಲೊಂದು ಗುರುಕುಲ ಪದ್ಧತಿಯಲ್ಲಿ ಮಕ್ಕಳಿಗೆ ಅರಿವು ಮೂಡಿಸುವ ಸಲುವಾಗಿ ಕುಟೀರ ಪಾಠವನ್ನು ನಡೆಸಲಾಗುತ್ತದೆ.

ಮಂಜರಿಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಪರಿಸರ ಮಾಲಿನ್ಯ ಮಂಡಳಿಯಿಂದ ಕೊಡ ಮಾಡುವ ಪರಿಸರ ಮಿತ್ರ ಪ್ರಶಸ್ತಿಯ ಜೊತೆಗೆ 2ಬಾರಿ ಹಸಿರು ಮಿತ್ರ ಪ್ರಶಸ್ತಿಯನ್ನು, 1ಬಾರಿ ಪರಿಸರ ಮಿತ್ರ (2018–19), 1 ಬಾರಿ ಧನ್ವಂತರಿ (2018–19) ಪ್ರಶಸ್ತಿಗೆ ಭಾಜನವಾಗಿದೆ. ಶಾಲೆಯ ಸುತ್ತಮುತ್ತ ಕೈತೋಟದಿಂದ ಅತ್ಯುತ್ತಮ ಪರಿಸರ ನಿರ್ಮಾಣವಾಗಿದೆ. ಇದು ಶಾಲೆಯ ಚೆಂದವನ್ನು ಹೆಚ್ಚಿಸಿದೆ. ಇನ್ನು ಶೌಚಾಲಯ ನಿರ್ವಹಣೆ, ಶುದ್ಧ ಕುಡಿಯುವ ನೀರು, ಹಸಿಕಸ ಮತ್ತು ಒಣಕಸಗಳ ಬೇರ್ಪಡಿಸುವಿಕೆ, ಈ ಎಲ್ಲ ಅಂಶಗಳು ಶಾಲೆ ಹಸಿರು ಶಾಲೆ ಪ್ರಶಸ್ತಿ ಪಡೆಯಲು ಕಾರಣವಾಗಿದೆ ಎನ್ನುತ್ತಾರೆ ಶಾಲಾ ಮುಖ್ಯೋಪಾಧ್ಯಾಯ ರವಿ ಸೂಗುರು.

ಈ ಶಾಲೆಯಲ್ಲಿ ಒಟ್ಟು ಒಂದರಿಂದ ಏಳನೇಯ ತರಗತಿವರೆಗೆ 53 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಮಕ್ಕಳು ಕೇವಲ ಪಠ್ಯ ಚಟುವಟಿಕೆಯಲ್ಲದೇ ಆಟೋಟಗಳಲ್ಲೂ ಮುಂದಿದ್ದಾರೆ. 2019–20ನೇ ಸಾಲಿನ ರಾಜ್ಯಮಟ್ಟ ಚೆಸ್ ಪಂದ್ಯಾವಳಿಗೆ ಆಯ್ಕೆಯಾಗಿ ಭಾಗವಹಿಸಿರುತ್ತಾರೆ. ಹಾಗೇ ವಲಯ ಮಟ್ಟದ ಕ್ರೀಡೆಯಲ್ಲೂ ಕೂಡ ಮುಂದಿದ್ದಾರೆ. ಮಕ್ಕಳು ಶಾಲೆಗೆ ತಪ್ಪಿಸಿಕೊಳ್ಳದಂತೆ ಹಾಗೂ ಮಕ್ಕಳ ಕಲಿಕೆಯಿಂದ ಕುಟುಂಬಕ್ಕಾಗುವ ಅನುಕೂಲದ ಬಗ್ಗೆ ಪ್ರತಿ ತಿಂಗಳು ಪೋಷಕರ ಸಭೆ ನಡೆಸಲಾಗುವುದು. ಹಾಗೇ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಮಕ್ಕಳ ಕಲಿಕೆಗೆ ಪೂರಕವಾಗುವ ಕಾಯಕದಲ್ಲಿ ನಿರತರಾಗುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ■





downloaded from: www.kpscvaani.com



# ಯುವಕರ ಆರಾಧ್ಯ ದೈವ
# ಸುಭಾಷ್ ಚಂದ್ರ ಬೋಸ್

ಡಾ। ಕೆ. ಪುಟ್ಟಸ್ವಾಮಿ

ಅವರು ಮಹಾತ್ಮಾ ಗಾಂಧೀಜಿಯವರಿಗಿಂತ ಕಿರಿಯರಾದರೂ ಹೋರಾಟದಲ್ಲಿ ಸಮಕಾಲೀನರು. ಹಲವು ಬಾರಿ ಗಾಂಧೀಜಿಯ ಜೊತೆ ಸಖ್ಯ ಸಾಧಿಸಿದ್ದರು. ಬೇರೆ ಬೇರೆ ಸಂದರ್ಭಗಳಲ್ಲಿ ಅಭಿಪ್ರಾಯ ಭೇದ ಹೊಂದಿದ್ದರು. ತಾವು ನಂಬಿದ ಸಿದ್ಧಾಂತಗಳ ಆಧಾರದ ಮೇಲೆ ಗಾಂಧೀ–ಸುಭಾಷ್ ಎದುರು ಬದುರು ನಿಂತರೂ, ವೈಯಕ್ತಿಕ ನೆಲೆಯಲ್ಲಿ ವಿಶ್ವಾಸ–ಗೌರವಗಳ ಸಂಬಂಧಗಳಿಂದ ಬಂಧಿಯಾಗಿದ್ದರು.



ತಾಯ್ನಾಡಿನ ಸೇವೆಗಾಗಿ ಪ್ರಾಣವನ್ನು ಮುಡುಪಿಡುವ ಯುವಕರ ಪಾಲಿನ ಆದರ್ಶ ಪುರುಷರು ಯಾರಿರಬಹುದು ಎಂದರೆ ಥಟ್ಟನೆ ಎರಡು ಹೆಸರುಗಳು ಹೊಳೆಯುತ್ತವೆ. ಒಂದು ನೇತಾಜಿ ಸುಭಾಷ್ ಚಂದ್ರ ಬೋಸ್, ಮತ್ತೊಂದು ಹುತಾತ್ಮ ಭಗತ್ ಸಿಂಗ್. ಇಬ್ಬರೂ ತಮ್ಮ ತಾಯ್ನಾಡಿನ ವಿಮೋಚನೆಯ ಹೋರಾಟದಲ್ಲಿ ಜೀವತೆತ್ತ ಹುತಾತ್ಮರು.

"ನೀವು ನನಗೆ ರಕ್ತಕೊಡಿ; ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ"– ಇದು ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಯಲ್ಲಿ ನಲುಗಿದ್ದ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡುವ ಹೋರಾಟದಲ್ಲಿ ಪಾಲ್ಗೊಂಡಿದ್ದ ಸುಭಾಷ್ ಚಂದ್ರ ಬೋಸ್ ಅವರು ದೇಶದ ಯುವ ಜನತೆಗೆ ನೀಡಿದ ಕರೆ. ಯುವಕರ ಮೇಲೆ ಸುಭಾಷ್ ಅವರು ಅಂದಿನ ಕಾಲದಲ್ಲಿಯೇ ಅಪಾರವಾದ ಮೋಡಿ ಮಾಡಿದ್ದರು. ಅವರ ಅಸಾಮಾನ್ಯ ನಾಯಕ ಗುಣ, ಸ್ಫೂರ್ತಿಯುತ ಭಾಷಣಗಳು ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಅವರಿಗಿದ್ದ ಬದ್ಧತೆಯಿಂದಾಗಿ ಜನಸಮೂಹ ಅವರನ್ನು 'ನೇತಾ' (ನಾಯಕ) ಎಂದೇ ಒಪ್ಪಿಕೊಂಡಿತ್ತು. ಅದಕ್ಕಾಗಿಯೇ ಅವರು ನೇತಾಜಿ ಎಂದು ದೇಶಕ್ಕೆ ಸುಪರಿಚಿತರಾದರು.

ಅವರು ಮಹಾತ್ಮಾ ಗಾಂಧೀಜಿಯವರಿಗಿಂತ ಕಿರಿಯರಾದರೂ ಹೋರಾಟದಲ್ಲಿ ಸಮಕಾಲೀನರು. ಹಲವು ಬಾರಿ ಗಾಂಧೀಜಿಯ ಜೊತೆ ಸಖ್ಯ ಸಾಧಿಸಿದ್ದರು. ಬೇರೆ ಬೇರೆ ಸಂದರ್ಭಗಳಲ್ಲಿ ಅಭಿಪ್ರಾಯ ಭೇದ ಹೊಂದಿದ್ದರು. ತಾವು ನಂಬಿದ ಸಿದ್ಧಾಂತಗಳ ಆಧಾರದ ಮೇಲೆ ಗಾಂಧೀ–ಸುಭಾಷ್ ಎದುರು ಬದುರು ನಿಂತರೂ, ವೈಯಕ್ತಿಕ ನೆಲೆಯಲ್ಲಿ ವಿಶ್ವಾಸ–ಗೌರವಗಳ ಸಂಬಂಧಗಳಿಂದ ಬಂಧಿಯಾಗಿದ್ದರು. ಆದರೆ ನಲವತ್ತೆಂಟು ವರ್ಷಗಳ ಕಾಲ ವಿರೋಚಿತ ಬದುಕನ್ನು ಬಾಳಿದ ಸುಭಾಷ್ ಚಂದ್ರ ಬೋಸರ ಜೀವನವೇ ಒಂದು ರೋಚಕ ಕಥಾನಕ.

ಸುಭಾಷ್ ಚಂದ್ರ ಬೋಸ್ ಅವರು ಜನಿಸಿದ್ದು 1897ರ ಜನವರಿ 23 ರಂದು. ಅಂದಿನ ಕಾಲದಲ್ಲಿ ಬಂಗಾಳ ಪ್ರಾಂತ್ಯಕ್ಕೆ ಸೇರಿದ್ದ ಒಡಿಸ್ಸಾ ರಾಜ್ಯದ ಕಟಕ್‌ನಲ್ಲಿ. ಅವರದು ಶ್ರೀಮಂತ ಕುಟುಂಬ. ತಂದೆ ಜಾನಕಿನಾಥ್ ಬೋಸ್ ಕಟಕ್‌ನಲ್ಲಿ ಯಶಸ್ವಿ ವಕೀಲರು. ತಾಯಿ ಪ್ರಭಾವತಿ ದತ್ ಬೋಸ್. ಈ ದಂಪತಿಗಳಿಗೆ ಜನಿಸಿದ ಹದಿನಾಲ್ಕು ಮಕ್ಕಳಲ್ಲಿ ಸುಭಾಷ್ ಒಂಬತ್ತನೆಯವರು.

ಶ್ರೀಮಂತ ಕುಟುಂಬದಲ್ಲಿ ಜನಿಸಿದ ಸುಭಾಷ್‌ರವರಿಗೆ ಉತ್ತಮ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಅವಕಾಶಗಳು ದೊರೆತವು. 1902 ರಿಂದ 1909 ರವರೆಗೆ ಕಟಕ್‌ನ ಪ್ರೊಟೆಸ್ಟಂಟ್ ಯೂರೋಪಿಯನ್ ಶಾಲೆಯಲ್ಲಿ ಕಲಿತ ಅವರು ರಾವೆನ್ ಷಾ ಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪಾಸು ಮಾಡಿದ ನಂತರ ಕಲ್ಕತ್ತಾದ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜಿಗೆ ದಾಖಲಾದರು. ವ್ಯಾಸಂಗದಲ್ಲಿ ತುಂಬಾ ಜಾಣರಾಗಿದ್ದ ಅವರು ಅತ್ಯಂತ ಸ್ವಾಭಿಮಾನಿಯೂ ಆಗಿದ್ದರು. ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಬದುಕು–ಬರಹಗಳಿಂದ ಪ್ರಭಾವಿತರಾಗಿದ್ದ ಅವರು ಕಲ್ಕತ್ತಾದಲ್ಲಿ ಬ್ರಿಟಿಷರು ಭಾರತೀಯರನ್ನು ಅವಹೇಳನಕಾರಿಯಾಗಿ ಕಾಣುವುದರ ವಿರುದ್ಧ ರೊಚ್ಚಿಗೆದ್ದರು. ಕಾಲೇಜಿನಲ್ಲಿ ಕೆಲವು ಭಾರತೀಯ ವಿದ್ಯಾರ್ಥಿಗಳ ಮೇಲೆ ಕೈ ಮಾಡಿದ್ದ ಇ.ಎಫ್.ಓಟ್ಟೆನ್ ಎಂಬ ಪ್ರೊಫೆಸರನ್ನು ಥಳಿಸಿದ್ದರು. ಆ ಪ್ರಕರಣದಿಂದಾಗಿ ಆ ಕಾಲೇಜನ್ನು ತೊರೆದ ಬಳಿಕ ಕಲ್ಕತ್ತಾ ವಿಶ್ವವಿದ್ಯಾಲಯದ ಸ್ಕಾಟಿಷ್‌ಚರ್ಚ್ ಕಾಲೇಜಿಗೆ ಸೇರಿ 1819ರಲ್ಲಿ ಬಿ.ಎ. ಪದವಿ ಪಡೆದರು. ತಂದೆಯ ಆದೇಶದಂತೆ ಇಂಗ್ಲೆಂಡ್‌ಗೆ ತೆರಳಿದ ಅವರು  ನಾಗರಿಕ ಸೇವಾ ಪರೀಕ್ಷೆಯಲ್ಲಿ(ಐ.ಸಿ.ಎಸ್.)







downloaded from: www.kpscvaani.com



ನಾಲ್ಕನೆಯ ಶ್ರೇಯಾಂಕ ಪಡೆದು ತೇರ್ಗಡೆಯಾದರು. ಬ್ರಿಟಿಷರ ಅಡಿಯಲ್ಲಿ ಆಡಳಿತ ಸೇವೆಯನ್ನು ಮಾಡಲು ಅವರು ಇಚ್ಛಿಸದೆ ದಾಸ್ಯದಿಂದ ದೇಶವನ್ನು ವಿಮೋಚನೆಗೊಳಿಸಲು ರಾಜೀನಾಮೆ ಸಲ್ಲಿಸಿ 1921ರಲ್ಲಿ ಭಾರತಕ್ಕೆ ಆಗಮಿಸಿದರು.

ಭಾರತಕ್ಕೆ ಬಂದ ಕೂಡಲೇ ಅವರು ಗಾಂಧೀಜಿಯವರ ಅಸಹಕಾರ ಚಳವಳಿಗೆ ಸೇರಿದರು. ಮಹಾತ್ಮರ ಆಣತಿಯಂತೆ ಮತ್ತೊಬ್ಬ ಹೋರಾಟಗಾರ ಚಿತ್ತರಂಜನ ದಾಸ್ ಅವರೊಡನೆ ಕಲ್ಕತ್ತಾದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಮುಂದುವರೆಸಿದರು. 'ಸ್ವರಾಜ್' ಎಂಬ ಪತ್ರಿಕೆಯನ್ನು ಆರಂಭಿಸಿದರು. ದಾಸ್ ಅವರ 'ಫಾರ್ವರ್ಡ್' ಪತ್ರಿಕೆಯನ್ನು ಸಂಪಾದಿಸಿದರು. ತಮ್ಮ

> ಬ್ರಿಟಿಷರ ವಿರುದ್ಧ ಸಮುದಾಯ ಆಂದೋಲನವನ್ನು ಹುಟ್ಟುಹಾಕಲು ಅವರು ಯುವಕರನ್ನು ಪ್ರಚೋದಿಸಿದರು. "ನನಗೆ ನಿಮ್ಮ ರಕ್ತಕೊಡಿ, ನಾನು ಸ್ವಾತಂತ್ರ್ಯ ಕೊಡುತ್ತೇನೆ" ಎಂಬ ಘೋಷಣೆಯಿಂದ ಯುವ ಜನತೆ ಸ್ಫೂರ್ತಿಗೊಂಡಿತು.

ಸ್ಫೂರ್ತಿಯುತ ಭಾಷಣ, ಅರ್ಪಣಾ ಮನೋಭಾವ ಮತ್ತು ದಣಿವರಿಯದ ಹೋರಾಟದಿಂದ ಯುವಕರ ಮೇಲೆ ಗಾಢ ಪ್ರಭಾವ ಬೀರಿದರು.

ಕಾಂಗ್ರೆಸ್ ಸಂಸ್ಥೆಯ ಯುವ ಜನತೆಯನ್ನು ಪ್ರತಿನಿಧಿಸಿದ ಸುಭಾಷ್‌ಚಂದ್ರ ಬೋಸ್ ಅವರಿಗೆ, ಕಾಂಗ್ರೆಸ್‌ನ ಸೌಮ್ಯವಾದಿ ಹೋರಾಟದ ವಿಧಾನಗಳು ಹಿಡಿಸಲಿಲ್ಲ. ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ಮಾತ್ರ ವಿಮೋಚನೆ ತಂದು ಕೊಡಬಲ್ಲದು ಎಂಬುದು ಅವರ ತರ್ಕವಾಗಿತ್ತು. ಶಾಂತಿ ಅಹಿಂಸೆಯ ಹೋರಾಟಗಾರರಾಗಿದ್ದ ಗಾಂಧೀಜಿಯವರ ಅನುಯಾಯಿಗಳು ಮತ್ತು ಸುಭಾಷರ ನಡುವೆ ಭಿನ್ನಾಭಿಪ್ರಾಯಗಳು ಉಂಟಾದವು. 1928ರಲ್ಲಿ ಗೌಹಾಟಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇದು ಬಹಿರಂಗವಾಯಿತು. ಸುಭಾಷ್‌ರವರ ಹೋರಾಟ ವಿಧಾನವನ್ನು ಒಪ್ಪಿದ ಅನುಯಾಯಿಗಳ ಸಂಖ್ಯೆ ಹೆಚ್ಚಾಯಿತು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಾಂಧೀಜಿಯವರ ವಿರೋಧದ ನಡುವೆಯೂ ಸುಭಾಷ್ ಆರಿಸಿ ಬಂದರು. ಗಾಂಧೀಜಿಯವರು ಅನುಮೋದಿಸಿದ್ದ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯ ಸೋಲು ಕಂಡರು. ಆದರೆ ಕಾಂಗ್ರೆಸ್‌ನಲ್ಲಿ ತಮ್ಮ ಬಗ್ಗೆ ಇದ್ದ ಅಸಹನೆಯಿಂದ ಕೆರಳಿದ ಸುಭಾಷ್ ಅವರು 1939ರಲ್ಲಿ ರಾಜೀನಾಮೆ ನೀಡಿ ಅದೇ ವರ್ಷ 'ಫಾರ್ವರ್ಡ್ ಬ್ಲಾಕ್' ಎಂಬ ಸಂಸ್ಥೆ ಸ್ಥಾಪಿಸಿದರು.

ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರನ್ನು ಬೆಂಬಲಿಸಲು ಕಾಂಗ್ರೆಸ್ ತಳೆದ ನಿರ್ಧಾರವನ್ನು ಸುಭಾಷ್ ತೀವ್ರವಾಗಿ



downloaded from: www.kpscvaani.com



ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಾಂಧೀಜಿಯವರ ವಿರೋಧದ ನಡುವೆಯೂ ಸುಭಾಷ್ ಆರಿಸಿ ಬಂದರು. ಗಾಂಧೀಜಿಯವರು ಅನುಮೋದಿಸಿದ್ದ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯ ಸೋಲು ಕಂಡರು. ಆದರೆ ಕಾಂಗ್ರೆಸ್‌ನಲ್ಲಿ ತಮ್ಮ ಬಗ್ಗೆ ಇದ್ದ ಅಸಹನೆಯಿಂದ ಕೆರಳಿದ ಸುಭಾಷ್ ಅವರು 1939ರಲ್ಲಿ ರಾಜೀನಾಮೆ ನೀಡಿ ಅದೇ ವರ್ಷ 'ಫಾರ್ವರ್ಡ್ ಬ್ಲಾಕ್' ಎಂಬ ಸಂಸ್ಥೆ ಸ್ಥಾಪಿಸಿದರು.

ವಿರೋಧಿಸಿದರು. ಬ್ರಿಟಿಷರ ವಿರುದ್ಧ ಸಮುದಾಯ ಆಂದೋಲನವನ್ನು ಹುಟ್ಟುಹಾಕಲು ಅವರು ಯುವಕರನ್ನು ಪ್ರಚೋದಿಸಿದರು. "ನನಗೆ ನಿಮ್ಮ ರಕ್ತಕೊಡಿ, ನಾನು ಸ್ವಾತಂತ್ರ್ಯ ಕೊಡುತ್ತೇನೆ" ಎಂಬ ಘೋಷಣೆಯಿಂದ ಯುವ ಜನತೆ ಸ್ಫೂರ್ತಿಗೊಂಡಿತು. ಸುಭಾಷರ ಬೆಳೆಯುತ್ತಿರುವ ಜನಪ್ರಿಯತೆ ಕಂಡು ಕಂಗಾಲಾದ ಬ್ರಿಟಿಷ್ ಸರ್ಕಾರ ಅವರನ್ನು ಸೆರೆಯಲ್ಲಿಟ್ಟಿತು. ಜೈಲಿನಲ್ಲಿ ಅವರು ಉಪವಾಸ ಆರಂಭಿಸಿದರು. ಅವರ ಆರೋಗ್ಯ ಹದಗೆಟ್ಟಿತು. ಹೆದರಿದ ಬ್ರಿಟಿಷ್ ಸರ್ಕಾರ ಸೆರೆಯಿಂದ ಬಿಡಿಸಿ ಗೃಹ ಬಂಧನದಲ್ಲಿಟ್ಟಿತು.

ಬೋಸ್ ಅವರು 1941 ಜನವರಿಯಲ್ಲಿ ಗೃಹಬಂಧನದಿಂದ ತಪ್ಪಿಸಿಕೊಂಡು ಪೆಷಾವರದ ಮೂಲಕ ಜರ್ಮನಿಯ ಬರ್ಲಿನ್ ತಲುಪಿದರು. ಮಿತ್ರ ರಾಷ್ಟ್ರಗಳ ವಿರುದ್ಧದ ಬಣವಾದ ಅಕ್ಷ ರಾಷ್ಟ್ರಗಳು, ವಿಶೇಷವಾಗಿ ಜರ್ಮನಿ ಮತ್ತು ಜಪಾನ್ ದೇಶಗಳು ಸುಭಾಷರ ಭಾರತ ವಿಮೋಚನೆಯ ಹೋರಾಟಕ್ಕೆ ನೆರವು ನೀಡುವ ಭರವಸೆ ನೀಡಿದವು. ಪೂರ್ವಭಾಗದಿಂದ ಬ್ರಿಟಿಷ್ ಭಾರತದ ವಿರುದ್ಧ ಯುದ್ಧ ಮಾಡುವುದು ಸೂಕ್ತವೆಂದು ಭಾವಿಸಿದ ಸುಭಾಷರು 1943ರಲ್ಲಿ ಜರ್ಮನಿಯಿಂದ ಜಪಾನ್‌ಗೆ ಸಾಹಸಮಯ ಪ್ರಯಾಣ ಕೈಗೊಂಡರು. ಶತ್ರು ದೇಶಗಳ ಮಾರ್ಗದಲ್ಲಿ, ಜಲಾಂತರ್ಗಾಮಿಯಲ್ಲಿ ಸಾವಿರಾರು ಮೈಲು ಎಲ್ಲ ಅಪಾಯಗಳನ್ನು ಎದುರು ಹಾಕಿಕೊಂಡು ಪ್ರಯಾಣಿಸಿದ ಬೋಸ್ ಅವರು ಜಪಾನ್ ತಲುಪಿದರು. ಜಪಾನ್ ಅವರನ್ನು ಭಾರತೀಯ ಸೈನ್ಯದ ಮುಖ್ಯಸ್ಥರೆಂದು ಘೋಷಿಸಿತು. ಸಿಂಗಾಪುರ ಮತ್ತು ಇತರ ಪೂರ್ವ ರಾಷ್ಟ್ರಗಳ ನಲವತ್ತು ಸಾವಿರ ಸೈನಿಕರ ಸೈನ್ಯಕ್ಕೆ ಅವರು ದಂಡಾಧಿಪತಿಯಾದರು. ಅದನ್ನು ಅವರು ಇಂಡಿಯನ್ ನ್ಯಾಷನಲ್ ಆರ್ಮಿ (ಐಎನ್‌ಎ) ಅಥವಾ 'ಆಜಾದ್ ಹಿಂದ್ ಫೌಜ್' ಎಂದು ಕರೆದರು. ಆ ಸೈನ್ಯವು ಬ್ರಿಟಿಷರ ವಶದಲ್ಲಿದ್ದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಗೆದ್ದು 'ಸ್ವತಂತ್ರ ಭಾರತ ಸರ್ಕಾರ'ವನ್ನು ಸ್ಥಾಪಿಸಿತು.(21.10.1943) ಭಾರತೀಯ ಸೈನಿಕರೊಬ್ಬರು ಆಡಳಿತಾಧಿಕಾರಿಯಾಗಿ ನೇಮಕಗೊಂಡರು. ಆದರೂ ಜಪಾನಿನ ನೌಕಾ ಸೇನೆ ದ್ವೀಪಗಳ ಆಡಳಿತವನ್ನು ನಿಯಂತ್ರಿಸುತ್ತಿತ್ತು.

ಆ ವೇಳೆಗೆ ನೇತಾಜಿ ಎಂಬ ಅಭಿದಾನಕ್ಕೆ ಪಾತ್ರರಾಗಿದ್ದ ಸುಭಾಷರು ಬರ್ಮಾ ಮೂಲಕ ಭಾರತದತ್ತ ತಮ್ಮ ಸೈನ್ಯವನ್ನು ಮುನ್ನಡೆಸಿದರು. ಐ.ಎನ್.ಎ. ಭಾರತದ ಗಡಿಯಲ್ಲಿದ್ದ ಕಾಕ್ಸ್‌ಟೌನ್ ಎಂಬ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಭಾರತದ ಒಂದು ಭಾಗವನ್ನು ಸ್ವತಂತ್ರಗೊಳಿಸಿದ ಸೈನ್ಯವು 'ದೆಹಲಿ ಚಲೋ' ಗುರಿಯಿಂದ ಸನ್ನದ್ಧವಾಯಿತು.

ದುರದೃಷ್ಟವಶಾತ್ ಜಪಾನ್‌ನ ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಬಿದ್ದ ಅಣುಬಾಂಬುಗಳು ಮನುಕುಲದ ದಿಕ್ಕನ್ನೇ ಬದಲಿಸಿದವು. ಜಪಾನ್ ಮತ್ತು ಜರ್ಮನಿಯ ಸೈನ್ಯ ಶರಣಾಯಿತು. ಪ್ರತಿಕೂಲ ಪರಿಸ್ಥಿತಿಯನ್ನು ಮನಗಂಡ ನೇತಾಜಿ ಅವರು ಯುದ್ಧದಿಂದ ಹಿಂದೆಗೆಯಲು ಐ.ಎನ್.ಎ. ಗೆ ಸೂಚಿಸಿ





ಮುಂದಿನ ತಂತ್ರ ಹೆಣೆಯಲು ಚಿಂತಿಸತೊಡಗಿದರು.

ಸೈನ್ಯವು ಹಿಂದೆಗೆದ ನಂತರ ನೇತಾಜಿ ಸಿಂಗಾಪುರಕ್ಕೆ ತೆರಳಿ ಆಗ್ನೇಯ ಏಷ್ಯಾದ ಮಿಲಿಟರಿ ಕಾರ್ಯಾಚರಣೆಯ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಹಿಸೈಚಿತೆರೌಚಿ ಅವರನ್ನು ಭೇಟಿಯಾದರು. ಅವರು ಟೋಕಿಯೋಗೆ ನೇತಾಜಿಯನ್ನು ಕಳಿಸಲು ವಿಮಾನವೊಂದನ್ನು ವ್ಯವಸ್ಥೆಗೊಳಿಸಿದರು. (17.08.1945). ಆ ಯುದ್ಧ ವಿಮಾನದಲ್ಲಿ ಕುಳಿತ ನೇತಾಜಿ ಅವರು ತೈವಾನ್ ವಿಮಾನ ನಿಲ್ದಾಣ ತಲುಪಿ ರಾತ್ರಿ ಅಲ್ಲಿಯೇ ತಂಗಿದ್ದರು. ಮಾರನೆಯ ದಿನ ಮಧ್ಯಾಹ್ನ 2.30ರಲ್ಲಿ ಸುಭಾಷರು ಏರಿದ ವಿಮಾನ ರನ್‌ವೇಯಲ್ಲಿಯೇ ಅಪಘಾತಕ್ಕೀಡಾಗಿ ಸ್ಫೋಟಿಸಿತು. ವಿಮಾನದ ಇಂಧನದಲ್ಲಿ ತೋಯ್ದು ನೇತಾಜಿ ಹೊರಬರುವಾಗ ಬೆಂಕಿ ಹತ್ತಿಕೊಂಡಿತು. ಆಗ ತಕ್ಷಣವೇ ಬೆಂಕಿಯನ್ನು ಆರಿಸಿದರೂ, ನೇತಾಜಿ ಅವರಿಗೆ ಮಾರಣಾಂತಿಕ ಸುಟ್ಟಗಾಯಗಳಾಗಿದ್ದವು. ತೈಹೋಕು ಹತ್ತಿರದಲ್ಲಿದ್ದ ಮಿಲಿಟರಿ ಆಸ್ಪತ್ರೆಯಲ್ಲಿ ನೇತಾಜಿಗೆ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. ಕೋಮಾ ಸ್ಥಿತಿಗೆ ತೆರಳಿದ ಸುಭಾಷರು 1945 ಆಗಸ್ಟ್ 18ರಂದು 48ನೇ ವಯಸ್ಸಿನಲ್ಲಿ ಅಸು ನೀಗಿದರು.

ಲಭ್ಯವಿರುವ ದಾಖಲೆಗಳ ಪ್ರಕಾರ ನೇತಾಜಿ ನಿಧನರಾದ ಎರಡನೆಯ ದಿನ ಅವರ ಶರೀರವನ್ನು ತೈಹೋಕು ಚಿತಾಗಾರದಲ್ಲಿ ಸಂಸ್ಕಾರ ಮಾಡಲಾಯಿತು. (20.08.1945) ಅವರ ಚಿತಾಭಸ್ಮವನ್ನು ಸೆಪ್ಟೆಂಬರ್ 7 ರಂದು ಟೋಕಿಯೋಗೆ ತರಲಾಯಿತು. ಮಾರನೆಯ ದಿನ ಅದನ್ನು ಟೋಕಿಯೋದಲ್ಲಿದ್ದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಅಧ್ಯಕ್ಷ ರಾಮಮೂರ್ತಿ ಅವರಿಗೆ ಹಸ್ತಾಂತರಿಸಲಾಯಿತು. ಅಧ್ಯಕ್ಷರು ಚಿತಾಭಸ್ಮವನ್ನು ಟೋಕಿಯೋದ ನಿಚಿರೆನ್ ಬೌದ್ಧದೇವಾಲಯವಾದ ರೆಂಕೋಜಿ ಮಂದಿರದ ಅರ್ಚಕರಿಗೆ ನೀಡಿದರು. ಆ ದಿನದಿಂದ ಅವರ ಚಿತಾಭಸ್ಮ ರೆಂಕೋಜಿ ಮಂದಿರದಲ್ಲಿಯೇ ಇದೆ.

ಬೋಸ್ ಅವರು ನಿಧನರಾಗಿರುವ ಬಗ್ಗೆ ಅನೇಕರು ನಂಬಲಿಲ್ಲ. ಅವರ ಕಣ್ಮರೆಯ ಹಿಂದೆ ಸಂಚುಗಳಿರಬೇಕೆಂಬ ಗುಮಾನಿಗಳು ಚಾಲ್ತಿಯಲ್ಲಿದ್ದವು. ಗಾಂಧೀಜಿ ಸಹ ಬೋಸ್ ಅವರ ನಿಧನದ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದರು. ಶತ್ರುಗಳಿಂದ ತಪ್ಪಿಸಿಕೊಂಡಿರುವ ಅವರು ಎಲ್ಲೋ ಅಡಗಿದ್ದು ಎಂದಾದರೊಂದು ದಿನ ಮರಳಿ ಭಾರತಕ್ಕೆ ಬರುತ್ತಾರೆಂದು ದೇಶದ ಬಹುತೇಕ ಜನತೆ ನಂಬಿತ್ತು. ಸರ್ಕಾರ ಸತ್ಯಾಸತ್ಯತೆ ಅರಿಯಲು 1946ರಲ್ಲಿ ಫಿಗೆಸ್ ಸಮಿತಿ, 1956ರಲ್ಲಿ ಶಾ ನವಾಜ್ ಸಮಿತಿಯನ್ನು ರಚಿಸಿತು. ಎರಡೂ ಸಮಿತಿಗಳು 1945ರಲ್ಲಿ ನೇತಾಜಿ ತೈವಾನ್‌ನಲ್ಲಿ ನಿಧನರಾದದ್ದನ್ನು ಖಚಿತಪಡಿಸಿದವು. ಅವರ ನಿರೀಕ್ಷೆ ನಿಜವಾಗಲಿಲ್ಲ.

ಹೀಗೆ ಭಾರತದ ಸ್ವಾತಂತ್ರ್ಯ ಆಂದೋಲನದ ಒಬ್ಬ ಸ್ಫೂರ್ತಿಯುತ ನಾಯಕನ ಬದುಕು ಹಠಾತ್ತನೆ ಕೊನೆಗೊಂಡಿತು. ಆದರೂ ಸ್ವತಂತ್ರ ಭಾರತದ ಯುವಕರ ಆರಾಧ್ಯದೈವವಾಗಿ, ದೇಶಭಕ್ತಿ, ನಿಸ್ವಾರ್ಥ ಹೋರಾಟ ಮತ್ತು ತ್ಯಾಗದ ಪ್ರತಿನಿಧಿಯಾಗಿ ಅಮರರಾಗಿದ್ದಾರೆ.



downloaded from: www.kpscvaani.com

# ಎಂದೂ ಬತ್ತದ ದೇವಗಂಗೆ ಕೊಳ

ಟಿ. ಶಿವಕುಮಾರ್

ದೇವಗಂಗೆಯ ಕೊಳದಲ್ಲಿ ಸರ್ವ ಋತುವಿನಲ್ಲೂ ನೀರು ತುಂಬಿರುತ್ತದೆ. ಅದೂ ಅಳತೆ ಮಾಡಿದಂತೆ. ಯಾವ ಕಾಲದಲ್ಲೂ ಹೆಚ್ಚುವುದೂ ಇಲ್ಲ, ಬತ್ತುವುದೂ ಇಲ್ಲ. ಹಾಗಂತ ಇದು ನಿಂತ ನೀರು ಇರಬೇಕೆಂದು ಭಾವಿಸಬೇಡಿ. ಬನ್ನಿ, ಹಾಗಾದರೆ ಇದರ ಪರಿಚಯವನ್ನು ಸ್ವಲ್ಪ ತಿಳಿಯೋಣ...

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ನಗರದಿಂದ ಕೊಲ್ಲೂರು ಮಾರ್ಗವಾಗಿ ಸಾಗುವಾಗ ನಗರದಿಂದ 2 ಕಿ.ಮೀ ಪ್ರಯಾಣಿಸಿದರೆ ಬಲಗಡೆ ಒಂದು ಚಿಕ್ಕ ದಾರಿ ಕಾಣುತ್ತದೆ, ಅದೇ ಈ ದೇವಗಂಗೆಗೆ ಹೋಗುವ ಹಾದಿ. ಅಲ್ಲಿಂದ ಸುಮಾರು ಎರಡ್ನೂರು ಕಿ.ಮೀ ಪ್ರಯಾಣಿಸಿದರೆ ನಿಮಗೆ ದೇವಗಂಗೆ ಕೊಳ ಸಿಗುತ್ತದೆ. ಕಲ್ಲು ಮಣ್ಣಿನ ರಸ್ತೆಯಾದರೂ ಅಕ್ಕ ಪಕ್ಕದಲ್ಲಿ ಕಬ್ಬಿನ ಗದ್ದೆ, ಕೇದಿಗೆ ವನ, ನೀರಿನ ಝರಿಗಳ ನಡುವೆ ಶ್ರೀಧರ್‌ಪುರ ಗ್ರಾಮ ದಾಟಿದರೆ ವಿಶಾಲ ಪ್ರಾಂಗಣವೊಂದು ಕಣ್ಣಿಗೆ ಕಾಣುತ್ತದೆ. ಚಿಕ್ಕದಾದ ಕಬ್ಬಿಣದ ಗೇಟನ್ನು ದಾಟಿ ಪ್ರಾಂಗಣದ ಒಳಗೆ ಪ್ರವೇಶಿಸಿದರೆ ನಿಮಗೆ ಪುಟ್ಟ ಮನೆಯಂತೆ ಕಾಣುವ ಗಂಗಾಧರೇಶ್ವರಸ್ವಾಮಿ ದೇವಸ್ಥಾನ ಸಿಗುತ್ತದೆ. ಇದೇ ಪ್ರಾಂಗಣದಲ್ಲಿ ಕ್ರಿ.ಶ 1670 ರಲ್ಲಿ ಕೆಳದಿಯ ರಾಣಿ ಚನ್ನಮ್ಮಾಜಿಯಿಂದ ನಿರ್ಮಾಣಗೊಂಡಿದ್ದು ಎಂಬ ಇತಿಹಾಸ



ಹೊಂದಿರುವ ದೇವಗಂಗೆ ಮತ್ತು ಇತರೆ ಕೊಳಗಳು ಇವೆ. ಎಲ್ಲಾ ಕೊಳಗಳಿಗೆ ಇಳಿಯಲು ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಹದಿನಾಲ್ಕು ಮೆಟ್ಟಿಲುಗಳನ್ನು ನಿರ್ಮಾಣ ಮಾಡಲಾಗಿದೆ. ದೇವಗಂಗೆ ಕೊಳದ ನೀರು ಇಷ್ಟು ವರ್ಷವಾದರೂ ಬತ್ತಿಲ್ಲ. ಸಿಹಿನೀರನ್ನು ಹೊಂದಿರುವ ಈ ಕೊಳದ ನೀರು ನೋಡಲು ಸ್ಪಟಿಕದಂತೆ ಕಾಣುವ ಜೊತೆಗೆ ಇಷ್ಟು ವರ್ಷ ಗತಿಸಿದರೂ ಇನ್ನು ಸುಸ್ಥಿತಿಯಲ್ಲಿದೆ.

ಈ ಕೊಳಕ್ಕೆ ಎಲ್ಲಿಂದ ನೀರು ಹರಿದು ಬರುತ್ತದೆ ಎಂಬುದು ಮಾತ್ರ ಅರಿವಿಗೆ ನಿಲುಕದ್ದು. ಕೊಳದ ಹೆಚ್ಚುವರಿ ನೀರು ಮಾತ್ರ ನಿರಂತರವಾಗಿ ಹೊರಗೆ ಹರಿಯುವುದರಿಂದ ಸ್ವಚ್ಛ ನೀರು ಜಲಕ್ರೀಡೆಗೆ ಮನಸೆಳೆಯುತ್ತದೆ. ಸುಮಾರು 4 ಎಕರೆ ದೇವಗಂಗೆ ಪ್ರದೇಶದಲ್ಲಿ 86.92 ಮೀ. ಉದ್ದ 29.89 ಮೀ ಅಗಲದ ಸುತ್ತಳತೆಯಲ್ಲಿ ದೇವಗಂಗೆಯ ಸಪ್ತ ಕೊಳಗಳು ನಿರ್ಮಿತಗೊಂಡಿವೆ. ಅಲ್ಲಿರುವ 17.69 ಮೀ. ಅಗಲ 25.32 ಉದ್ದದ ದೊಡ್ಡ ಈಜುಕೊಳದ ಸುತ್ತಲೂ ಆವರಿಸಿಕೊಂಡಿರುವ ಸುಂದರ ಕೆತ್ತನೆಯ ಬೃಹದಾಕಾರದ ಕಲ್ಲು ಚಪ್ಪಡಿಗಳು ಗಮನ ಸೆಳೆಯುತ್ತದೆ. ನೀರಿನ ಮಟ್ಟ 4 ರಿಂದ 4.5 ಅಡಿ ಇರುವುದರಿಂದ ಮಕ್ಕಳೂ ಸಹ ಇಲ್ಲಿ ಜಲಕ್ರೀಡೆಯಲ್ಲಿ ತೊಡಗಬಹುದು. ಕೊಳದ ಮಧ್ಯೆ ಕಲ್ಲಿನ ಹಾಸು ವಿಶೇಷವಾಗಿ ನಿರ್ಮಿಸಲಾಗಿದ್ದು, ನೋಡಿದ ಕೂಡಲೇ ಜೋಶ್‌ನಿಂದ ನೀರಿಗೆ ಧುಮ್ಮಿಕ್ಕಲು ಪ್ರೇರಣೆ ನೀಡುತ್ತದೆ. ದೊಡ್ಡ ಕೊಳದ ಜೊತೆಗೆ ಚಿಕ್ಕಮಟ್ಟ ಅಪೂರ್ವ ಚಿತ್ತಾರದ ಕೊಳಗಳು ಇಲ್ಲಿವೆ. ಜೊತೆಗೆ ಸ್ನಾನದ ಮನೆಯಂತೆ ಹಾಸಿದ ಕಲ್ಲು ಚಪ್ಪಡಿ ಕಾಣಸಿಗುತ್ತದೆ. ಅಂತರ್ಜಲದಿಂದ ತುಂಬಿಕೊಳ್ಳುವ ದೊಡ್ಡ ಕೊಳದ ನೀರು ಎಲ್ಲಾ ಕೊಳಗಳನ್ನು ಸಂಧಿಸಿಯೇ ಹೊರ ಹರಿಯುತ್ತದೆ. ಈ ನೀರಿನ ಹರಿವು ಎಂತವರಿಗೂ ಸೋಜಿಗ ಉಂಟುಮಾಡುತ್ತದೆ.

ಬೆಟ್ಟದ ಮೇಲಿರುವ ಕೆರೆಯಿಂದ ಆಗಿನ ಕಾಲದಲ್ಲಿ ಕಲ್ಲಿನಿಂದ ತಯಾರಿಸುವ ಕೊಳವೆ ಮೂಲಕ ಈ ಕೊಳಕ್ಕೆ ನೀರು ತರಲಾಗಿದೆಯಂತೆ. ಮಳೆಗಾಲದಲ್ಲೂ ಕೂಡ ಕೊಳದ ನೀರು ಉಕ್ಕಿ ಹರಿವುದಿಲ್ಲ. ಕೊಳದಲ್ಲಿ ಹೆಚ್ಚಾದ ನೀರು ಕೆಳಭಾಗದಿಂದ ಹರಿದುಹೋಗುವಂತೆ ಮಾಡಿರುವ ವಿನ್ಯಾಸವೇ ಇದಕ್ಕೆ ಕಾರಣ. ಹಾಗಾಗಿ ಮಳೆಗಾಲ ಮತ್ತು ಬೇಸಿಗೆ ಕಾಲ ಎರಡೂ ಕಾಲದಲ್ಲೂ ಈ ಕೊಳದಲ್ಲಿ ಒಂದೇ ಮಟ್ಟದಲ್ಲಿ ನೀರು ಇರುವುದು ವೈಜ್ಞಾನಿಕವಾಗಿ ಇಂದಿನ ಎಂಜಿನಿಯರುಗಳಿಗೆ ಸವಾಲಾಗಿ ಪರಿಣಮಿಸಿದೆ.

ಕೆಳದಿ ಸಾಮ್ರಾಜ್ಯಕ್ಕೆ ಬಿದನೂರು ರಾಜಧಾನಿಯಾದ ಸಂದರ್ಭದಲ್ಲಿ ಆಳ್ವಿಕೆ ನಡೆಸುತ್ತಿದ್ದ ಕೆಳದಿ ಚೆನ್ನಮ್ಮನ ಅವಧಿಯಲ್ಲಿ ಈ ದೇವಗಂಗೆ ನಿರ್ಮಿತವಾಗಿದೆ. ಕ್ರಿ.ಶ 1670 ರ ಸುಮಾರಿಗೆ ಇದರ ನಿರ್ಮಾಣವಾಗಿದೆ ಎಂದು ಅಂದಾಜಿಸಲಾಗಿದೆ. ದೇವಗಂಗೆ ಕೆಳದಿ ಅರಸರ ಉಪನಗರವಾಗಿತ್ತು. ಅದಕ್ಕೆ ಮತ್ತೊಂದು ಹೆಸರು ಬಸವನಬ್ಯೆನೆ. ಬಸವನಬ್ಯೆನೆ ಎಂದರೆ ಹಸುಗಳು ನೀರು ಕುಡಿಯುವ ಸ್ಥಳ. ಇಂಥ ಜಾಗವನ್ನು ಕೆಳದಿಯ ಅರಸರು ತಮ್ಮ ಕುಟುಂಬದ ಸದಸ್ಯರಿಗೆ ಜಲಕ್ರೀಡೆಯಂತಹ ಮನರಂಜನೆಗಾಗಿ ಮೀಸಲಾಗಿಟ್ಟುಕೊಂಡಿದ್ದರು. ಬೇಸಿಗೆಯ ದಿನಗಳಲ್ಲಿ ದೇವಗಂಗೆ ಅವರಿಗೆ ಸ್ನಾನ ಮಾಡುವ ಕೊಳವಾಗಿ ಉಪಯೋಗವಾಗುತ್ತಿತ್ತು. ಕೆಳದಿ ಅರಸರ ಕಾಲದಲ್ಲಿ ಒಟ್ಟನಲ್ಲಿ ದೇವಗಂಗೆ ವಿಹಾರದ



ಐತಿಹಾಸಿಕ ಮಹತ್ವ ಮತ್ತು ಸುಂದರ ಉದ್ಯಾನದಂತೆ ಕಾಣಿಸುವ ದೇವಗಂಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ವಿಹಾರಕ್ಕೆ ಬರುತ್ತಾರೆ. ದೇವಗಂಗೆ ಕೊಳದ ಪರಿಸರ ಪ್ರಶಾಂತವಾಗಿದ್ದು, ಪ್ರಾಂಗಣದೊಳಗೆ ಹುಲ್ಲಿನ ಹಾಸಿಗೆ ಇದೆ. ಇಲ್ಲಿಗೆ ಬಂದವರು ಕೆಲ ಸಮಯ ಕಳೆದು ಸಂತಸಪಡುತ್ತಾರೆ.

ಸ್ಥಳವಾಗಿತ್ತು. ನಂತರ ಗಂಗಾಧರೇಶ್ವರನ ಸನ್ನಿಧಿಯಿಂದಾಗಿ ಧಾರ್ಮಿಕ ತಾಣವಾಗಿ ಗಮನ ಸೆಳೆಯಿತು. ಈಗಲೂ ಸುತ್ತ ಮುತ್ತಲಿನ ಜನರು ವಿಶೇಷ ದಿನಗಳಲ್ಲಿ ಇಲ್ಲಿ ಆರಾಧನೆಗ್ಯೆಯುತ್ತಾರೆ. ಕನ್ನಂಬಾಡಿ ಅಣೆಕಟ್ಟು ಕಟ್ಟುವ ಸಂದರ್ಭದಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ವಿಶ್ವೇಶ್ವರಯ್ಯರಿಗೆ ಬೃಂದಾವನ ನಿರ್ಮಿಸಲು ದೇವಗಂಗೆ ಕೊಳವೇ ಪ್ರೇರಣೆಯಾಗಿತ್ತು ಎಂಬ ಐತಿಹ್ಯವೂ ಇದೆ.

ಈ ಕೊಳದಲ್ಲಿ ಸಪ್ತ ಕಾರಂಜಿಗಳು ಇದ್ದವೆಂಬ ಬಗ್ಗೆ ಇತಿಹಾಸವಿದೆ. ಬುಡದಲ್ಲಿ ಕಮಲಾಕಾರ ಹೊಂದಿರುವ ಸಣ್ಣ ಕೊಳದ ಕೆಳಭಾಗದ ನಾಲ್ಕು ಮೂಲೆಯಲ್ಲಿ ಬಸವ ಮೂರ್ತಿ ಇದೆ. ಅದರ ಬಾಯಿಂದ ನೀರು ಚಿಮ್ಮುವ ರೀತಿಯಲ್ಲಿ ನಿರ್ಮಿಸಲಾಗಿತ್ತು. ಕಾರಂಜಿಗೆ ಪೂರಕವಾಗಿ ಮಧ್ಯದಲ್ಲಿ ನೀರು ಚಿಮ್ಮುವ ರಂಧ್ರದ ಸುತ್ತಲೂ ಸುಂದರ ಕೆತ್ತನೆಯ ಶಿಲೆಗಳು ಗಮನ ಸೆಳೆಯುತ್ತದೆ.

ಐತಿಹಾಸಿಕ ಮಹತ್ವ ಮತ್ತು ಸುಂದರ ಉದ್ಯಾನದಂತೆ ಕಾಣಿಸುವ ದೇವಗಂಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ವಿಹಾರಕ್ಕೆ ಬರುತ್ತಾರೆ. ದೇವಗಂಗೆ ಕೊಳದ ಪರಿಸರ ಪ್ರಶಾಂತವಾಗಿದ್ದು, ಪ್ರಾಂಗಣದೊಳಗೆ ಹುಲ್ಲಿನ ಹಾಸಿಗೆ ಇದೆ. ಇಲ್ಲಿಗೆ ಬಂದವರು ಕೆಲ ಸಮಯ ಕಳೆದು ಸಂತಸಪಡುತ್ತಾರೆ. ದಣಿವಾರುವಷ್ಟು ಸಮಯ ಕೊಳದಲ್ಲಿ ಈಜುತ್ತಾರೆ. ಈಜು ಬಾರದವರು ನೀರಲ್ಲೇ ಎದ್ದು ಬಿದ್ದು ಮಜಾಮಾಡುತ್ತಾರೆ.

ದೇವಗಂಗೆಗೆ ಭೇಟಿ ನೀಡುವವರು ಇದರ ಸುತ್ತಮುತ್ತ ಇರುವ ಅರಸರ ಗದ್ದುಗೆಗಳು, ಬಿದನೂರು ಕೋಟೆ ಇನ್ನಿತರೆ ಇತಿಹಾಸ ಪ್ರಸಿದ್ಧ ತಾಣಗಳನ್ನು ನೋಡಬಹುದು.





## ಮಧ್ಯವರ್ತಿಗಳ ಹಾವಳಿಗೆ ಮುಕ್ತಿ ನೀಡಿರುವ

# ದೇಸಿ ಸಂತೆ

ಕೆ. ಅನಿತಾ





ಧಾರವಾಡ ಸುತ್ತಮುತ್ತಲಿನ ಕೆಲ ಸಂಘಟಿತ ರೈತರೀಗ ತಾವು ಬೆಳೆದ ಧಾನ್ಯ, ತರಕಾರಿಗಳನ್ನು ದಲ್ಲಾಳಿಗಳ ಮುಂದೆ ಇಟ್ಟು ಅವರಿಗೆ ಬೆಲೆ ಕೂಗಲು ಹೇಳುವುದಿಲ್ಲ, ಬದಲಾಗಿ ತಾವು ಬೆಳೆದ ವಸ್ತುವಿಗೆ ತಾವೆ ಬೆಲೆ ನಿಗದಿಪಡಿಸಿ ಮಾರಾಟ ಮಾಡುವ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಇದರಿಂದ ಮಧ್ಯವರ್ತಿಗಳ ಜೇಬು ಸೇರಬೇಕಿದ್ದ ಲಾಭಾಂಶ ರೈತರಲ್ಲಿಯೇ ಉಳಿಯುವುದರಿಂದಾಗಿ ಇಲ್ಲಿನ ದೇಸೀಯ ಮಾರುಕಟ್ಟೆಯ ರೈತರು ಗ್ರಾಹಕರಿಗೆ ಬೆಲೆಯಲ್ಲಿ ಸ್ವಲ್ಪ ಉದಾರತೆ ತೋರುತ್ತಿದ್ದಾರೆ.

ರೈತರಿಗೆ ಅವರ ಬೆವರಿನ ಫಲ ಪೂರ್ಣಪ್ರಮಾಣದಲ್ಲಿ ದಕ್ಕಬೇಕು ಎಂಬ ಮುಖ್ಯ ಉದ್ದೇಶ ಇಟ್ಟುಕೊಂಡು ಧಾರವಾಡ ಹಾಗೂ ಆಸುಪಾಸಿನ ಕೆಲ ಸಮಾನ ಮನಸ್ಕರು ಹಾಗೂ ದೇಸೀಯ ಉತ್ಪನ್ನ ಪ್ರಿಯರು ಒಟ್ಟಾಗಿ ಕುಳಿತು ತರ್ಕಿಸಿ ಈ ದೇಸಿ ಸಂತೆಗೆ ದಾರಿ ಮಾಡಿಕೊಟ್ಟಿದ್ದಾರೆ. ಸದ್ಯ



downloaded from: www.kpscvaani.com



ಪ್ರತಿ ಭಾನುವಾರ ಇಲ್ಲಿನ ಗಾಂಧಿನಗರದ ಯಾಲಕ್ಕಿ ಶೆಟ್ಟರ್ ಕಾಲೋನಿಯ ದೇಸಿ ಅಂಗಡಿ ಆವರಣದಲ್ಲಿ ನಡೆಯುತ್ತದೆ. ಈ ಸಂತೆಗೆ ಬಂದರೆ ತಾಜಾ ದವಸ ಧಾನ್ಯಗಳು, ತರೇವಾರಿ ತರಕಾರಿ, ದೇಸಿಯ ಧಾನ್ಯದಿಂದ ತಯಾರಿಸುತ್ತಿರುವ ಖಾದ್ಯ, ಘಟ್ಟ ಪ್ರದೇಶದಲ್ಲಿ ಬೆಳೆಯುತ್ತಿರುವ ಬೃಹತ್ ಗೆಡ್ಡೆ–ಗೆಣಸು, ಜನಮಾನಸದಲ್ಲಿ ಮರೆತು ಹೋದ ಗಿಡಮೂಲಿಕೆ ಔಷಧಿ ಹೊಂದಿದ ತರಕಾರಿ ಸಸ್ಯಗಳು, ಜವಾರಿ ಕಾಯಿಗಳು, ಖಾದ್ಯತೈಲ, ಜವಾರಿ ಮೊಟ್ಟೆ.. ಹೀಗೆ ಎಲ್ಲವೂ ಒಂದೇ ಸ್ಥಳದಲ್ಲಿ ದೊರಕುತ್ತವೆ.

ವ್ಯವಹಾರದಲ್ಲಿ ದರ ಏರುಪೇರು ಆಗದಂತೆ ಇಲ್ಲಿ ವ್ಯವಸ್ಥೆ ಮಾಡಿರುವುದರಿಂದ ಒಂದೇ ದರ ನಿಗದಿ ಮಾಡಲಾಗಿರುತ್ತದೆ. ಅಲ್ಲದೆ ಈ ವ್ಯವಸ್ಥೆ ವರ್ಷದಿಂದಲೂ ನಡೆಯುತ್ತಿರುವ ಕಾರಣ ಈ ಸಂತೆಗೆ ಬರುವ ಗ್ರಾಹಕರು ಬೆಲೆಯಲ್ಲಿ ಚೌಕಾಸಿ ಮಾಡುವುದಿಲ್ಲ. ಹೆಚ್ಚು ಕಡಿಮೆ ತೆರೆದ ಮಾರುಕಟ್ಟೆಯ ದರಕ್ಕಿಂತ ಕೊಂಚ ಕಡಿಮೆ ಬೆಲೆಗೆ ಇಲ್ಲಿ ವಸ್ತುಗಳು ದೊರಕುತ್ತವೆ. ದೇಸಿ ಉತ್ಪನ್ನ ಹಾಗೂ ವಸ್ತುಗಳನ್ನು ಮಧ್ಯವರ್ತಿಗಳಿಲ್ಲದೇ ರೈತರಿಂದ ನೇರವಾಗಿ ಗ್ರಾಹಕರಿಗೆ ದೊರಕುವ ಕಾರಣವಾಗಿ ಇಲ್ಲಿ ಆಹಾರ ಕಲಬೆರಕೆ, ತೂಕ, ದುಪ್ಪಟ ಬೆಲೆ ಮುಂತಾದವುಗಳಲ್ಲಿ ಮೋಸಗಳು ನಡೆಯುವುದಿಲ್ಲ. ಅಲ್ಲದೆ ಸಾಮಗ್ರಿಗಳಲ್ಲಿ ನೈಜತೆ ಗ್ರಾಹಕರ ವಿಶ್ವಾಸ ಗಿಟ್ಟಿಸಿಕೊಂಡಿರುವ ಕಾರಣ ಒಂದು ಬಾರಿ ಈ ಸಂತೆಗೆ ಬಂದು ಹೋದವರು ಮುಂದಿನ ವಾರ ಖಂಡಿತ ಇಲ್ಲಿ ಹಾಜರಾಗುತ್ತಾರೆ.

ದೇಸಿ ಆಹಾರ ಪದಾರ್ಥ ಗ್ರಾಹಕರಿಗೆ ಸುಲಭವಾಗಿ ದೊರೆಯದ ಕಾರಣಕ್ಕೆ ಇಂದು ಎಲ್ಲೆಡೆ ಹೈಬ್ರಿಡ್ ಆಹಾರ ಉತ್ಪನ್ನದ ಹಾವಳಿ ಅಧಿಕವಾಗಿದೆ. ಆಹಾರ ಪದಾರ್ಥಗಳ ಕೊರತೆಯಿಂದ ಅದು ಸಂಪೂರ್ಣ ಕಾರ್ಯರೂಪಕ್ಕೆ ಬರುತ್ತಿಲ್ಲ. ಮಧ್ಯವರ್ತಿಗಳ ಹಂಗಿಲ್ಲದೇ ಆಹಾರ ಪದಾರ್ಥಗಳನ್ನು ನೇರವಾಗಿ ಗ್ರಾಹಕರಿಗೆ ಕೊಡುವ ವಿಶಿಷ್ಟ ಪ್ರಯತ್ನ ನಮ್ಮದಾಗಿದೆ ಎಂದು ಈ ಸಂತೆಯ ನಿರ್ಮಾಣದ ನೇತೃತ್ವ ವಹಿಸಿಕೊಂಡಿರುವ ಡಾ.ಪ್ರಕಾಶ್ ಭಟ್ ಹೇಳುತ್ತಾರೆ. ಇದೆಲ್ಲದರ ಜೊತೆಗೆ ರೈತರನ್ನು ಗ್ರಾಹಕರಿಗೆ ಪರಿಚಯ ಮಾಡಿಸುವುದು ದೇಸಿ ಸಂತೆಯ



**ದೇಸಿ ಉತ್ಪನ್ನ ಹಾಗೂ ವಸ್ತುಗಳನ್ನು ಮಧ್ಯವರ್ತಿಗಳಿಲ್ಲದೇ ರೈತರಿಂದ ನೇರವಾಗಿ ಗ್ರಾಹಕರಿಗೆ ದೊರಕುವ ಕಾರಣವಾಗಿ ಇಲ್ಲಿ ಆಹಾರ ಕಲಬೆರಕೆ, ತೂಕ, ದುಪ್ಪಟ ಬೆಲೆ ಮುಂತಾದವುಗಳಲ್ಲಿ ಮೋಸಗಳು ನಡೆಯುವುದಿಲ್ಲ.**





ಪ್ರಮುಖ ಗುರಿ. ಗ್ರಾಹಕರಿಗೂ ಹಾಗೂ ರೈತರಿಗೆ ಮುಖಾಮುಖಿ ಇಲ್ಲದಂತೆ ಮಾಡಿರುವ ಮಾರುಕಟ್ಟೆ ವ್ಯವಸ್ಥೆಯಿಂದ ಹೊರಬಂದು ಪರಿಚಿತ ರೈತರಿಂದ ಆಹಾರ ಪದಾರ್ಥ ಖರೀದಿಸುವ ಮನೋಭಾವ ಬೆಳೆಸುವುದು ನಡೆದಿದೆ. ಅವನತಿಯ ಹಂತಕ್ಕೆ ತಲುಪಿರುವ ಅನೇಕ ದೇಸಿ ಹಾಗೂ ವಿಶೇಷ ಆಹಾರ ಪದಾರ್ಥ ತಯಾರಿಸುವ ಬಗೆಯನ್ನು ಮಹಿಳೆಯರಿಗೆ ಇಲ್ಲಿ ಉಚಿತವಾಗಿ ತಿಳಿಸಿಕೊಡಲು ಸಂತೆಯಲ್ಲಿ ವೇದಿಕೆ ಕಲ್ಪಿಸಲಾಗಿದೆ. ಹೀಗಾಗಿ ದೇಶಿ ಉತ್ಪನ್ನಗಳಾದ ಅಕ್ಕಿ, ಬೇಳೆಕಾಳು, ಸಿರಿಧಾನ್ಯಗಳು, ಹಣ್ಣು, ತರಕಾರಿಗಳ ಜೊತೆಗೆ ಕೃಷಿ ಪುಸ್ತಕ, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕೂಡ ಇಲ್ಲಿ ನಡೆಸಲಾಗುತ್ತದೆ.

ಇಂದಿನ ಆಧುನಿಕ ಆಹಾರ ಪದ್ಧತಿಗಳಿಗೆ ಒಗ್ಗಿಕೊಂಡಿರುವ ಜನರಿಗೆ ಆರೋಗ್ಯ ಸಮಸ್ಯೆಗಳೂ ಹೆಚ್ಚಾಗಿ ಕಾಡುತ್ತಿವೆ. ಪ್ರತಿಯೊಬ್ಬರ ಅನಾರೋಗ್ಯಕ್ಕೆ ರಾಮಬಾಣವಾಗಿರುವ ಸಿರಿಧಾನ್ಯಗಳ ಮಾರಾಟ ಅಲ್ಲಲ್ಲಿ ಭಾರೀ ಜೋರಾಗಿ ನಡೆಯುತ್ತಿದೆ. ನವಣೆ, ಹಾರಕ, ಊದಲು, ಸಾವೆ, ಕೊರಲೆ, ಬರಗು, ಜೋಳ, ರಾಗಿ, ಸಜ್ಜೆ ಇವುಗಳಲ್ಲಿ ಹೆಚ್ಚಾಗಿ ನಾರಿನಂಶಗಳು, ಖನಿಜಾಂಶಗಳು, ವಿಟಮಿನ್‌ಗಳಿರುವ ಕಾರಣ ಇವುಗಳಿಂದ ತಯಾರಿಸಲಾದ ಉತ್ಪನ್ನಗಳು, ತಿಂಡಿ ತಿನಿಸುಗಳು ಹೆಚ್ಚಿನ ಬೇಡಿಕೆ ಪಡೆಯುತ್ತಿವೆ. ರಾಗಿಯಿಂದ ತಯಾರಿಸಲಾದ ಕೇಕ್, ಬಿಸ್ಕಟ್, ಸಜ್ಜೆಯಿಂದ ತಯಾರಿಸಲಾದ ದೋಸೆ, ಬರ್ಫಿಗಳು ಈ ಸಂತೆಯಲ್ಲಿ ಗ್ರಾಹಕರನ್ನು ತನ್ನತ್ತ ಸೆಳೆಯುತ್ತಿವೆ.

ನವಧಾನ್ಯಗಳಲ್ಲಿ ನವಣೆ ನರಗಳಿಗೆ ಶಕ್ತಿ ನೀಡಿದರೆ, ಹಾರಕ ರಕ್ತ ಶುದ್ಧಿ ಮಾಡುತ್ತದೆ, ಊದಲು ಲಿವರ್ ಮುಂತಾದ ಸಮಸ್ಯೆಗಳಿಗೆ ಪರಿಹಾರ ನೀಡಿದರೆ ಸಾಮೆ ಅಂಡಾಶಯ, ಸಂತಾನ ಸಮಸ್ಯೆಗೆ ಪರಿಹಾರ ಸೂಚಿಸುತ್ತವೆ.

ಇನ್ನು ಜೀರ್ಣಾಂಗ, ರಕ್ತದ ಒತ್ತಡಕ್ಕೆ ಕೊರಲೆ ಉಪಯೋಗಿಸಿದರೆ, ಚರ್ಮದ ಆರೋಗ್ಯಕ್ಕೆ, ಮೂಳೆಗಳ ಬಲವರ್ಧನೆಗೆ ಬರಗು ಬಳಕೆ ಮಾಡಲಾಗುತ್ತದೆ. ಮಧುಮೇಹ, ಕ್ಯಾನ್ಸರ್, ಹೃದಯ ಸಮಸ್ಯೆಗೆ ಜೋಳವಾದರೆ, ಹಿಮೋಗ್ಲೋಬಿನ್ ಹೆಚ್ಚಳ, ಮೂಳೆ ಗಟ್ಟಿಗೊಳಿಸಲು ರಾಗಿ ತನ್ನ ಮಹತ್ವವನ್ನು ಉಳಿಸಿಕೊಂಡಿದೆ, ಸಜ್ಜೆ ಮಹಿಳೆಯರ ಸಮಸ್ಯೆಗಳಿಗೆ ಹಾಗೂ ದೇಹದ ಬೊಜ್ಜು ಕರಗಿಸುವ ಕೆಲಸ ಮಾಡುವುದಲ್ಲದೇ ಈ ಎಲ್ಲಾ ಧಾನ್ಯಗಳು ಇನ್ನೂ ಹಲವು ರೋಗಗಳಿಗೂ ಪರಿಹಾರ ಒದಗಿಸುತ್ತದೆ. ಹೀಗೆ ಆರೋಗ್ಯ ಲಭ್ಯತೆಗೆ ಸಂಜೀವಿನಿಯಂತೆ ಕೆಲಸ ಮಾಡುವ ಸಿರಿಧಾನ್ಯಗಳೇ ಇಂದು ಮೂಲೆ ಗುಂಪಾಗುತ್ತಲಿವೆ ಎಂದು ಡಾ.ಭಟ್ ಅವರು ಅಭಿಪ್ರಾಯ ಪಡುತ್ತಾರೆ.

ಕಲಬೆರಿಕೆ ಆಹಾರದಿಂದ ಮುಕ್ತಿ ಪಡೆದು, ನಮ್ಮ ನೆಲದ ಸಂಸ್ಕೃತಿಗೆ ಮರಳಬೇಕಾದ ಅಗತ್ಯವಿದೆ. ಹಾಗಾಗಿ ದೇಸಿ ಸಂತೆಗಳು ವಿವಿಧ ಭಾಗಗಳಲ್ಲೂ ಶುರುವಾಗಬೇಕಿದೆ. ಆಗ ಆಯಾ ಪ್ರದೇಶಗಳ ತಿಂಡಿ, ತಿನಿಸು, ಆಹಾರಗಳ ಪರಿಚಯವಾಗುವ ಜೊತೆಗೆ ಮಧ್ಯವರ್ತಿಗಳ ಹಾವಳಿಯಿಂದಾಗುತಿದ್ದ ನಷ್ಟದಿಂದ ರೈತರು ಮತ್ತು ಗ್ರಾಹಕರು ಪಾರಾಗುತ್ತಾರೆ. ■





downloaded from: www.kpscvaani.com

# ಚಾಲುಕ್ಯ ರಾಜರ ಸಮಾಧಿಗಳ ಸುತ್ತ

**ಇಡೀ ಭಾರತ ದೇಶದಲ್ಲಿಯೇ ಹಿಂದೂ ದೇವಾಲಯಗಳ ನಿರ್ಮಾಣದ ಅತೀ ದೊಡ್ಡ ಆಂದೋಲನವನ್ನು ಆರಂಭಿಸಿದ್ದ ಖ್ಯಾತ ಚಾಲುಕ್ಯ ರಾಜರ ಸಮಾಧಿಗಳು ಪಟ್ಟದಕಲ್ಲು ಸಮೀಪದ ಹುಲಿಗೆಮ್ಮನಕೊಳ್ಳದಲ್ಲಿ ಪತ್ತೆಯಾಗಿರುತ್ತವೆ.**

–ಮಂಜುನಾಥ ಸುಳ್ಳೊಳ್ಳಿ

ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮಹಾಕೂಟ ದೇವಾಲಯಗಳನ್ನು ನಿರ್ಮಿಸಿ "ಹಿಂದೂ ವಾಸ್ತು ಶಿಲ್ಪದ ಪ್ರಯೋಗ ಶಾಲೆ ಅಥವಾ ಹಿಂದೂ ವಾಸ್ತು ಶಿಲ್ಪದ ತೊಟ್ಟಿಲು" ಎಂದೇ ಪ್ರಸಿದ್ಧಿಯಾಗಿರುವ ಚಾಲುಕ್ಯರ ಆಡಳಿತದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ಅನೇಕ ವಿದ್ವಾಂಸರು ಸಂಶೋದನೆಯಲ್ಲಿ ತೊಡಗಿಕೊಂಡಿದ್ದರು. ಆದರೆ ಈ ವಾಸ್ತುಶಿಲ್ಪದ ಪರಂಪರೆಯನ್ನು ಕೇವಲ ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತಗೊಳಿಸಿ ದಕ್ಷಿಣ ಭಾರತದ ಹಿಂದೂ ವಾಸ್ತು ಶಿಲ್ಪದ ಪ್ರಯೋಗ ಶಾಲೆ ಎಂದು ಪರಿಗಣಿಸಿದ್ದರು. ಕೇವಲ 30 ಕಿ.ಮೀ ಅಂತರಗಳಲ್ಲಿ ಇಷ್ಟೊಂದು ಪ್ರಮಾಣ ವಿವಿಧ ಪದ್ಧತಿಯ ದೇವಾಲಯಗಳು ಇಡೀ ದೇಶದಲ್ಲಿ ಕಂಡು ಬರುವುದು ಈ ಚಾಲುಕ್ಯರ ನಾಡಿನಲ್ಲಿ ಮಾತ್ರ.

ಪ್ರೆಸ್ಸಿ ಬ್ರೌನ್ ದೇವಾಲಯದ ನಿರ್ಮಾಣದಲ್ಲಿ ವಿವಿಧ ಪ್ರಯೋಗಗಳು ಮತ್ತು ಪ್ರಭೇದಗಳನ್ನು ಹೊಂದಿದಕ್ಕಾಗಿ ಇದನ್ನು ದೇವಾಲಯದ ವಾಸ್ತುಶಿಲ್ಪದ ತೊಟ್ಟಿಲು ಎಂದು ಉಲ್ಲೇಖಿಸುತ್ತಾನೆ. ಹಿಂದೂ ವಾಸ್ತುಶಿಲ್ಪ ನಾಗರಿಕತೆಯ ಇತಿಹಾಸದಲ್ಲಿ ಅತಿದೊಡ್ಡ ದೇವಾಲಯ ನಿರ್ಮಾಣ ಚಳುವಳಿ, ಕ್ರಿ.ಶ 540–800 ರಿಂದ 250 ನೂರು ವರ್ಷಗಳಗೂ ಹೆಚ್ಚು ಕಾಲ ಮುಂದುವರೆದಿದೆ.

ದೈವಿಕ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಅನ್ವೇಷಣೆ ಮತ್ತು ದೇವರು ಮಾನವ ನಾಗರಿಕತೆಯಷ್ಟೇ ಹಳೆಯದು. ಅನೇಕ ದರ್ಶಕರು, ಸಂತರು, ಗುರುಗಳು, ಆಧ್ಯಾತ್ಮಿಕವಾದಿಗಳು ಮತ್ತು ದಾರ್ಶನಿಕರು ಸತ್ಯವನ್ನು ಬಿಚ್ಚಿಡಲು ಪ್ರಯತ್ನಿಸುತ್ತಿದ್ದಾರೆ.

ಹೀಗಾಗಿ ಇಡೀ ಭಾರತದಲ್ಲಿಯೇ ಇದೊಂದು ಅತೀ ದೊಡ್ಡ ದೇವಾಲಯ ನಿರ್ಮಾಣಗಳ ಅಂದೋಲನವಾಗಿ ರೂಪಗೊಂಡಿತು. ಇಡೀ ವಿಶ್ವ ಮಟ್ಟದಲ್ಲಿಯೇ ಹಿಂದೂ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪ ಎರಡರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ 6ನೇ ಶತಮಾನದಿಂದ 8ನೇ ಶತಮಾನದವರಿಗೆ ನಡೆದ ಈ ದೇವಾಲಯಗಳ ನಿರ್ಮಾಣದ ಅಂದೋಲನ ಹೊಸ ಶಿಲ್ಪಕಲಾ ಪರಂಪರೆಗೆ ದಾರಿದೀಪವಾಯಿತು. ದ್ರಾವಿಡ ಹಾಗೂ ನಾಗರ ಶೈಲಿಯ ಈ





ದೇವಾಲಯಗಳು ಚಾಲುಕ್ಯರ ಶಿಲ್ಪ ಕಲೆ ಪರಂಪರೆಯ ಪರಾಕಾಷ್ಠೆಯನ್ನು ಎತ್ತಿ ತೋರುತ್ತವೆ. ಇಂತಹ ಮಹಾನ್ ರಾಜರುಗಳು ಬದುಕಿ ಬಾಳಿದ ಜೀವನ ವೃತ್ತಾಂತವೆ ಅತೀ ರೋಚಕ ಹಾಗೂ ರಹಸ್ಯಮಯ.

ಚಾಲುಕ್ಯರು ಬಾಳಿದ ಅರಮನೆಗಳ ಬಗ್ಗೆ ಯಾವ ಉಲ್ಲೆಖವು ಇಲ್ಲ ಮತ್ತು ಅರಮನೆಗಳ ಯಾವುದೇ ಕುರುಹುಗಳು ಇಲ್ಲ. ತಮ್ಮ ಸಾವಿನ ನಂತರ ಆಡಂಬರದ ಸಾಮಾಧಿಗಳನ್ನು ಸಹ ಕೆತ್ತಿಸಲಿಲ್ಲ. ಇವರ ಸಮಾಧಿಗಳೆಲ್ಲಿ ಎಂಬುವುದರ ಬಗ್ಗೆ ನೂರಾರು ಸಂಶೋಧಕರಿಗೆ ಸವಾಲಾಗಿಯೇ ಉಳಿದಿತ್ತು. ಶಿವನನ್ನು ವಿಷ್ಣುವನ್ನು ನಂಬಿದ ಈ ಮಹಾನ್‌ರಾಜರು ತಮ್ಮ ಸಾವನ್ನು ಸಹ ರಹಸ್ಯಮಯಗೊಳಿಸಿರುವುದು ಆಶ್ಚರ್ಯವಾದರೂ ಸತ್ಯ.

ಚಾಲುಕ್ಯ ನಾಡಿಲ್ಲಿ 2005 ರಿಂದ ಸತತ ಹದಿನಾಲ್ಕು ವರ್ಷಗಳ ತಮ್ಮ ಚಾಲುಕ್ಯರ ನಾಡಿನ ಸಂಶೋಧನೆಯ ಹಾಗೂ ಛಾಯಾಗ್ರಹಣದ ಹಾದಿಯಲ್ಲಿ ಅನೇಕ ರೋಚಕ ವಿಷಯಗಳು ಕಂಡುಬಂದಿದ್ದು, ಚಾಲುಕ್ಯರ ನಾಡಿನಲ್ಲಿ ಬೆಳಕಿಗೆ ಬಾರದ ಶಕ್ತಿ ಆರಾಧನೆ ತಂತ್ರಸಾಧನೆಗಳು ಅನೇಕ ಅಚ್ಚರಿಯನ್ನುಂಟು ಮಾಡಿವೆ.

ಚಾಲುಕ್ಯರ ರಾಜವಂಶಸ್ಥರ ಮೂಲ ಸ್ಥಾನ ಹಾಗೂ ಇತಿಹಾಸದ ಬಗ್ಗೆ ಅನೇಕ ಸಂಶೋಧನಾಕಾರರು ತಮ್ಮ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ತುಂಗಭದ್ರಾ ಸುತ್ತಮುತ್ತಲಿನವರೆಂದು ಸ್ಥಳಿಯ ಆಂಧ್ರದ ಗಡಿ ಭಾಗದವರೆಂದು ಅಲ್ಲದೆ ಇವರು ಸ್ಥಳಿಯ ಪಾಳೆಗಾರರೆಂದು ತಿಳಿಸಲಾಗಿದೆ. ಡಾ.ಶೀಲಾಕಾಂತ ಪತ್ತಾರ ಅವರ ಪ್ರಕಾರ ಚಾಲುಕ್ಯರು ಕನ್ನಡನಾಡಿನವರು. ಸ್ಥಳಿಯ ಚಲಿಕಿ, ಸಲುಕಿ, ಸಲಕಿ, ಎಲ್ಲವೂ ದೇಶಿಯ ನಾಮಗಳಿದ್ದು ಇವರೆಲ್ಲರೂ ಕೃಷಿಕರಾಗಿದ್ದರೆಂದು ತಿಳಿಸಿರುತ್ತಾರೆ. ಚಾಲುಕ್ಯರ ನಾಡಿನಲ್ಲಿ ಸತತ ಮೂವತ್ತು ವರ್ಷಗಳ ಸಂಶೋಧನೆ ಕೈಗೊಂಡಿರುವ ವಿದೇಶಿ ವಿದ್ವಾಂಸ ಲಂಡನ್ನಿನ ಡಾ. ಜಾರ್ಜ ಮಿಶೆಲ್ ಪ್ರಕಾರ ಒಟ್ಟು 16 ರಾಜವಂಶಸ್ಥರ ಪೀಳಿಗೆಯಲ್ಲಿ 7 ಪ್ರಮುಖರನ್ನು ಉಲ್ಲೆಖಿಸಿರುತ್ತಾರೆ. 6ನೇ ಶತಮಾನದ ಆರಂಭದಲ್ಲಿ ಜಯಸಿಂಹನಿಂದ ಆರಂಭಗೊಂಡ ಈ ವಂಶ 757ರಲ್ಲಿ ಕೀರ್ತಿವರ್ಮನಿಂದ ಮುಕ್ತಾಯಗೊಳ್ಳುತ್ತದೆ.

ಹುಲಗೆಮ್ಮನ ಕೊಳ್ಳದ ಸಮಾಧಿ ರೂಪದ ದೇವಾಲಯಗಳು ಪಟ್ಟದಕಲ್ಲು ಹತ್ತಿರದ ಭದ್ರ ನಾಯಕನ ಜಾಲಿಹಾಳ ಹತ್ತಿರದಲ್ಲಿವೆ. ಹುಲಗೆಮ್ಮನ ಕೊಳ್ಳದ ಗುಡ್ಡದಲ್ಲಿ 2ನೇ ಪುಲಿಕೇಶಿ ಕೆಲಕಾಲ ವಾಸಿಸಿರುವುದರ ಬಗ್ಗೆ ಕೆಲ ಸಂಶೋಧನೆಕಾರರು ಉಲ್ಲೆಖಿಸಿರುತ್ತಾರೆ. ಇಲ್ಲಿರುವ 11 ಚಿಕ್ಕ ಚಿಕ್ಕ ದೇವಾಲಯಗಳು ಹನ್ನೊಂದು ರಾಜರ ಸಮಾಧಿಗಳು. ಆದರೆ ಇದನ್ನು ದೇಶದ ಪ್ರಮುಖ 12 ಜ್ಯೋತಿರ್ಲಿಂಗಗಳ ರೂಪವೆಂದು ಸ್ಥಳೀಯರು ತಪ್ಪಾಗಿ ಅರ್ಥೈಸಿದ್ದಾರೆ. ಹಿಂದೂ ಧರ್ಮದ ಪ್ರಕಾರ ಒಂದೇ ವಂಶಸ್ಥರ ಅಂತ್ಯಕ್ರಿಯೆಗಳನ್ನು ಒಂದೆಡೆ ಮಾಡುವುದು ಪರಂಪರಾಗತ ರೂಢಿ. ಅಲ್ಲದೆ ಚಾಲುಕ್ಯ ರಾಜರುಗಳ ಅಸ್ಥಿಗಳ ಅಂತ್ಯಕ್ರಿಯೆಗಳನ್ನು ಹುಲಗೆಮ್ಮನ ಕೊಳ್ಳದ ಬೆಟ್ಟದಲ್ಲಿ ಮಾಡಿ ಅದರ ಮೇಲೆ ಲಿಂಗಗಳನ್ನು ಸ್ಥಾಪಿಸಿ ಚಿಕ್ಕ ಚಿಕ್ಕ ದೇವಸ್ಥಾನ ನಿರ್ಮಿಸಲಾಗಿದೆ.

ಈ ರಾಜ ವಂಶಸ್ಥರ ರುದ್ರಭೂಮಿ ಇಲ್ಲಿರುವುದರ ಬಗ್ಗೆ ಅನೇಕ ಪುರಾವೆಗಳಿವೆ. ಇದಕ್ಕೆ ಪುಷ್ಟಿಕರಿಸುವಂತೆ ಶಿಖರವಿಲ್ಲದ ಒಂದು ದೇವಾಲಯದ ಮಂಟಪದಲ್ಲಿ 2ನೇ ವಿಕ್ರಮಾದಿತ್ಯನ ಅಸ್ಥಿಗಳನ್ನು ಸಮಾಧಿ ಮಾಡಲಾಗಿರುವ ಬಗ್ಗೆ ಅಲ್ಲಿರುವ ಶಾಸನದಲ್ಲಿ ಉಲ್ಲೇಖಿಸಲಾಗಿದೆಯೆಂದು ಡಾ. ಜಾರ್ಜ್ ಮಿಶೆಲ್ ಸಂಶೋಧಿಸಿದ್ದಾರೆ.

ಉಳಿದ ಯಾವ ರಾಜರುಗಳ ಸಮಾಧಿಗಳ ಬಗ್ಗೆ ಉಲ್ಲೇಖವಿಲ್ಲವಾದರೂ ಸಹ ಹಿಂದೂ ಸಂಪ್ರದಾಯದಂತೆ ರಾಜವಂಶಸ್ಥರ ಸಮಾಧಿಗಳನ್ನು ಒಂದೆಡೆ ನಿರ್ಮಿಸುವುದು ಹಾಗೂ ಸಮಾಧಿಗಳ ಮೇಲೆ ಲಿಂಗಗಳನ್ನು ಇಡುವುದು ಧಾರ್ಮಿಕ ಪರಂಪರೆಯಾಗಿದೆ. ಈ ಹಿನ್ನಲೆಯಲ್ಲಿ ಹೆಚ್ಚಿನ ಸಂಶೋಧನೆಯ ಅಗತ್ಯವಿದ್ದು ಪ್ರಾಚ್ಯ ಹಾಗೂ ಪುರಾತತ್ವ ಇಲಾಖೆಗಳು ಇಲ್ಲಿರುವ ಸಮಾಧಿಗಳ ಉತ್ಖನನ ನಡೆಸಿದಲ್ಲಿ ಸತ್ಯಾಸತ್ಯತೆ ಗೊತ್ತಾಗುವುದು.

ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಕಾರ್ಬನ್ ಡೇಟಿಂಗ್ ಪ್ರಕಾರ ಆದಿಮಾನವನ ಅಸ್ಥಿ ಪಂಜರಗಳ ಕಾಲವನ್ನು ಗುರುತಿಸಲಾಗಿದೆ. ಈ ಹಿನ್ನಲೆಯಲ್ಲಿ ಇಡೀ ದೇಶದಲ್ಲಿಯೇ ಅತೀ ದೊಡ್ಡ ಹಿಂದೂ ದೇವಾಲಯಗಳ ನಿರ್ಮಾಣದ ಅಂದೋಲನ ಆರಂಭಿಸಿದ ಚಾಲುಕ್ಯರ ಸಮಾಧಿಗಳ ಉತ್ಖನನ ನಡೆಸುವುದು ಅಗತ್ಯವಾಗಿದೆ.

ಹುಲಿಗೆಮ್ಮನ ಕೊಳ್ಳದ ಚಾಲುಕ್ಯರ ಸಮಾಧಿಗಳ ಕುರಿತು 80ರ ದಶಕದಲ್ಲಿ ಚಾಲುಕ್ಯರ ಶಾಸನ ಅಧ್ಯಯನ ಮಾಡಿದ ಡಾ.ಕೆ.ವಿ.ರಮೇಶ ಅವರು ಅಲ್ಲಿರುವ 2ನೇ ವಿಕ್ರಮಾದಿತ್ಯ ರಾಜನ ಅಸ್ಥಿ ಸಮಾಧಿ ಬಗ್ಗೆ ಉಲ್ಲೇಖಿಸಿದ್ದಾರೆ ನಿಜ. ಆದರೆ ಅಲ್ಲಿರುವ







downloaded from : www.kpscvaani.com



ಉಳಿದ 10 ಚಿಕ್ಕ ಚಿಕ್ಕ ಗುಡಿಗಳ ಬಗ್ಗೆ ಸರಿಯಾಗಿ ತಿಳಿಸಿಲ್ಲ. ಅಲ್ಲದೇ ಈವರೆಗೆ ಯಾವೊಬ್ಬ ಸಂಶೋಧಕನು ಸಹ ಅವು ರಾಜರ ಸಮಾಧಿಗಳಲ್ಲವೆಂದು ವಾದಿಸಿಲ್ಲ. ಇವುಗಳ ಬಗ್ಗೆ ಹೆಚ್ಚಿನ ತರ್ಕಬದ್ಧ ವಿಚಾರಗಳನ್ನು ತಿಳಿಸಿಲ್ಲ. ಹಿಂದೂ ಸಂಪ್ರದಾಯದಂತೆ ನನ್ನ ವೈಚಾರಿಕ, ತರ್ಕಗಳನ್ನು ನಾನು ನನ್ನ ಲೇಖನದಲ್ಲಿ ಹಂಚಿಕೊಂಡಿದ್ದೇನೆ.

ನಾನು ಹುಲಿಗೆಮ್ಮನಕೊಳ್ಳದಲ್ಲಿ 16 ರಾತ್ರಿಗಳನ್ನು ಕಳೆದಿದ್ದೇನೆ. ಸುಮಾರು ಸಲ ಭೇಟಿ ನೀಡಿದ್ದೇನೆ. ಅಲ್ಲಿರುವ ಫಲಕದಲ್ಲಿ ಅವು ದ್ವಾದಶ 12 ಜ್ಯೋತಿರ್ಲಿಂಗಗಳೆಂದು ತಪ್ಪಾಗಿ ಅರ್ಥೈಸಿದ್ದಾರೆ. ಯಾವುದೇ ಜ್ಞಾನಿಯಾಗಲಿ, ಸಂಶೋಧಕನಾಗಲಿ, ಇತಿಹಾಸಕಾರನಾಗಲಿ ಹುಟ್ಟದಾಗಿನಿಂದ ಯಾರು ಜ್ಞಾನವನ್ನು ಪಡೆದಿರುವುದಿಲ್ಲ. ಜೀವನದ ದಾರಿಯಲ್ಲಿ ತಮ್ಮ ತಮ್ಮ ಓದಿನ ಜೊತೆಗೆ ಅನುಭವ ಆಧಾರದ ತರ್ಕಬದ್ಧಗಳನ್ನು ವಿಶ್ಲೇಷಿಸಿ ಒರೆಗಲ್ಲಿಗೆ ಹಚ್ಚಿಸಿ ಸಂಶೋಧನೆಗಳು ಜರುಗುತ್ತವೆ.

ಉತ್ತರ ಕರ್ನಾಟಕ ವಿಶೇಷವಾಗಿ ಈ ಚಾಲುಕ್ಯ ಭೂಮಿ ಬಹಳ ಪ್ರಾಚೀನ ಕಾಲದ ಭೂಮಿ. ಅದರ ಪುರಾತತ್ವ ಅವಶೇಷಗಳ ಸಂಪತ್ತು ಇನ್ನೂ ತೆಗೆಯಲಾಗಿಲ್ಲ. ಪೂರ್ವ ಐತಿಹಾಸಿಕ ತಾಣಗಳ ಸಮೀಕ್ಷೆ ಮತ್ತು ಪರಿಶೋಧನೆ ಮತ್ತು ಅವುಗಳ ಉತ್ಖನನ, ಡಾಲ್ಮೆನ್ಸ್ ಮತ್ತು ಬಂಡೆಗಳ ಅಧ್ಯಯನ, ಕಲಾತ್ಮಕ ಸ್ಮಾರಕಗಳ ಪರಿಶೀಲನೆ, ಭೂಮಿಯಲ್ಲಿ ಹರಡಿರುವ ಹೆಚ್ಚಿನ ಸಂಖ್ಯೆಯ ಶಾಸನಗಳ ಅರ್ಥೈಸುವಿಕೆ ಮತ್ತು ಜನರ ಸಾಂಸ್ಕೃತಿಕ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳಲು ಅವುಗಳ ಸರಿಯಾದ ಮೌಲ್ಯಮಾಪನ ಹಿಂದಿನ ಯುಗಗಳಲ್ಲಿ ಉತ್ತರ ಕರ್ನಾಟಕ ಮತ್ತು ಅಂತಿಮವಾಗಿ ಭರತವರ್ಷ ಸಂಸ್ಕೃತಿಯ ವಿಕಾಸಕ್ಕೆ ಕರ್ನಾಟಕದ ಕೊಡುಗೆಯನ್ನು ಮೌಲ್ಯಮಾಪನ ಮಾಡುವುದು ಇವೆಲ್ಲವೂ ಬಾರಿ ಸಾಲವಾಗಿದ್ದು, ಕರ್ನಾಟಕದ ಸಂಶೋಧನಾ ವಿದ್ಯಾರ್ಥಿಯೊಬ್ಬರು ಅರಿತುಕೊಳ್ಳಬೇಕು ಮತ್ತು ಶ್ರದ್ಧೆಯಿಂದ ಹೊರಹಾಕಲು ಪ್ರಯತ್ನಿಸಬೇಕು.

ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಬಾದಾಮಿಯ ಕೆಂಪು ಮರಳು ಕಲ್ಲಿನ ಬಂಡೆಗಲು ಜನಪ್ರಿಯವಾಗಿವೆ. ರಾಶಿಯಲ್ಲಿ ಚದುರಿದ ಬಂಡೆಗಳನ್ನು ನೋಡಲು ಈ ಭಾಗಗಳಲ್ಲಿ ಪ್ರಕೃತಿ ತಾಯಿಯ ಉತ್ಕೃಷ್ಟ ಶಕ್ತಿಯಿಂದ ಪ್ರಭಾವಿತರಾಗಬೇಕು. ಅವು ಸಾವಿರ ದಶಲಕ್ಷ ವರ್ಷಗಳಷ್ಟು ಹಳೆಯವು. ಮಳೆ, ಭೂಕಂಪಗಳು, ಸೂರ್ಯ ಮತ್ತು ಇತರ ನೈಸರ್ಗಿಕ ಶಕ್ತಿಗಳು ಅವುಗಳ ಬಾಹ್ಯರೇಖೆಗಳನ್ನು ಮೃದುಗೊಳಿಸಿವೆ. ನನ್ನ ಕಾಲೇಜು ದಿನಗಳಿಂದ ಈ ಚಾಲುಕ್ಯರ ವಾಸ್ತುಶಿಲ್ಪವು ನನ್ನನ್ನು ಆಕರ್ಷಿಸುತ್ತಿದೆ. ಒಂದು ದಶಕದಿಂದ ಎಕ್ಸ್‌ಪ್ಲೋರರ್ ಮತ್ತು ಸ್ವತಂತ್ರ ಛಾಯಾಗ್ರಾಹಕನಾಗಿ ನನ್ನ ಕ್ಯಾಮೆರಾದಲ್ಲಿ ಚಾಲುಕ್ಯ ಸ್ಮಾರಕಗಳ ಸೌಂದರ್ಯವನ್ನು ಸೆರೆಹಿಡಿಯಲು ಕಾರಣವಾಯಿತು. ನಾನು ಈ ಭೂಮಿಯ ಪ್ರತಿಯೊಂದು ಮೂಲೆ, ಮೂಲೆಯಲ್ಲಿ ನಡೆದಿದ್ದೇನೆ. ಕಣಿವೆಗಳು ಮತ್ತು ಕಮರಿಗಳು, ಕಲ್ಲಿನ ಭೂಪ್ರದೇಶ ಮತ್ತು ಪ್ರತಿ ಸ್ಮಾರಕಕ್ಕೂ ಭೇಟಿ ನೀಡಿ 14 ವರ್ಷಗಳ ಹಿಂದೆ ನನ್ನ ಕೆಲಸವನ್ನು ಪ್ರಾರಂಭಿಸಿದೆ.

ಬಾದಾಮಿ, ಪಟ್ಟದಕಲ್ಲು ಐಹೊಳೆ ಮತ್ತು ಮಹಾಕೂಟದಲ್ಲಿ ಮಾಡಿದ ಮಹತ್ತರ ಕಾರ್ಯಗಳಿಗಾಗಿ ಪ್ರವರ್ತಕ ರಾಜವಂಶಕ್ಕೆ ಗೌರ ಸಲ್ಲಿಸಬೇಕೆಂದೆ ಈ ಸಾಮ್ರಾಜ್ಯ ನಿರ್ಮಾಣವಾಯಿತು. ತಮ್ಮದೇ ಆದ ಅನುಭವದಲ್ಲಿ, ಸ್ಥಳೀಯ ಸಾಮಗ್ರಿಗಳಲ್ಲಿ ತಮ್ಮದೇ ಆದ ಕುಶಲಕರ್ಮಿಗಳ ಸಂಘಗಳ ಮೂಲಕ ದೇವಾಲಯಗಳು ನಮ್ಮ ದೃಷ್ಟಿಯಲ್ಲಿ ಅದ್ಭುತ ಪ್ರಜ್ಞೆಯನ್ನು ಮೂಡಿಸುತ್ತವೆ. ಆರಂಭಿಕ ಪಾಶ್ಚಾತ್ಯ ಚಾಲುಕ್ಯ ದೇವಾಲಯಗಳು ಭಾರತೀಯ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಇತಿಹಾಸದಲ್ಲಿ ಅತ್ಯಂತ ಸೃಜನಶೀಲ ಹಂತಗಳಲ್ಲಿ ಒಂದಾಗಿದೆ.


ಇನ್ನೂರು ವರ್ಷಗಳಿಂದ ಕಡಿಮೆ ಅವಧಿಯಲ್ಲಿ ಇಲ್ಲಿ ನಡೆದ ವಿಕಾಸವು ದಕ್ಷಿಣ ಭಾರತದ ದೇವಾಲಯಗಳ ನಂತರದ ಅಭಿವೃದ್ಧಿಯ ಮೇಲೆ ತೀವ್ರ ಪರಿಣಾಮ ಬೀರಿತು. ಅನೇಕ ವಿದ್ವಾಂಸರು, ಭಾರತೀಯರು ಮತ್ತು ವಿದೇಶಿಯರು ಈ ಸ್ಮಾರಕಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಮತ್ತು ಪ್ರಪಂಚದಾದ್ಯಂತ ಅನೇಕ ಸಂಶೋಧನಾ ಪುಸ್ತಕಗಳು, ಪ್ರಬಂಧಗಳನ್ನು ಬರೆದಿದ್ದಾರೆ. ಕರ್ನಾಟಕ ಸರಕಾರದಿಂದ ನಾಡೋಜ ಪಡೆದ ಏಕೈಕ ವಿದೇಶಿ ಡಾ. ಜಾರ್ಜ್ ಮೈಕೆಲ್ ತಮ್ಮ ಮೂರು ದಶಕಗಳ ಸಂಶೋಧನಾ ಜೀವನವನ್ನು ಈ ಚಾಲುಕ್ಯರ ಸ್ಮಾರಕಗಳ ಮೇಲೆ ಇರಿಸಿದ್ದಾರೆ.

ಜಾನ್ ಫ್ಲೀಟ್, ಆರ್.ಜಿ.ಭಂಡಾರ್ಕರ್, ಸಿ.ವಿ.ರಂಗಸ್ವಾಮಿ, ಡಾ.ಎ.ಸುಂದರಾ, ಡಾ.ಎಚ್.ಎಸ್.ಗೋಪಾಲರಾವ್, ಡಾ.ಕೆ.ವಿ.ರಮೇಶ, ಡಾ.ಶೀಲವಂತ ಪತ್ತಾರ, ಡಾ.ಶ್ರೀನಿವಾಸ ಪಡಿಗರ, ಡಾ.ಎಸ್.ರಾಜಶೇಖರ, ಹೆನ್ರಿ ಕೌಸೆನ್ಸ್, ಗ್ಯಾರಿ ಟಾರ್ಟಕೋವ್, ಡಾ.ಕರೋಲ್ ಬೋಲನ್, ಡಾ.ಆರ್.ಎಸ್.ಗುಪ್ತೆ, ಡಾ.ಮೀನಾ ಮೋಹೈಟ್, ಡಾ.ಎಸ್.ವಿ.ವೆಂಕಟೇಶಯ್ಯ, ಡಾ.ಆರ್.ಎಚ್.ಕುಲಕರ್ಣಿ ಮತ್ತು ಇತ್ತೀಚೆಗೆ ಡಾ.ಡಾ.ಚಂದ್ರಶೇಖರ್ ತಮೋಜಿ, ಡಾ.ಮಹಾಂತೇಶ ಪಲಾಡಿನ್ನಿ ಮತ್ತು ಇತರರು ಈ ಪಾಶ್ಚಾತ್ಯ ಚಾಲುಕ್ಯರ ವಿವಿಧ ಅಂಶಗಳ ಬಗ್ಗೆ ಕೆಲಸ ಮಾಡಿದ್ದಾರೆ.

ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಮತ್ತು ಐಹೊಳೆ ಸ್ಮಾರಕಗಳು ಇಂದು ಪ್ರಪಂಚದಾದ್ಯಂತ ಪ್ರಸಿದ್ಧವಾಗಿವೆ. ಮತ್ತು ಪ್ರತಿದಿನ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಈ ಸ್ಥಳಗಳಲ್ಲಿನ ಕಲಾ ಪ್ರಕಾರಗಳು ಮತ್ತು ಶಿಲ್ಪಕಲೆಗಳು ಭಾರತೀಯ ದೇವಾಲಯದ ವಾಸ್ತುಶಿಲ್ಪಕ್ಕೆ ಸ್ಫೂರ್ತಿ ನೀಡಿವೆ. ನಿಜವಾದ ಅರ್ಥದಲ್ಲಿ ಚಾಲುಕ್ಯನ ಅವಧಿ ಕರ್ನಾಟಕದ ದೇವಾಲಯ ವಾಸ್ತುಶಿಲ್ಪದ ಸುವರ್ಣಯುಗವಾಗಿದೆ. ಪ್ರವಾಸಿಗರು ಈ ಸ್ಥಳಗಳಲ್ಲಿ ಕನಿಷ್ಠ ಮೂರು ದಿನ ಸ್ಮಾರಕಗಳನ್ನು ವಿವರವಾಗಿ ನೋಡಬಹುದು.

ಈ ಚಾಲುಕ್ಯ ಸ್ಮಾರಕಗಳ ಪುನರ್ ನಿರ್ಮಾಣ ಮತ್ತು ದುರಸ್ತಿ ಕಾರ್ಯಗಳನ್ನು ಭಾರತದ ಪುರಾತತ್ವ ಸಮೀಕ್ಷೆಯ ಧಾರವಾಡ ವಲಯ ಕೈಗೆತ್ತಿಕೊಂಡಿದೆ. ಸ್ಮಾರಕಗಳ ಸುತ್ತಲೂ ಸುಂದರವಾದ ಉದ್ಯಾನಗಳನ್ನು ಈಗ ನಿರ್ವಹಿಸಲಾಗುತ್ತಿದೆ. ಇನ್ನೂ ಎಎಸ್ಐ ಕೈಗೆತ್ತಿಕೊಳ್ಳಬೇಕಾದ ಸಂರಕ್ಷಣಾ ಕಾರ್ಯಗಳು ಸಾಕಷ್ಟು ಇವೆ. ಈ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮತ್ತು ಸಂರಕ್ಷಣೆಯಲ್ಲಿ ಅವರ ಪಾತ್ರದ ಬಗ್ಗೆ ಸ್ಥಳೀಯ ಜನರು ಮತ್ತು ಪ್ರವಾಸಿಗರಲ್ಲಿ ಜಾಗೃತಿ ಮೂಡಿಸುವ ತುರ್ತು ಅವಶ್ಯಕತೆಯಿದೆ. ■






# ಮಹಿಳಾ ಸುರಕ್ಷತೆಗೆ ಸುರಕ್ಷಾ ಆ್ಯಪ್

ನಾಗರತ್ನ ಜಿ ಎಸ್

"ನಿರ್ಭಯಾ, ದಿಶಾ, ಉನ್ನಾವ್ನೋ ಪ್ರಕರಣಗಳು ದೇಶದ ಜನರ ಮನಕಲಕಿವೆ. ಮಾನವ ಏಕೆ ಹೀಗೆ ಮೃಗಗಳ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾನೆ ಎಂಬ ಚಿಂತೆ ಮತ್ತು ಆತಂಕ ಸಮುದಾಯದಲ್ಲಿ ಆಳವಾಗಿ ಬಿತ್ತಿದೆ. ಮಹಿಳಾ ಸುರಕ್ಷತೆ ಈಗ ಸಣ್ಣಪುಟ್ಟ ವಿಷಯವಾಗಿಲ್ಲ. ಇದು ಎಲ್ಲ ಸರ್ಕಾರಗಳಿಗೂ ದೊಡ್ಡ ಸವಾಲಿನ ಕೆಲಸವಾಗಿದೆ. ಆದರೆ ತಂತ್ರಜ್ಞಾನ ಎಂತಹ ಅಪರಾಧಿಯನ್ನು ಪೆಡ್ಡಾಕ್ಕೆ ಕೆಡವಿ ಹಾಕುವ ಸಾಮರ್ಥ್ಯ ಹೊಂದಿದೆ. ಹಾಗಾಗಿ ಮಹಿಳೆಯರು ಸುರಕ್ಷತೆಗಾಗಿ ಯಾರನ್ನಾದರು ಅವಲಂಬಿಸುವ ಅವಶ್ಯಕತೆ ಇಲ್ಲ. ಮಹಿಳೆಯರು ಸುರಕ್ಷತೆಗಾಗಿ  ತಮ್ಮ ಮೊಬೈಲ್ ಅನ್ನೇ ಬಳಸಬಹುದಾಗಿದೆ. ತಂತ್ರಜ್ಞಾನ ಅಷ್ಟು ಮುಂದುವರೆದಿದೆ. ಪೊಲೀಸ್ ಇಲಾಖೆ ಕೂಡ ಈ ನಿಟ್ಟಿನಲ್ಲಿ ಮಹಿಳೆಯರ ಸುರಕ್ಷತೆಗಾಗಿ ಸುರಕ್ಷಾ ಆ್ಯಪ್ ಅನ್ನು ಸಿದ್ಧಪಡಿಸಿದೆ."

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ವಿಶೇಷ ಸ್ಥಾನವಿದೆ. ಮಹಿಳೆಯರಿಗೂ ಸಮಾನ ಸ್ಥಾನಮಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅನೇಕ ಉಪಕ್ರಮಗಳನ್ನು ಸರ್ಕಾರ, ಸಂಘ ಸಂಸ್ಥೆಗಳು ಕೈಗೊಂಡಿವೆ. ಅದೇ ರೀತಿ ಮಹಿಳೆ ಅಪಾಯಕ್ಕೆ ಸಿಲುಕಿದಾಗ, ಆಕೆಯ ರಕ್ಷಣೆಗೂ ಗಮನ ಹರಿಸಲಾಗಿದೆ. ಆದರೆ ಹೆಚ್ಚುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಸಮಾಜದ ಮನ ಕಲಕಿದೆ. ಮಹಿಳಾ ಸುರಕ್ಷತೆ ಈಗ ಸವಾಲಿನ ದೊಡ್ಡ ಕೆಲಸವಾಗಿದೆ. ಬೆಂಗಳೂರು ನಗರ ಪೊಲೀಸ್ ಇಲಾಖೆ ವತಿಯಿಂದ ನಗರದಲ್ಲಿ ಮಹಿಳೆಯರ ಸುರಕ್ಷತೆಗಾಗಿ ಗಸ್ತು ವಾಹನವಾದ ಪಿಂಕ್ ಹೊಯ್ಸಳವನ್ನು ಈಗಾಗಲೆ ನಿಯೋಜಿಸಿದೆ. ಈಗ ಮಹಿಳೆಯರು ಸ್ವರಕ್ಷಣೆ ಸಂದರ್ಭದಲ್ಲಿ ಬಳಸಬಹುದಾದಂತಹ ಅಸ್ತ್ರವಾಗಿ ಸುರಕ್ಷಾ ಆ್ಯಪ್ ಅನ್ನು ಸಿದ್ಧಪಡಿಸಿ ನೀಡಿದೆ.

ಬೆಂಗಳೂರು ಪೊಲೀಸರು ಅಭಿವೃದ್ಧಿಪಡಿಸಿರುವ ಈ ಸುರಕ್ಷಾ ಆ್ಯಪ್‌ನಲ್ಲಿ ತುರ್ತು ಸಂದರ್ಭದಲ್ಲಿ ಸಂಪರ್ಕಿಸಬಹುದಾದ ಸ್ನೇಹಿತರು, ಪೋಷಕರು, ಬಂಧು ಬಾಂಧವರ ಮೊಬೈಲ್ ಸಂಖ್ಯೆಯ ವಿವರಗಳನ್ನು ಸೇರಿಸಬಹುದು. ತುರ್ತು ಸಂದರ್ಭದಲ್ಲಿ ಆ್ಯಪ್ ತೆರೆದು ಪವರ್ ಬಟನ್ ಒತ್ತಿ ಹಿಡಿದರೆ



downloaded from: www.kpscvaani.com

ಪೊಲೀಸ್ ಸಹಾಯವಾಣಿಗೆ ಕರೆ ಹೋಗುತ್ತದೆ. ಅಲ್ಲದೇ ಬಳಕೆದಾರರು ಇರುವ ಸ್ಥಳ ಗುರುತು, ಆಡಿಯೋ ಮತ್ತು ವಿಡಿಯೋ ಕೂಡ ರವಾನೆಯಾಗುತ್ತದೆ. ಆ್ಯಪ್‌ನಲ್ಲಿ ದಾಖಲಿಸಿರುವ ತುರ್ತು ಸಂಖ್ಯೆಗಳಿಗೂ ಕರೆ ಹೋಗುತ್ತದೆ. ಮೊಬೈಲ್‌ನಲ್ಲಿನ ಪ್ಯಾನಿಕ್ ಐಕಾನ್ ಬಟನ್ ಅನ್ನು ಐದು ಬಾರಿ ಒತ್ತಿದರೂ ಕೂಡ ಪೊಲೀಸರಿಗೆ ಮತ್ತು ಆ್ಯಪ್‌ನಲ್ಲಿ ದಾಖಲಿಸಿರುವ ಇಬ್ಬರ ಮೊಬೈಲ್ ಸಂಖ್ಯೆಗೆ ಎಚ್ಚರಿಕೆಯ ಸಂದೇಶ ರವಾನೆಯಾಗುತ್ತದೆ.

ಕಳ್ಳತನ, ದರೋಡೆ, ದೌರ್ಜನ್ಯದ ಸಂದರ್ಭಗಳಲ್ಲೂ ಈ ಆ್ಯಪ್ ನೆರವಿಗೆ ಬರಲಿದೆ. ಇದನ್ನು ಮಹಿಳೆಯರು ಮಾತ್ರವಲ್ಲ, ಅಪಾಯದ ಸಂದರ್ಭಗಳಲ್ಲಿ ಪುರುಷರೂ ಬಳಸಬಹುದಾಗಿದೆ. ಈ ಆ್ಯಪ್‌ನಲ್ಲಿನ ಒಂದು ಬಟನ್ ಒತ್ತುವ ಮೂಲಕ ಪೊಲೀಸರು ಅಪಾಯದಲ್ಲಿ ಸಿಲುಕಿರುವವರು ಇರುವ ಸ್ಥಳಕ್ಕೆ ಧಾವಿಸುತ್ತಾರೆ. ಅಲ್ಲದೇ ಮೊಬೈಲ್‌ನ ಕ್ಯಾಮೆರಾ ಆನ್ ಆಗಿ ಘಟನಾ ಸ್ಥಳದ ಮಾಹಿತಿ ಕಂಟ್ರೋಲ್ ರೂಂಗೆ ರವಾನೆಯಾಗಿರುತ್ತದೆ.

ಪಿಂಕ್ ಹೊಯ್ಸಳ ವಾಹನದ ಸೇವೆ ಪಡೆಯಲು, ಸುರಕ್ಷಾ ಆ್ಯಪ್‌ನಲ್ಲಿರುವ ಬಟನ್ ಒತ್ತಬಹುದಾಗಿದ್ದು ಹದಿನೈದು ನಿಮಿಷಗಳಲ್ಲಿ ಪಿಂಕ್ ಹೊಯ್ಸಳ ಸ್ಥಳಕ್ಕೆ ಬರಲಿದೆ. ಪ್ರತಿ ವಾಹನದಲ್ಲಿ ಮೂವರು ಮಹಿಳಾ ಪೊಲೀಸ್ ಸಿಬ್ಬಂದಿ ಇದ್ದು ಶಾಲಾ – ಕಾಲೇಜು, ಕಚೇರಿ, ಮಾಲ್‌ಗಳ ಬಳಿ ಈ ವಾಹನಗಳನ್ನು ನಿಯೋಜಿಸಲಾಗಿದೆ. ಕೆಲವು ಹೊಯ್ಸಳ ವಾಹನಗಳು ಗಸ್ತು ತಿರುಗುತ್ತಾ ನಿಗಾ ವಹಿಸಲಿವೆ. ಮಾರ್ಗ ನಕ್ಷೆಗಾಗಿ ಮೊಬೈಲ್ ಡೇಟಾ ಟರ್ಮಿನಲ್, ಅಗ್ನಿಶಂದಕ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಸ್ಟಾಂಡರ್ಡ್ ಆಪರೇಟರ್ ಪ್ರೊಸೀಜರ್ ಮೊದಲಾದ ವ್ಯವಸ್ಥೆಗಳನ್ನು ಈ ವಾಹನಗಳು ಹೊಂದಿರಲಿವೆ.

ಮಹಿಳೆಯರ ಸುರಕ್ಷತೆಗೆ ಪೊಲೀಸರ ನೆರವಿಗೆ ಮುಂದೆ ಬಂದಿರುವ ಸ್ವಯಂಸೇವಕರಿಗೆ ರಾಜ್ಯ ಪೊಲೀಸ್ ಇಲಾಖೆ ತರಬೇತಿ ನೀಡಲು ನಿರ್ಧರಿಸಿದೆ. ಶಾಲಾ – ಕಾಲೇಜುಗಳಲ್ಲಿ ಸ್ವಯಂ – ರಕ್ಷಣೆ ತರಬೇತಿ, ಬೆಂಗಳೂರು ವ್ಯಾಪ್ತಿಗೆ ಹೊರತಂದಿರುವ 'ಸುರಕ್ಷಾ ಆ್ಯಪ್' ಅನ್ನು ರಾಜ್ಯಾದ್ಯಂತ ವಿಸ್ತರಣೆಗೆ ನಿರ್ಧರಿಸಲಾಗಿದೆ.

ಅಲ್ಲದೇ ಪ್ರಯಾಣದ ಸಂದರ್ಭದಲ್ಲಿ ಮಹಿಳಾ ಪ್ರಯಾಣಿಕರಿಗೆ ಯಾವುದೇ ಅಪಾಯವಾಗದಿರಲಿ ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಲವು ಬಸ್‌ಗಳಲ್ಲಿ ಅಲರಾಂ ಬೆಲ್ ಮತ್ತು ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುತ್ತಿದೆ. ಇನ್ನು ಓಲಾ, ಊಬರ್ ಮೊದಲಾದ ಸಂಸ್ಥೆಗಳೂ ಕೂಡ ತಮ್ಮ ಆ್ಯಪ್‌ಗಳಲ್ಲೂ ಮಹಿಳಾ ಸುರಕ್ಷತೆಗೆ ಆದ್ಯತೆ ನೀಡಿವೆ.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಯಲು ಬೆಂಗಳೂರು ಸೇರಿದಂತೆ ದೇಶದ ಎಂಟು ಪ್ರಮುಖ ನಗರಗಳಲ್ಲಿ ವಿಶೇಷ ಯೋಜನೆ ಘೋಷಿಸಿದೆ. ಮಹಿಳೆಯರ ಸುರಕ್ಷತೆಗೆ ಎಲ್ಲ ಸಾಧ್ಯ ಕ್ರಮಗಳನ್ನು ಜಾರಿಗೆ ತರುವುದು ಇದರ ಉದ್ದೇಶವಾಗಿದೆ. ಅಪಾಯದ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ, ಅಪಾಯದ ಕರೆಗಂಟೆ ಅಳವಡಿಸುವುದು ಇದರ ಭಾಗವಾಗಿದೆ. ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯವಾಣಿ ಕೇಂದ್ರ, ಆಪ್ತಸಮಾಲೋಚಕರ ಸೇವೆ ಸಿಗಲಿದೆ. ಈ ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 60 : 40 ರ ಅನುಪಾತದಲ್ಲಿ ಭರಿಸಬೇಕಿದೆ. ಬೆಂಗಳೂರು, ದೆಹಲಿ, ಮುಂಬೈ, ಕೋಲ್ಕತಾ, ಚೆನ್ನೈ, ಹೈದರಾಬಾದ್, ಅಹಮದಾಬಾದ್, ಲಖನೌಗಳಲ್ಲಿ ಈ ಯೋಜನೆ ಜಾರಿಯಲ್ಲಿದ್ದು ಮಹಿಳಾ ಗಸ್ತು ತಂಡ ಸುರಕ್ಷತೆಯ ನಿಗಾ ವಹಿಸಲಿದೆ.

ಉಡುಪಿಯ ಮಹಿಳಾ ಪೊಲೀಸ್ ಠಾಣೆಯಲ್ಲಿ ರಾಣಿ ಅಬ್ಬಕ್ಕ ಪಡೆ ಅಸಭ್ಯ ವರ್ತನೆ ತೋರುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಿದೆ. ಚಿತ್ರದುರ್ಗದ ಒನಕೆ ಓಬವ್ವ, ಸಾಗರದ ಕೆಳದಿ ಚೆನ್ನಮ್ಮ ಪಡೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಎಂದಿನಂತೆ ಸಂಖ್ಯೆ 100 ಕ್ಕೂ ಸಹ ಕರೆ ಮಾಡಿ ವಿಷಯ ತಿಳಿಸಬಹುದಾಗಿದೆ.

ಹಾಗಾಗಿ ಆಪತ್ತಿನ ಸಂದರ್ಭಗಳಲ್ಲಿ ಪೊಲೀಸರನ್ನು ಹುಡುಕಬೇಕಿಲ್ಲ. ನಿಮ್ಮ ಮೊಬೈಲ್‌ನಲ್ಲೇ ಪೊಲೀಸ್ ಸೇವೆ ಪಡೆಯಬಹುದು. ಅಲ್ಲಿಂದಲೇ ಪಾರಾಗುವ ಅವಕಾಶವೂ, ತೊಂದರೆ ಕೊಡುವವರಿಗೆ ಪಾಠ ಕಲಿಸಲೂ ಸಾಧ್ಯವಿದೆ. ಅಸುರಕ್ಷಿತ ಪ್ರದೇಶಗಳ ಬಗ್ಗೆ ಎಚ್ಚರಿಕೆ ನೀಡುವುದರ ಜೊತೆಗೆ ಅಪಾಯಕಾರಿ ಸನ್ನಿವೇಶದಲ್ಲಿ ಅಲರ್ಟ್ ರವಾನಿಸುವ ಆಪ್‌ಗಳು ಆಪತ್ತಿನ ಸಂದರ್ಭದಲ್ಲಿ ಆಸರೆಯಾಗಬಲ್ಲವಾಗಿವೆ. ದೇಶಾದ್ಯಂತ ತುರ್ತು ಪ್ರತಿಕ್ರಿಯಾ ವ್ಯವಸ್ಥೆಗೆ ಅಪಾಯದ ಬಗ್ಗೆ ಮಾಹಿತಿ ರವಾನಿಸಲು ಒಂದೇ ತುರ್ತು ಸಂಖ್ಯೆ 112 ಬಳಸಬಹುದಾಗಿದೆ. ಇದು ವಾರದ ಎಲ್ಲಾ ದಿನ, 24 ಗಂಟೆಗಳೂ ಸೇವೆ ನೀಡುತ್ತದೆ. ತುರ್ತು ಪ್ರತಿಕ್ರಿಯಾ ವ್ಯವಸ್ಥೆ ಕಾಲ್ಸ್ ಗ್ರಹಿಸುತ್ತದೆ, ಎಸ್ ಎಮ್ ಎಸ್, ಇ – ಮೇಲ್ ಸಂದೇಶ ಮೊದಲಾದ ಮಾಧ್ಯಮಗಳ ಮೂಲಕ ಮಾಡುವ ನೆರವಿನ ಕೂಗಿಗೆ ತಕ್ಷಣ ಪ್ರತಿಕ್ರಿಯೆ ನೀಡುತ್ತದೆ. ಅಲ್ಲದೇ ಆ್ಯಪ್‌ನ ಪ್ಯಾನಿಕ್ ಬಟನ್, ಸಂಚಾರದಲ್ಲಿನ ತುರ್ತು ಅಪಾಯದ ಗುಂಡಿಗಳನ್ನು ಒತ್ತಿದರೂ ತಕ್ಷಣವೇ ಅಪಾಯ ಗ್ರಹಿಸುತ್ತದೆ. ತಕ್ಷಣವೇ ಅಪಾಯದ ಸ್ಥಳ ಪತ್ತೆ ಮಾಡುತ್ತದೆಯಲ್ಲದೇ ಸಮೀಪದಲ್ಲಿರುವ ಸಹಾಯಕ ವಾಹನಗಳಿಗೂ ವಿಷಯ ರವಾನೆ ಮಾಡುತ್ತದೆ. ಈ ಆ್ಯಪ್ ತುರ್ತು ಪ್ರತಿಕ್ರಿಯಾ ವ್ಯವಸ್ಥೆಗೆ ಸಂದೇಶ ನೀಡುವುದರ ಜೊತೆ ಜೊತೆಗೇ ಕುಟುಂಬದವರಿಗೂ ಸಂದೇಶ ನೀಡುತ್ತದೆ.

ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ನೆರವಾಗಲು 112 ಇಂಡಿಯಾ ಆ್ಯಪ್ ಅನ್ನು ಸರ್ಕಾರ ರೂಪಿಸಿದೆ. ಗೃಹ ವ್ಯವಹಾರಗಳ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ ಮತ್ತು ರಾಜ್ಯ ಪೊಲೀಸರು ಜಂಟಿಯಾಗಿ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹಾಗೂ ಸಿ ಡ್ಯಾಕ್ ಸಹಯೋಗದಲ್ಲಿ ಆ್ಯಪ್ ರೂಪಿಸಲಾಗಿದೆ. ಇದನ್ನು ಗೂಗಲ್ ಪ್ಲೇಸ್ಟೋರ್ ಅಥವಾ ಐಓಎಸ್ ಆ್ಯಪ್ ಸ್ಟೋರ್ ಅಥವಾ 112 ಜಾಲತಾಣ (ಡಬ್ಲ್ಯು ಡಬ್ಲ್ಯು ಡಬ್ಲ್ಯು ಡಾಟ್ 112 ಡಾಟ್ ಜಿಓವಿ ಡಾಟ್ ಐಎನ್) ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಒಂದು ಬಾರಿ ಸಂಕೇತ (ಒಟಿಪಿ) ದಾಖಲಿಸಿ ನೋಂದಾಯಿಸಿಕೊಳ್ಳಬಹುದಾಗಿದೆ. ಅಪಾಯದಲ್ಲಿರುವವರನ್ನು ರಕ್ಷಿಸಲು ಇಚ್ಛಿಸುವ ಸ್ವಯಂಸೇವಾ ಕಾರ್ಯಕರ್ತರು ಸಹ ಈ ಆ್ಯಪ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಅಪಾಯದಲ್ಲಿರುವ ಮಾಹಿತಿ ನೀಡಬಹುದಾದ ಹತ್ತು ತುರ್ತು ಸಂಖ್ಯೆಗಳನ್ನು ದಾಖಲಿಸಬಹುದಾಗಿದೆ.

ಈ ಆ್ಯಪ್ ಮೂಲಕ ತಕ್ಷಣದ ವೈದ್ಯಕೀಯ ಅಗತ್ಯ, ನೈಸರ್ಗಿಕ ವಿಕೋಪ, ಅಗ್ನಿ ಅವಘಡ ಮೊದಲಾದ ತುರ್ತು ಸಂದರ್ಭದಲ್ಲಿ ಸಹಾಯಕ್ಕೆ ಮೊರೆಯಿಡಬಹುದಾಗಿದೆ. ಈ ಆ್ಯಪ್ ನಲ್ಲಿನ ಪ್ಯಾನಿಕ್ ಬಟನ್ ಒತ್ತಿದರೆ, ಇದು ಆ್ಯಪ್ ಬಳಕೆದಾರರ ಸ್ಥಳ ಗುರುತು ಸಹಿತ ತುರ್ತು ಕರೆ, ಸಂದೇಶ ರವಾನಿಸುತ್ತದೆ. ತುರ್ತು ಪ್ರತಿಕ್ರಿಯಾ ಕೇಂದ್ರಕ್ಕೆ ಕರೆ ರವಾನೆಯಾಗುವುದರ ಜೊತೆ, ಸಮೀಪದಲ್ಲಿರುವ ಸ್ವಯಂಸೇವಾ ಕಾರ್ಯಕರ್ತರು, ತಮ್ಮ ಕುಟುಂಬದವರಿಗೆ ಜಿಪಿಎಸ್ ಮಾಹಿತಿ ಒದಗಿಸುತ್ತದೆ. ತುರ್ತು ಪ್ರತಿಕ್ರಿಯಾ ಕೇಂದ್ರ ಹತ್ತಿರದಲ್ಲಿದ್ದ ಪೊಲೀಸರಿಗೆ ವಿಷಯ ತಲುಪಿಸಿ, ಅವರು ಘಟನಾ ಸ್ಥಳಕ್ಕೆ ಶೀಘ್ರ ತಲುಪಿ ನೆರವು ನೀಡಲಿದ್ದಾರೆ.





## ಸ್ವ ರಕ್ಷಣಾ ಉಪಾಯಗಳು:

- ಅಪಾಯದಲ್ಲಿ ಸಿಲುಕುವ ಮುನ್ಸೂಚನೆ ಕಂಡು ಬಂದ ಕೂಡಲೇ ಆ ಜಾಗದಿಂದ ಆದಷ್ಟು ಬೇಗ ಹೊರಡಬೇಕು.
- ತಡರಾತ್ರಿಯಲ್ಲಿ ಒಬ್ಬರೇ ಪ್ರಯಾಣಿಸುವ ಸಂದರ್ಭ ಬಂದಲ್ಲಿ ಮೊಬೈಲ್ ಫುಲ್ ಚಾರ್ಜ್ ಮಾಡಿಕೊಳ್ಳಬೇಕು.
- ಸ್ವ ರಕ್ಷಣಾ ವಿದ್ಯೆಯನ್ನು ಕಲಿತಿದ್ದಲ್ಲಿ ಧೈರ್ಯವಾಗಿ ಅದನ್ನು ಉಪಯೋಗಿಸಿ. ಧೈರ್ಯ ತೋರಿಸಿದರೆ ಯಾರಾದರೂ ಎದರುತ್ತಾರೆ.
- ಆತ್ಮ ರಕ್ಷಣೆಗಾಗಿ ಪೆಪ್ಪರ್ ಸ್ಪ್ರೇ, ಬ್ಯಾಗ್‌ನಲ್ಲಿ ಇರಿಸಿಕೊಳ್ಳಬಹುದಾದಂತಹ ರಕ್ಷಣಾ ಆಯುಧಗಳನ್ನು ಜೊತೆಯಲ್ಲಿ ಯಾವಾಗಲು ಇಟ್ಟುಕೊಳ್ಳಿ.
- ಅಪಾಯದಲ್ಲಿ ಸಿಲುಕಿದ್ದೇನೆ ಎಂದೆನಿಸಿದ ಕೂಡಲೇ ಎಷ್ಟು ಸಾಧ್ಯವೋ ಅಷ್ಟು ಜೋರಾಗಿ ಸಹಾಯಕ್ಕಾಗಿ ಕೂಗಿಕೊಳ್ಳಿ.
- ಸ್ವತಃ ನೀವೇ ವಾಹನವನ್ನು ಚಲಾಯಿಸಿಕೊಂಡು ಹೋಗುತ್ತಿದ್ದಲ್ಲಿ, ಯಾವುದೇ ಕಾರಣಕ್ಕೂ ನಿರ್ಜನ ಪ್ರದೇಶಗಳಲ್ಲಿ ವಾಹನವನ್ನು ನಿಲ್ಲಿಸಬೇಡಿ.
- ಅಪರಿಚಿತರು ನೀಡುವ ಆಹಾರ ಪದಾರ್ಥ, ಪಾನೀಯಗಳನ್ನು ಸೇವಿಸಬೇಡಿ. ಅದು ಅಂಗಡಿಯಲ್ಲಿ ಸಿಗುವ ಪದಾರ್ಥವಾಗಿದ್ದರೂ ಕೂಡ ಬೇಡ.
- ತಾವು ಮನೆಗೆ ತಲುಪುವುದು ತಡವಾದಲ್ಲಿ, ಮನೆಯವರಿಗೆ ತಾವಿರುವ ಸ್ಥಳದ ಮಾಹಿತಿಯನ್ನು ಮರೆಯದೇ ನೀಡಿ.
- ನೆಟ್‌ವರ್ಕ್ ಸಿಗದ ನಿರ್ಜನ ಪ್ರದೇಶಗಳಿಗೆ ಒಬ್ಬರೇ ಖಂಡಿತಾ ಹೋಗಬೇಡಿ.





downloaded from: www.kpscvaani.com



> ಆ್ಯಪ್ ಬಳಸುವಷ್ಟರಲ್ಲೇ ಅಪಾಯ ಇನ್ನಷ್ಟು ಸನ್ನಿಹಿತವಾಗಿರಬಹುದು. ಆಗ ಚಿಲ್ಲಾ ಆ್ಯಪ್ ನೆರವಿಗೆ ಬರಲಿದೆ. ಜೋರಾಗಿ ಕೂಗುವ ಮೂಲಕ ಈ ಆ್ಯಪ್ ಸಕ್ರಿಯಗೊಳಿಸಬಹುದಾಗಿದೆ. ಈ ಆ್ಯಪ್ ತಕ್ಷಣ ಪೋಷಕರಿಗೆ ತುರ್ತು ಸಂದೇಶ ರವಾನಿಸುತ್ತದೆ. ಪವರ್ ಬಟನ್ ಅನ್ನು ಐದಾರು ಬಾರಿ ಒತ್ತಿದಲ್ಲಿ ಈ ಆ್ಯಪ್‌ನಲ್ಲಿ ದಾಖಲಿಸಿರುವ ಸಂಖ್ಯೆಗಳಿಗೆ ತುರ್ತು ಸಂದೇಶ ರವಾನೆಯಾಗುತ್ತದೆ.

ಮಹಾತ್ಮಾ ಗಾಂಧಿ ಅವರ ರಾಮರಾಜ್ಯದ ಕನಸು ನನಸಾಗಲು ಜನರ ಮನಸ್ಸಿನಲ್ಲಿ ಪರಿವರ್ತನೆ ಅತ್ಯಗತ್ಯ. ಹೆಣ್ಣು ಮಕ್ಕಳ ಸುರಕ್ಷತೆಗೆ ಸರ್ಕಾರದ ಕ್ರಮಗಳ ಜೊತೆಗೆ ಆಧುನಿಕ ತಂತ್ರಜ್ಞಾನ ಕೂಡ ನೆರವಾಗಬಲ್ಲವಾಗಿದೆ. ಸರ್ಕಾರದ ತಂತ್ರಾಂಶದ ಜೊತೆಗೆ ಇತರ ಆ್ಯಪ್‌ಗಳೂ ಅಪಾಯದ ಸಂದರ್ಭಗಳಲ್ಲಿ ಸಂದೇಶ ನೀಡಿ ರಕ್ಷಿಸಬಲ್ಲವಾಗಿವೆ. ಇತರ ಆ್ಯಪ್‌ಗಳ ಮಾಹಿತಿ ಇಲ್ಲಿದೆ :

ಮೈ ಸೇಫ್ಟಿ ಪಿನ್ : ಈ ಆ್ಯಪ್‌ನ ನಕ್ಷೆಯಲ್ಲಿರುವ ಪಿನ್, ಸ್ಥಳದ ಸುರಕ್ಷತೆಯ ಶ್ರೇಯಾಂಕದ ಮಾಹಿತಿ ನೀಡುತ್ತದೆ. ಜಿಪಿಎಸ್ ಟ್ರ್ಯಾಕಿಂಗ್ ಮೂಲಕ ರಿಯಲ್ ಟೈಮ್ ಲೊಕೇಷನ್ ವಿವರವನ್ನು ಹತ್ತಿರದವರಿಗೆ ತಲುಪಿಸುತ್ತದೆ.

ಸ್ಮಾರ್ಟ್ 24•7 : ಆ್ಯಪ್‌ನಲ್ಲಿರುವ ಪ್ಯಾನಿಕ್ ಬಟನ್ ಕ್ಲಿಕ್ ಮಾಡಿದರೆ ಪೊಲೀಸರಿಗೆ ಕರೆ ಹೋಗುತ್ತದೆ. ಈ ಆ್ಯಪ್ ಸಹ ನೀಡಿರುವ ತುರ್ತು ಸಂದರ್ಭದ ಸಂಖ್ಯೆಗಳಿಗೆ ಕರೆ ಮಾಡುವ ಅವಕಾಶ ಒದಗಿಸಿದೆ.

ಎಸ್ ಓ ಎಸ್ – ಸ್ಟೇ ಸೇಫ್ : ಈ ಆ್ಯಪ್ ಬಳಕೆದಾರರ ಸ್ನೇಹಿತರು, ಬಂಧು ಬಾಂಧವರಿಗೆ ತಕ್ಷಣ ಸಂದೇಶ ರವಾನಿಸುತ್ತದೆ. ಮೊಬೈಲ್ ಅಲುಗಾಡಿಸಿದರೆ ಸಾಕು ಎಸ್ ಓ ಎಸ್ ಸಂದೇಶ ರವಾನೆಯಾಗುತ್ತದೆ. ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲೂ ಈ ಆ್ಯಪ್ ನೆರವಾಗಬಲ್ಲದಾಗಿದೆ.

ರೆಸ್ಕ್ಯೂಯರ್ : ಈ ಆ್ಯಪ್‌ನಲ್ಲಿರುವ ಎಮರ್ಜೆನ್ಸಿ ಗುಂಡಿ ಒತ್ತಿದರೆ ಗೂಗಲ್ ಲೊಕೇಷನ್ ಸಹಿತ ಸಂಪರ್ಕ ಸಂಖ್ಯೆಯ ಪಟ್ಟಿ ಹಾಗೂ ಫೇಸ್ ಬುಕ್‌ನಲ್ಲಿರುವ ಐವರಿಗೆ ಸಂದೇಶ ರವಾನೆಯಾಗುತ್ತದೆ.

ಬಿ ಸೇಫ್ : ಈ ಆ್ಯಪ್‌ನಲ್ಲಿನ ಫಾಲೋ ಮಿ ಫೀಚರ್ ಜಿಪಿಎಸ್ ಬಳಸಿ, ಆ್ಯಪ್ ಬಳಕೆದಾರರ ವರ್ಚ್ಯುಯಲ್ ಟ್ರ್ಯಾಕಿಂಗ್ ಮಾಡುತ್ತದೆ. ಫೇಕ್ ಕಾಲ್ ಮತ್ತು ಟೈಮ್ ಅಲರಾಂ ಫೀಚರ್‌ಗಳು ಸ್ಥಳದ ಗುರುತನ್ನು ಹತ್ತಿರದವರಿಗೆ ತಕ್ಷಣವೇ ರವಾನಿಸುತ್ತದೆ.

ಟೆಲ್ ಟೇಲ್ : ಬಸ್, ಆಟೋ ಮೊದಲಾದ ಸಾರ್ವಜನಿಕ ವಾಹನಗಳಲ್ಲಿ ಅಳವಡಿಸಲಾಗಿರುವ ಜಿಪಿಎಸ್ ಆಧರಿಸಿ ಮೊಬೈಲ್‌ನಲ್ಲಿ ನಮೂದಿಸಿರುವ ಸಂಪರ್ಕ ಸಂಖ್ಯೆಗಳಿಗೆ ಎಚ್ಚರಿಕೆ ಸಂದೇಶ ರವಾನಿಸುತ್ತದೆ. ಈ ಆ್ಯಪ್ ಇರುವ ಮತ್ತೊಬ್ಬರಿಗೆ ಆ್ಯಪ್ ಮೂಲಕವೇ ಸಂದೇಶ ರವಾನಿಸುತ್ತದೆ.

ಅಲ್ಲದೇ ನಾಗರಿಕರು ಕೂಡ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲು ಸಿಟಿಜನ್ ಕಾಪ್ ಎಂಬ ಆ್ಯಪ್ ಇದೆ. ಇದರಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಬಹುದಾಗಿದೆ. ಈ ಆ್ಯಪ್ ನಲ್ಲಿನ ತುರ್ತು ಸಂದೇಶ ರವಾನಿಸುವ ಲಕ್ಷ್ಮಣ ರೇಖಾ ಫೀಚರ್ ಅನ್ನು ಮಹಿಳೆಯರು ತುರ್ತು ಸಂದರ್ಭಗಳಲ್ಲಿ ಬಳಸಬಹುದಾಗಿದೆ.

ಅಪಾಯದ ಸಂದರ್ಭಗಳಲ್ಲಿ ಆ್ಯಪ್‌ಗಳನ್ನು ತೆರೆದು ಅದರಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳುವುದು ಎಲ್ಲ ಸನ್ನಿವೇಶಗಳಲ್ಲೂ ಸಾಧ್ಯವಾಗದೇ ಇರಬಹುದು. ಆ್ಯಪ್ ಬಳಸುವಷ್ಟರಲ್ಲೇ ಅಪಾಯ ಇನ್ನಷ್ಟು ಸನ್ನಿಹಿತವಾಗಿರಬಹುದು. ಆಗ ಚಿಲ್ಲಾ ಆ್ಯಪ್ ನೆರವಿಗೆ ಬರಲಿದೆ. ಜೋರಾಗಿ ಕೂಗುವ ಮೂಲಕ ಈ ಆ್ಯಪ್ ಸಕ್ರಿಯಗೊಳಿಸಬಹುದಾಗಿದೆ. ಈ ಆ್ಯಪ್ ತಕ್ಷಣ ಪೋಷಕರಿಗೆ ತುರ್ತು ಸಂದೇಶ ರವಾನಿಸುತ್ತದೆ. ಪವರ್ ಬಟನ್ ಅನ್ನು ಐದಾರು ಬಾರಿ ಒತ್ತಿದಲ್ಲಿ ಈ ಆ್ಯಪ್‌ನಲ್ಲಿ ದಾಖಲಿಸಿರುವ ಸಂಖ್ಯೆಗಳಿಗೆ ತುರ್ತು ಸಂದೇಶ ರವಾನೆಯಾಗುತ್ತದೆ.

ಗತಿಸಿ ಹೋದ ಪ್ರಮಾದ, ಲೋಪದೋಷಗಳನ್ನು ಸರಿಪಡಿಸಲು ಸಾಧ್ಯವಿಲ್ಲ ಎಂಬುದು ಒಪ್ಪಲೇಬೇಕಾದ ಸತ್ಯ. ಆದರೆ ಮುಂದೆ ಘಟಿಸಬಹುದಾದ, ನಡೆಯಬಹುದಾದ ಘಟನಾವಳಿಗಳನ್ನು ತಪ್ಪಿಸುವ ಅವಕಾಶ ನಮ್ಮ ಪಾಲಿಗೆ ಇದ್ದೇ ಇದೆ. ತಂತ್ರಜ್ಞಾನ ಇದಕ್ಕೆ ಮುಕ್ತ ಅವಕಾಶ ಮಾಡಿಕೊಟ್ಟಿದೆ. ಪ್ರತಿಯೊಬ್ಬರೂ ಆಧುನಿಕ ತಂತ್ರಜ್ಞಾನ ಬಳಕೆ ಮಾಡುವ ಕಲೆಯನ್ನು ಅಳವಡಿಸಿಕೊಂಡು ಜಾಗೃತಗೊಂಡರೆ ಇಂತಹ ಸಾಮಾಜಿಕ ಅನಿಷ್ಟ ಘಟನಾವಳಿಗಳಿಗೆ ಕಡಿವಾಣ ಹಾಕಲು ಸಾಧ್ಯವಿದೆ. ನಾಗರಿಕ ಸಮಾಜ ಎಚ್ಚೆತ್ತುಕೊಂಡರೆ ಪುಂಡುಪೋಕರಿಗಳಿಗೆ ತಕ್ಕ ಶಾಸ್ತಿ ಮಾಡಲು ಸಾಧ್ಯವಿದೆ, ಅವಕಾಶವೂ ಇದೆ. ತಂತ್ರಜ್ಞಾನ ಈ ನಿಟ್ಟಿನಲ್ಲಿ ನಾಗರಿಕ ಸಮುದಾಯಕ್ಕೆ ವರವಾಗಿದೆ. ■



# ಟಿ ವಿ ಕಾರ್ಯಕ್ರಮಗಳ ವಿರುದ್ಧ ದೂರು ನೀಡಲು ನಿಯಂತ್ರ ಕೊಠಡಿ ಸ್ಥಾಪನೆ

ಇಂದಿನ ಆಧುನಿಕ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಟಿವಿ ಇಲ್ಲದ ಮನೆ ತುಂಬಾ ಕಡಿಮೆ. ಆ ನಿಟ್ಟಿನಲ್ಲಿ ಟಿವಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದೆ. ಹಾಗಾಗಿ ಅವುಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಹೆಚ್ಚು ಜನರನ್ನು ತಲುಪುತ್ತದೆ. ಟಿವಿ ವಾಹಿನಿಗಳಲ್ಲಿ ಪ್ರಸಾರವಾಗುವ ಕೆಲವು ಕಾರ್ಯಕ್ರಮಗಳು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ತರುವಂತಿದ್ದರೆ, ಅದು ಮಿಂಚಿನ ವೇಗದಲ್ಲಿ ಪ್ರಸಾರವಾಗುವುದರಿಂದ ಅದು ಸಮಾಜದ ಮೇಲೆ ಕೆಟ್ಟ ಪರಿಣಾಮ ಕೂಡ ಬೀರುತ್ತದೆ.

ಇಂತಹ ಕಾರ್ಯಕ್ರಮಗಳ ಬಗ್ಗೆ ದೂರು ನೀಡಬೇಕೆಂದುಕೊಳ್ಳುವವರಿಗೆ ದೂರನ್ನು ಯಾರಿಗೆ ನೀಡಬೇಕು ಎಂಬುದು ತಿಳಿಯದೆ, ಇಂತಹ ಕಾರ್ಯಕ್ರಮ ಪ್ರಸಾರ ಮಾಡಿದ ವಾಹಿನಿಯವರನ್ನು ಶಪಿಸಿಕೊಂಡು ಸುಮ್ಮನಾಗುತ್ತಾರೆ. ಆದ್ದರಿಂದ ಸರ್ಕಾರವು ಕೇಬಲ್ ಟಿವಿ ಮತ್ತು ಉಪಗ್ರಹ ಟಿವಿ ವಾಹಿನಿಗಳಲ್ಲಿ ಪ್ರಸಾರವಾಗುವ ಸಾರ್ವಜನಿಕರ ಹಿತಾಸಕ್ತಿಗೆ ಧಕ್ಕೆ ತರುವಂತಹ ಕಾರ್ಯಕ್ರಮಗಳು ಮತ್ತು ಜಾಹೀರಾತುಗಳ ಬಗ್ಗೆ ಸಾರ್ವಜನಿಕರು ದೂರು ನೀಡಲು ಅನುಕೂಲವಾಗುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ದಿನದ 24 ತಾಸು ಕಾರ್ಯನಿರ್ವಹಿಸುವಂತಹ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದೆ.

ಆದ್ದರಿಂದ ಇನ್ನು ಮುಂದೆ ಕೇಬಲ್ ಟಿವಿ ಮತ್ತು ಉಪಗ್ರಹ ಟಿವಿ ವಾಹಿನಿಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಲ್ಲಿ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ರೆಗ್ಯುಲೇಷನ್) ಆ್ಯಕ್ಟ್ 1995 ರ ಪರಿಚ್ಛೇದ 6 ರಡಿ ಕಾರ್ಯಕ್ರಮ ಸಂಹಿತೆ, ಪರಿಚ್ಛೇದ 7 ರಡಿ ಜಾಹೀರಾತು ಸಂಹಿತೆ ಅಥವಾ ಯಾವುದೇ ಉಪಬಂಧಗಳ ಉಲ್ಲಂಘನೆ ಕಂಡು ಬಂದಲ್ಲಿ ಸಾರ್ವಜನಿಕರು 24 x 7 ನಿಯಂತ್ರಣ ಕೊಠಡಿಗೆ ತಮ್ಮ ದೂರುಗಳನ್ನು ಸ್ಥಿರ ಸಂಖ್ಯೆ– 080–22028013 ದೂರವಾಣಿ ಮೂಲಕ, ಅಥವಾ 9480841212 ಕ್ಕೆ ವಾಟ್ಸ್ ಆ್ಯಪ್ ಮೂಲಕ ಅಥವಾ ಇ–ಮೇಲ್ complaintsontelevision@gmail.com ಮೂಲಕ ದೂರನ್ನು ಸಲ್ಲಿಸಬಹುದಾಗಿದೆ.

ಸದಭಿರುಚಿ ಅಥವಾ ಸಭ್ಯತೆಯ ವಿರುದ್ಧ ಅಪರಾಧ, ಮಿತ್ರ ರಾಷ್ಟ್ರಗಳ ಟೀಕೆ, ಧರ್ಮ ಅಥವಾ ಸಮುದಾಯ ಅಥವಾ ಧಾರ್ಮಿಕ ಸಮೂಹಗಳನ್ನು ನಿಂದಿಸುವ ಮಾತುಗಳು ಅಥವಾ ದೃಶ್ಯಗಳು ಅಥವಾ ಕೋಮು ಭಾವನೆಗಳನ್ನು ಉತ್ತೇಜಿಸುವುದು, ಯಾವುದೇ ಅಸಹ್ಯಕರ, ಮಾನನಷ್ಟ, ಉದ್ದೇಶ ಪೂರ್ವಕ, ಸುಳ್ಳು, ಸೂಚನಾತ್ಮಕ ವ್ಯಂಗ್ಯೋಕ್ತಿ ಮತ್ತು ಅರ್ಧ ಸತ್ಯ, ಹಿಂಸೆಯನ್ನು ಉತ್ತೇಜಿಸುವ ಅಥವಾ ಪ್ರಚೋದಿಸುವ ಅಥವಾ ಕಾನೂನು ಮತ್ತು ಶಿಸ್ತುಪಾಲನೆ ಕೆಣಕುವುದು ಅಥವಾ ರಾಷ್ಟ್ರ ವಿರೋಧಿ ಭಾವನೆಗಳನ್ನು ಉತ್ತೇಜಿಸುವುದು, ನ್ಯಾಯಾಲಯ ನಿಂದನೆಗೆ ಕಾರಣವಾಗುವ, ವಿಷಯಗಳು ಪರಿಚ್ಛೇದ 6 ರ ಕಾರ್ಯಕ್ರಮ ಸಂಹಿತೆಯಡಿ ಉಲ್ಲಂಘನೆಯಾಗುತ್ತದೆ.

ಹಾಗೆಯೇ ಕಾನೂನಿಗೆ ಪೂರಕವಾಗಿರದ, ಚಂದಾದಾರರ ನೈತಿಕತೆ, ಸಭ್ಯತೆ ಮತ್ತು ಧಾರ್ಮಿಕ ಭಾವನೆಗಳಿಗೆ ಕುಂದುಂಟು ಮಾಡುವ, ಯಾವುದೇ ಮತ, ಜಾತಿ, ವರ್ಣ, ಕೋಮು ಮತ್ತು ರಾಷ್ಟ್ರೀಯತೆಯನ್ನು ಅವಹೇಳನ ಮಾಡುವಂತಹ, ಭಾರತ ಸಂವಿಧಾನದ ಯಾವುದೇ ಉಪಬಂಧದ ವಿರುದ್ಧ, ಜನರನ್ನು ಅಪರಾಧಕ್ಕೆ ಪ್ರಚೋದಿಸುವಂತಹ, ಅಶಾಂತಿ ಅಥವಾ ಹಿಂಸೆಗೆ ಅಥವಾ ಯಾವುದೇ ರೀತಿಯ ಅಶ್ಲೀಲತೆಗೆ ಕಾರಣವಾಗುವಂತಹ, ಅಪರಾಧೀಕರಣ ಬಯಸುವಂತೆ ಬಿಂಬಿಸುವ, ರಾಷ್ಟ್ರೀಯ ಲಾಂಛನ ಅಥವಾ ಸಂವಿಧಾನದ ಯಾವುದೇ ಭಾಗ ಅಥವಾ ವ್ಯಕ್ತಿ ಅಥವಾ ರಾಷ್ಟ್ರೀಯ ನಾಯಕರ ವ್ಯಕ್ತಿತ್ವ ಅಥವಾ ರಾಷ್ಟ್ರದ ಗಣ್ಯರ ಶೋಷಣೆಯಾಗುವಂತಹ ವಿಷಯಗಳನ್ನು ಉಲ್ಲಂಘನೆ ಎಂದು ಪರಿಚ್ಛೇದ 7 ರ ಜಾಹೀರಾತು ಸಂಹಿತೆಯಡಿ ಪರಿಗಣಿಸಲಾಗುತ್ತದೆ.

ಇಂತಹ ಉಲ್ಲಂಘನೆಯ ಕಾರ್ಯಕ್ರಮ ಮತ್ತು ಜಾಹೀರಾತುಗಳೇನಾದರು ಕೇಬಲ್ ಟಿವಿ ಮತ್ತು ಉಪಗ್ರಹ ಟಿವಿ ವಾಹಿನಿಗಳಲ್ಲಿ ಪ್ರಸಾರವಾಗುವುದು ಕಂಡುಬಂದಲ್ಲಿ ಸಾರ್ವಜನಿಕರು ಕೂಡಲೇ ನಿಯಂತ್ರಣ ಕೊಠಡಿಗೆ ತಮ್ಮ ದೂರನ್ನು ಸಲ್ಲಿಸಬಹುದು. ನಿಖರತೆ ಮತ್ತು ಸ್ಪಷ್ಟತೆಗಾಗಿ ಸ್ಥಿರ ದೂರವಾಣಿಗೆ ಬರುವ ಕರೆಗಳನ್ನು ಧ್ವನಿಗ್ರಹಣ ಮಾಡಿಕೊಳ್ಳಲಾಗುವುದು. ಸರ್ಕಾರ ಸ್ಥಾಪಿಸಿರುವ ಈ ನಿಯಂತ್ರಣ ಕೊಠಡಿಗೆ ತಮ್ಮ ದೂರುಗಳನ್ನು ಸಲ್ಲಿಸುವ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಸಾರ್ವಜನಿಕರು ಮುಂದಾಗಬೇಕು. ■



downloaded from: www.kpscvaani.com



## ರಾಷ್ಟ್ರೀಯ ಪೊಲೀಸ್ ಸ್ಮಾರಕದಲ್ಲಿ

# ರಾಜ್ಯ ಕೆಎಸ್‌ಆರ್‌ಪಿ ಪಡೆಯಿಂದ ಕವಾಯತು

ಸಿ.ಎಂ.ನವಿಕ

ಆ ನೆಲದಲ್ಲಿ ಹೆಜ್ಜೆ ಇಟ್ಟರೆ, ಅವರ ತ್ಯಾಗ ಬಲಿದಾನ ನೆನಪಾಗುತ್ತೆ... ಮನಸ್ಸು ಇಟ್ಟು ಆಲಿಸಿದರೆ ದೇಶಕ್ಕಾಗಿ ಪ್ರಾಣ ಅರ್ಪಿಸಿದ ಪೊಲೀಸರ ಶೌರ್ಯದ ಮಾತುಗಳು ಕೇಳಿದಂತೆ ಭಾಸವಾಗುತ್ತದೆ. ನಾಳೆಯ ಉತ್ತಮ, ಸುಭದ್ರ, ಸುರಕ್ಷಿತ ಭವಿಷ್ಯಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದವರ ಕಥೆ ಇದು. ಅಲ್ಲಿ ಹೆಚ್ಚು ಕಡಿಮೆ 35 ಸಾವಿರ ಪೊಲೀಸರ ಹೆಸರುಗಳು ಕಂಡು ಬರುತ್ತವೆ. ಇವರೆಲ್ಲರೂ ಭಾರತ ದೇಶದ ನಾನಾ ಭಾಗಗಳಲ್ಲಿ, ನಾನಾ ಪೊಲೀಸ್ ಪಡೆಗಳಲ್ಲಿ ಕರ್ತವ್ಯ ನಿರ್ವಹಿಸಿ, ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತವರು. ಇವರೆಲ್ಲರ ನೆನಪು ಸದಾ ನಮ್ಮ ಜೊತೆ ಶಾಶ್ವತವಾಗಿರಬೇಕು ಅನ್ನುವ ಕಲ್ಪನೆಯಲ್ಲಿ ಮೂಡಿ ಬಂದಿರುವುದೇ ಈ ಸ್ಮಾರಕ.

ಹುತಾತ್ಮ ಪೊಲೀಸರ ನೆನಪಿಗಾಗಿ ನವದೆಹಲಿಯ ಚಾಣಕ್ಯಪುರಿಯಲ್ಲಿ ರಾಷ್ಟ್ರೀಯ ಪೊಲೀಸ್ ಸ್ಮಾರಕವೊಂದನ್ನು



ನಿರ್ಮಾಣ ಮಾಡಲಾಗಿದೆ. ಕೇಂದ್ರ ಸರ್ಕಾರ 2018ರಲ್ಲಿ ಈ ಸ್ಮಾರಕವನ್ನು ನಿರ್ಮಾಣ ಮಾಡಿದ್ದು, ಪ್ರಧಾನಿ ನರೇಂದ್ರ ಮೋದಿಯವರು ಸ್ಮಾರಕವನ್ನು ಉದ್ಘಾಟಿಸಿದ್ದಾರೆ.

ಕೇಂದ್ರ ಸರ್ಕಾರ ಮುತುವರ್ಜಿಯಿಂದ ನಿರ್ಮಾಣ ಮಾಡಿರುವ ಈ ಸ್ಮಾರಕದ ಆವರಣದಲ್ಲಿ ಪ್ರತಿದಿನವೂ ಕೂಡ ಪೊಲೀಸ್ ಚಟುವಟಿಕೆಗಳು ನಡೆಯಬೇಕು ಅನ್ನೋ ಉದ್ದೇಶದಿಂದ ಕೇಂದ್ರ ಗೃಹ ಇಲಾಖೆ ಪ್ರತಿ ರಾಜ್ಯದ ಸಶಸ್ತ್ರ ಪೊಲೀಸ್ ಮೀಸಲು ಪಡೆಯ ತುಕಡಿಯೂ ಈ ಸ್ಮಾರಕದ ಸ್ಥಳಕ್ಕೆ ಬಂದು, ಒಂದು ದಿನ ಕವಾಯತು ಪ್ರದರ್ಶನ ನೀಡಬೇಕು ಎಂದು ಆದೇಶ ಹೊರಡಿಸಿದೆ.

ಅದರಂತೆ ಕರ್ನಾಟಕ ರಾಜ್ಯದ ಪೊಲೀಸ್ ಪಡೆಯ ಕೆಎಸ್‌ಆರ್‌ಪಿ ತುಕಡಿ ಕೂಡ ನವೆಂಬರ್ ತಿಂಗಳಲ್ಲಿ ಇಲ್ಲಿಗೆ ಬಂದು ಸುಮಾರು 25 ನಿಮಿಷಗಳ ಕಾಲ ಕವಾಯತು ಮಾಡಿತು. ಜೊತೆಗೆ ಹುತಾತ್ಮ ಪೊಲೀಸ್ ಸಿಬ್ಬಂದಿಗೆ ಕರ್ನಾಟಕ ರಾಜ್ಯ ಪೊಲೀಸರ ಪರವಾಗಿ ನಮನ ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕಿ ನೀಲಮಣಿ ಎನ್.ರಾಜು ಅವರು ಭಾಗಿಯಾಗಿ, ಪೊಲೀಸ್ ಸ್ಮಾರಕಕ್ಕೆ ನಮನ ಸಲ್ಲಿಸಿದರು. ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್ ಕುಮಾರ್, ಎಡಿಜಿಪಿ ಸಂಧು ಮುಂತಾದ ಹಿರಿಯ ಅಧಿಕಾರಿಗಳು ಕೂಡ ಭಾಗವಹಿಸಿ ಹುತಾತ್ಮರಿಗೆ ನಮನ ಸಲ್ಲಿಸಿದರು

**ಶೌರ್ಯದ ಗೋಡೆ :**

1947ರಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಪ್ರಾಣ ತ್ಯಾಗ ಮಾಡಿದ 34,844 ಮಂದಿ ಪೊಲೀಸ್ ಸಿಬ್ಬಂದಿಗೆ ನಮನ ಸಲ್ಲಿಸುವ ಸಲುವಾಗಿ ಅನಾವರಣಗೊಂಡ ಸ್ಮಾರಕ ಇದು. ನವದೆಹಲಿಯ ಚಾಣಕ್ಯಪುರಿಯಲ್ಲಿ 6.12 ಎಕರೆ ಪ್ರದೇಶದಲ್ಲಿ ಈ ಸ್ಮಾರಕ ತಲೆ ಎತ್ತಿದೆ. 30 ಅಡಿ ಎತ್ತರ ಹಾಗೂ 238 ಟನ್ ತೂಕದ ಕಪ್ಪು ಗ್ರಾನೈಟ್ ಶಿಲೆಯಲ್ಲಿ ಶೌರ್ಯದ ಗೋಡೆಯನ್ನು ಕೆತ್ತಲಾಗಿದೆ. ಈ ಗೋಡೆ ಎದುರು ಕವಾಯತ್ತನ್ನು ಪ್ರದರ್ಶಿಸಿ ಹುತಾತ್ಮರಾದ ಪೊಲೀಸರಿಗೆ ನಮನ ಸಲ್ಲಿಸಲಾಗುತ್ತದೆ.

ಇಲ್ಲಿಯೇ ನೆಲ ಅಂತಸ್ತಿನಲ್ಲಿ ಒಂದು ವಸ್ತುಸಂಗ್ರಹಾಲಯ ಕೂಡ ಇದೆ. ಕ್ರಿ.ಪೂ 310 ರಿಂದ ಕೌಟಿಲ್ಯನ ಕಾಲದ ಪೊಲೀಸ್ ವ್ಯವಸ್ಥೆ, ರಕ್ಷಣಾ ವ್ಯವಸ್ಥೆ, ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಈ ಸಂಗ್ರಹಾಲಯದಲ್ಲಿ ಉಲ್ಲೇಖ ಇದೆ. ಅಂದರೆ ಸುಮಾರು ಎರಡು ಸಾವಿರ ವರ್ಷಗಳ ಪೊಲೀಸ್ ಇತಿಹಾಸದ ಬಗ್ಗೆ ಇಲ್ಲಿ ವಿವರಿಸಲಾಗಿದೆ.

**ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯ ಉಲ್ಲೇಖ**

ಈ ವಸ್ತುಸಂಗ್ರಾಲಯದಲ್ಲಿ ದೇಶದಲ್ಲಿ ವಿವಿಧ ಕಡೆ ನಡೆದ ದೊಡ್ಡ ದೊಡ್ಡ ಪೊಲೀಸ್ ಕಾರ್ಯಾಚರಣೆಗಳ ಬಗ್ಗೆ ಉಲ್ಲೇಖ ಮಾಡಲಾಗಿದೆ. ಇದರಲ್ಲಿ ಮುಖ್ಯವಾಗಿ ಕರ್ನಾಟಕ ಮತ್ತು ತಮಿಳುನಾಡು ಭಾಗದಲ್ಲಿ ಜನರನ್ನು ಕಾಡಿದ್ದ ಕಾಡುಗಳ್ಳ ವೀರಪ್ಪನ್ ಅಂತ್ಯದ ಕಥೆ ಕೂಡ ಇದೆ. ವೀರಪ್ಪನ್ ಅಟ್ಟಹಾಸ, ಅವನತಿ, ಹುತಾತ್ಮರಾದ ಪೊಲೀಸ್ ಹಾಗೂ ಅರಣ್ಯ ಸಂರಕ್ಷಣಾ ಅಧಿಕಾರಿಗಳ ಪ್ರಾಣತ್ಯಾಗವನ್ನು ಇಲ್ಲಿ ವಿವರಿಸಲಾಗಿದೆ. ಅಂದಿನ ಎಸ್‌ಟಿಎಫ್ ಕಮಾಂಡರ್ ಆಗಿದ್ದ ಜ್ಯೋತಿ ಪ್ರಕಾಶ್ ಮಿರ್ಜಿ ಅವರ ನೇತೃತ್ವದ ತಂಡ ವೀರಪ್ಪನ್ ಅಂತ್ಯ ಕಾಣಿಸಿದನ್ನು ಕೂಡ ಇಲ್ಲಿ ಉಲ್ಲೇಖಿಸಲಾಗಿದೆ.





> ರಾಷ್ಟ್ರೀಯ ಪೊಲೀಸ್ ಸ್ಮಾರಕದ ಆವರಣದಲ್ಲಿ ಪ್ರತಿದಿನವೂ ಕೂಡ ಪೊಲೀಸ್ ಚಟುವಟಿಕೆಗಳು ನಡೆಯಬೇಕು ಅನ್ನೋ ಉದ್ದೇಶದಿಂದ ಕೇಂದ್ರ ಗೃಹ ಇಲಾಖೆ ಪ್ರತಿ ರಾಜ್ಯದ ಸಶಸ್ತ್ರ ಪೊಲೀಸ್ ಮೀಸಲು ಪಡೆಯ ತುಕಡಿಯೂ ಈ ಸ್ಮಾರಕದ ಸ್ಥಳಕ್ಕೆ ಬಂದು, ಒಂದು ದಿನ ಕವಾಯತು ಪ್ರದರ್ಶನ ನೀಡಬೇಕು ಎಂದು ಆದೇಶ ಹೊರಡಿಸಿದೆ.

ಇದರ ಜೊತೆ ಭಾರತದಲ್ಲಿ ನಡೆದ ವಿವಿಧ ಪೊಲೀಸ್ ಕಾರ್ಯಾಚರಣೆಗಳು ಅಂದರೆ ಸಂಸತ್ ಭವನದ ಮೇಲೆ ದಾಳಿ, ಅಕ್ಷರಧಾಮ ದೇವಾಲಯದ ಕಾರ್ಯಾಚರಣೆ, ಮುಂಬೈ ತಾಜ್ ಹೋಟೆಲ್ ಮೇಲೆ ನಡೆದ ಭಯೋತ್ಪಾದಕರ ದಾಳಿ, ಎನ್ ಎಸ್ ಜಿ ಪಡೆಯ ಕಾರ್ಯಾಚರಣೆ, ಅಲ್ಲಿ ಮಡಿದ ವೀರಯೋಧರ ಸಣ್ಣ ಸಣ್ಣ ಕಥೆಗಳು ಇಲ್ಲಿವೆ. ಸಾಲದ್ದಕ್ಕೆ ಅನಾದಿ ಕಾಲದ ಭಾರತದಿಂದ ಹಿಡಿದು ಆಧುನಿಕ ಭಾರತದವರೆಗೂ ಪೊಲೀಸ್ ಇಲಾಖೆಯಲ್ಲಿ ಆದ ಮಾರ್ಪಾಡುಗಳು, ಇಲಾಖೆಯಲ್ಲಿ ಬಳಸುವ ಆಯುಧಗಳ ಪ್ರದರ್ಶನ, ದೇಶದ ಪೊಲೀಸ್ ವ್ಯವಸ್ಥೆಯ ಮಾಹಿತಿ, ಇಲಾಖೆಯಲ್ಲಿ ಇರುವ ಪಡೆಗಳು, ಆ ಪಡೆಗಳಲ್ಲಿರುವ ರ್‍ಯಾಂಕ್‌ಗಳ ಬಗ್ಗೆ ಇಲ್ಲಿ ವಿವರಸಲಾಗಿದೆ.


ಅತ್ಯಂತ ಆಕರ್ಷಕವಾಗಿ ರೂಪಗೊಂಡಿರುವ ಈ ಸ್ಮಾರಕ ಇದೀಗ ನವ ದೆಹಲಿಯ ಪ್ರವಾಸಿತಾಣಗಳಲ್ಲಿ ಒಂದಾಗಿದೆ. ಶಾಲಾ ಮಕ್ಕಳು, ಇತರೆ ಪ್ರವಾಸಿಗಳು ನಿತ್ಯ ಇಲ್ಲಿಗೆ ಭೇಟಿ ನೀಡಿ ವೀಕ್ಷಣೆ ಮಾಡುತ್ತಾರೆ. ದೆಹಲಿಗೆ ಭೇಟಿ ನೀಡಿದರೆ ತಪ್ಪದೇ ದೇಶಭಕ್ತಿಯನ್ನು ಹೆಚ್ಚಿಸುವ ಈ ಸ್ಮಾರಕವನ್ನು ನೋಡಿ, ನಮ್ಮ ರಕ್ಷಣೆಗಾಗಿ ಹುತಾತ್ಮರಾದ ಮೊಲೀಸರಿಗೆ ನಮನ ಸಲ್ಲಿಸಿ ಬನ್ನಿ.





downloaded from: www.kpscvaani.com

# ಪದಬಂಧ-3



ವಿದ್ಯಾ ಎ. ಹಾಲಭಾವಿ

**ಎಡದಿಂದ ಬಲಕ್ಕೆ**

2. ತಾಮ್ರವೂ,ತವರವೂ ಸೇರಿ ಆದ ಮಿಶ್ರಲೋಹ ತಿರುವು ಮುರುವಾಗಿದೆ (2)
5. ಮಹಿಳೆಯ ರಕ್ಷಣೆಗಿರುವ ಪೋಲಿಸ್ ಆ್ಯಪ್(3)
6. ಒಳ್ಳೆಯ ಚರಿತ್ರೆಯುಳ್ಳವನು ಅಥವಾ ಸಂಪನ್ನ(4)
7. ಕಾಲೇಜ್ ವಿದ್ಯಾರ್ಥಿಗಳ ಕೌಶಲ್ಯವನ್ನು ಹೆಚ್ಚಿಸುವ ತರಬೇತಿ (6)
9. ಕಾಫಿನಾಡು ಎಂದು ಹೆಸರಾಗಿರುವ ಜಿಲ್ಲೆ(6)
11. ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ(4)
13. ಮಹಾತ್ಮೆ ಎಂದರ್ಥವೂ ಬರುವ ಭಸ್ಮ(3)
14. ಜವಾನನ ಸುತ್ತ ನೆರೆದ ಮಂದಿ (2)

**ಮೇಲಿಂದ ಕೆಳಕ್ಕೆ**

1. ಅನುಗ್ರಹವುಳ್ಳ ಶ್ರೇಷ್ಠನಾದ ಕವಿ(4)
3. ಆವರಣ ಚಿಹ್ನೆಯು ಕೃಷ್ಣನ ಸೋದರಮಾವನ ಹೆಸರೂ ಹೌದು (2)
4. ಹರಿಯ ಮುಂದಿರಿಸಿದ ಅಗಲವಾದ ತಟ್ಟೆ(4)
8. ಆನೆಗಳ ಗುಂಪಿನ ನಾಯಕ(3)
9. ಮರಣವಿಲ್ಲದೆ ದೀರ್ಘಕಾಲ ಬಾಳುವವನು(4)
10. ಸ್ಮಶಾನವನ್ನು ಹೀಗೂ ಹೇಳುವರು(4)
12. ಜನನಿ ನುಡಿದಿರುವ ಸತ್ಯ(2)

**ಉತ್ತರ**

**ಮೇಲಿಂದ ಕೆಳಕ್ಕೆ**
1.ವರಕವಿ 3.ಕಂಸ 4.ಹರಿವಾಣ 8.ಸಲಗ 9.ಚಿರಂಜೀವಿ
10.ರುದ್ರಭೂಮಿ 12.ನಿಜ

**ಎಡದಿಂದ ಬಲಕ್ಕೆ**
2.ಚುಕಂ 5.ಸುರಕ್ಷಾ 6.ಸಚ್ಚರಿತ 7.ವಿದ್ಯಾಸಿರಿ
9.ಚಿಕ್ಕಮಗಳೂರು 11.ಸಂಜೀವಿನಿ 13.ವಿಭೂತಿ
14.ಜನ

Published by : S N Siddaramappa, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com